# ಪ್ರಸಾದ

ಮಾಸಿಕ

ಸಂಪುಟ 38 ಸಂಚಿಕೆ 5 ಮೇ 2023



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮಾರಿಷಸ್‌ನ ಜೆಎಸ್‌ಎಸ್ ಅಕಾಡೆಮಿಗೆ ಮಾರಿಷಸ್‌ನ ಉಪಪ್ರಧಾನ ಮಂತ್ರಿಗಳಾದ ಶ್ರೀಮತಿ ಲೀಲಾದೇವಿ ಮೋಹನ್‌ರವರು ಭೇಟಿ ನೀಡಿದಾಗ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿ ಸನ್ಮಾನಿಸುತ್ತಿರುವುದು. ಡಾ. ಗೌತಮ್ ಯರ್ರಕುಲ, ಡಾ. ಜಯಶ್ರೀ ವೈಜನಾಥಪ್ಪ, ಡಾ. ಪ್ರವೀಣ್ ಮೊಹದೇಬ್, ಡಾ. ಬಿ. ಸುರೇಶ್, ಶ್ರೀ ಕೆ.ಪಿ. ನವೀನ್, ಶ್ರೀ ಎಸ್.ಪಿ. ಮಂಜುನಾಥ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಪುಟ್ಟಸುಬ್ಬಪ್ಪ, ಡಾ. ಆಶಿಶ್ ಡಿ. ವಾಧ್ವಾನಿಯವರುಗಳಿದ್ದಾರೆ (2 ಮೇ 2023)



ಮಾರಿಷಸ್‌ನ ಜೆಎಸ್‌ಎಸ್ ಅಕಾಡೆಮಿಗೆ ಮಾರಿಷಸ್‌ನ ಹಂಗಾಮಿ ಅಧ್ಯಕ್ಷರಾಗಿದ್ದ, ಮಾಜಿ ಉಪಾಧ್ಯಕ್ಷರಾದ ಶ್ರೀ ಬಾರ್ಲೆನ್ ವ್ಯಾಪೂರಿಯವರು ಭೇಟಿ ನೀಡಿದಾಗ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು. ಡಾ. ಪ್ರವೀಣ್ ಮೊಹದೇಬ್, ಡಾ. ಬಿ. ಸುರೇಶ್, ಶ್ರೀ ಕೆ.ಪಿ. ನವೀನ್, ಶ್ರೀ ಎಸ್.ಪಿ. ಮಂಜುನಾಥ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಪುಟ್ಟಸುಬ್ಬಪ್ಪ, ಡಾ. ಆಶಿಶ್ ಡಿ. ವಾಧ್ವಾನಿಯವರುಗಳಿದ್ದಾರೆ (2 ಮೇ 2023)

# ಪ್ರಸಾದ

**ಸಂಪುಟ 38 : ಸಂಚಿಕೆ 5** **ಮೇ 2023**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಪರಮಪೂಜ್ಯ ಜಗದ್ಗುರುಗಳವರು ಮಾರಿಷಸ್‌ನಲ್ಲಿ ಅಧ್ಯಕ್ಷರಾದ ಶ್ರೀ ಪೃಥ್ವಿರಾಜ್ ಸಿಂಗ್ ರೋಪನ್‌ರವರನ್ನು ಭೇಟಿಮಾಡಿದಾಗ ಅವರೊಂದಿಗೆ ಚರ್ಚಿಸುತ್ತಿರುವುದು. (2 ಮೇ 2023)


**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 8

ನಿರ್ಲಿಪ್ತ 10
**ಶ್ರೀ ಸಿದ್ಧೇಶ್ವರ ಸ್ವಾಮಿಗಳು**
(ಪ್ರವಚನಸಾರ)

ಸಂತೆಯೊಳಗೊಂದು ಮನೆಯ ಮಾಡಿ..... 14
**ಡಾ. ಎಂ.ಎನ್. ನಂದೀಶ್ ಹಂಚೆ**

ಶಬರಶಂಕರ ವಿಲಾಸ–ಟೀಕು 18
**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**
(ವೀರಶೈವ ಟೀಕು ಸಾಹಿತ್ಯ ಸರಣಿ)

ಬಸವಾದಿ ಪ್ರಮಥರ ಪಾರಾಯಣ ಸ್ತೋತ್ರ 21
**ಡಾ. ವೈ.ಸಿ. ಭಾನುಮತಿ**
(ವೀರಶೈವ ಅಪ್ರಕಟಿತ ಕೃತಿಮಾಲಿಕೆ)

ಮಿರ್ಲೆ ಗ್ರಾಮದ ದೇವಾಲಯಗಳ ಚಾರಿತ್ರಿಕ ಅಧ್ಯಯನ 29
**ಡಾ. ಎಸ್.ಜಿ. ರಾಮದಾಸ ರೆಡ್ಡಿ**
(ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಲಿಕೆ)

ಎನ್ನ ಜೀವಾತ್ಮ ಜಂಗಮಾತ್ಮದಲ್ಲೊಂದಾದಾಗ... 38
**ವೆಂಕಟೇಶ ಕೆ. ಜನಾದ್ರಿ**

ಹುಲ್ಲಹಳ್ಳಿ ಶಾಂತವೀರ ದೇಶಿಕ ವಿರಚಿತ 42
“ಶಿವಲಿಂಗ ಚಾರಿತ್ರ” : ಒಂದು ಪರಿಚಯ
**ಡಾ. ಬಿ. ನಂಜುಂಡಸ್ವಾಮಿ**

ಸರ್ವಜ್ಞ ವಚನ ವ್ಯಾಖ್ಯಾನ 53
**ಪ್ರೊ. ಮೊರಬದ ಮಲ್ಲಿಕಾರ್ಜುನ**

ಗ್ರಂಥ ಪರಾಮರ್ಶೆ 58

ವಾರ್ತಾ ವಿಹಾರ 59
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 63

## ಸಿದ್ಧೇಶ್ವರ ಉವಾಚ

ಓರ್ವ ಮಹಾರಾಜನು ಭವ್ಯವಾದ ಮಂದಿರ ಕಟ್ಟಿ ವೈಭವದ ಉದ್ಘಾಟನೆ ಮಾಡಿ ವಿಶ್ರಮಿಸುವಾಗ ಒಂದು ಸುಂದರ ಕನಸು ಕಂಡ. ಕನಸಿನಲ್ಲಿ ದೇವರು ಪ್ರತ್ಯಕ್ಷನಾದ. ರಾಜನು ದೇವನಿಗೆ ವಂದಿಸಿ ಕೇಳಿದ – "ನಾನು ಕಟ್ಟಿಸಿದ ಮಂದಿರದ ಉದ್ಘಾಟನೆಯು ಚೆನ್ನಾಗಿತ್ತಲ್ಲವೇ?"

ದೇವನು ಹೇಳಿದ – "ರಾಜರೆ, ನಾನು ನಿನ್ನ ಮಂದಿರದ ಉದ್ಘಾಟನೆಗೆ ಬಂದಿರಲಿಲ್ಲ!"

ರಾಜ ಕೇಳಿದ – "ಏಕೆ ಮಹಾದೇವ, ನಿನ್ನ ಮಂದಿರಕ್ಕೆ ನೀನೇಕೆ ಬರಲಿಲ್ಲ? ಎಲ್ಲಿಗೆ ಹೋಗಿದ್ದಿ?"

ದೇವನು ಹೇಳಿದ – "ಈ ಮಂದಿರವನ್ನು ಕಟ್ಟಿದ, ನನ್ನ ಮೂರ್ತಿಯನ್ನು ಕೆತ್ತಿದ ಶಿಲ್ಪಿಯು ನನ್ನ ಇನ್ನೊಂದು ಮೂರ್ತಿಯನ್ನು ಸುಡುಬಿಸಿಲಿನಲ್ಲಿ ಕುಳಿತು ಕೆತ್ತುತ್ತಿದ್ದ. ನಾನು ಅವನಿಗೆ ಗಾಳಿ ಬೀಸುತ್ತಿದ್ದೆ!!"

ಈ ಮಾತನ್ನು ಕೇಳಿದಾಗ ರಾಜನಿಗೆ ಸತ್ಕಾರ್ಯಗಳಿಗಿಂತ ಶ್ರೇಷ್ಠವಾದ ಪೂಜೆ ಇನ್ನೊಂದಿಲ್ಲ ಎಂಬ ಅರಿವಾಯಿತು. ಮಂದಿರದ ಉದ್ಘಾಟನೆಗೆ ಶಿಲಿಯನ್ನು ಆಹ್ವಾನಿಸುವುದು ರಾಜನಿಗೆ ಮರೆತುಹೋಗಿತ್ತು. ಮರುದಿನವೇ ರಾಜನು ಶಿಲ್ಪಿಯನ್ನು ಆತ್ಮೀಯತೆಯಿಂದ ಸತ್ಕರಿಸಿದಾಗ ಈರ್ವರ ಕಣ್ಣಲ್ಲಿ ಹರಿವ ಆನಂದಬಾಷ್ಪಗಳೇ ಆ ಮಹಾದೇವನಿಗೆ ಅಭಿಷೇಕವಾಗಿತ್ತು!

# ಗುರುವಾಣಿ

ಜಲ ಮಲಿನ[ವಪ್ಪು]ವ ತೊಳೆದಂತೆ
ಮನದ ತಮಂಧವ ತೊಳೆದಂತೆ
ದರ್ಪಣದೊಳಗಣ ಪ್ರತಿಬಿಂಬದಂತೆ ಇಪ್ಪಿರಿಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಮಲಿನತೆ ಎನ್ನುವುದು ಸಾಮಾನ್ಯವಾಗಿ ಎರಡು ಬಗೆ. ಒಂದು ಭೌತಿಕವಾದದ್ದು, ಮತ್ತೊಂದು ಬೌದ್ಧಿಕ ಅಥವಾ ಮಾನಸಿಕವಾದದ್ದು. ಭೌತಿಕ ಮಲಿನತೆ ದೇಹದ ಹೊರಭಾಗಕ್ಕೆ ಸಂಬಂಧಿಸಿದುದು, ಅಥವಾ ಕಣ್ಣಿನಿಂದ ಕಾಣುವ ಭೌತಪ್ರಪಂಚದಲ್ಲಿ ಇರುವಂತಹದ್ದು. ಕೆಸರು, ಕೊಳೆ, ಧೂಳು ಇತ್ಯಾದಿ.

ಈ ಬಗೆಯ ಮಲಿನತೆಯನ್ನು ಕಣ್ಣಿಗೆ ಕಾಣುವ, ಸ್ಪರ್ಶಕ್ಕೆ ಸಿಕ್ಕುವ, ಭೌತವೇ ಆದ ಜಲದಿಂದ ಶುಚಿಗೊಳಿಸಬಹುದು ಅಥವಾ ತೊಳೆಯಬಹುದು. ನೀರಿಗೆ ಇರುವ ವಿಶೇಷ ಗುಣವೆಂದರೆ ಅದು ಯಾವ ವಸ್ತುವನ್ನೇ ಆದರೂ ಕರಗಿಸಿಬಿಡುತ್ತದೆ, ಎಂಥ ಮಲಿನತೆಯನ್ನಾದರೂ ತನ್ನೊಳಗೆ ಅಡಗಿಸಿಕೊಂಡು ಮಲಿನತೆಯೇ ಇಲ್ಲದಂತೆ ಮಾಡುತ್ತದೆ. ಜಲಕ್ಕೆ 'ಜೀವಜಲ' ಎಂದು ಕರೆಯುವುದು ಉಂಟು. ವಾಯುವಿಗೆ ಪ್ರಾಣವಾಯು ಎಂದೂ ಕರೆಯಲಾಗುತ್ತದೆ.

ಮನಸ್ಸಿನ ಮಲಿನತೆಯನ್ನು ಭೌತಜಲದಿಂದ ತೊಳೆಯುವುದು ಸಾಧ್ಯವಿಲ್ಲ. ಹಾಗಾದರೆ ಯಾವುದರಿಂದ ಮನಸ್ಸನ್ನು ತೊಳೆಯಬೇಕು? ಭಾರತೀಯ ಪರಂಪರೆಯಲ್ಲಿ ಈ ಜಿಜ್ಞಾಸೆ ಎಲ್ಲ ಮತಧರ್ಮಗಳಲ್ಲಿ ಆತ್ಯಂತಿಕವಾಗಿ ಚರ್ಚೆಯಾಗಿದೆ. ಗಾಢವಾದ ಚಿಂತನೆಗೆ ಒಳಗಾಗಿದೆ. ಕನ್ನಡದಲ್ಲಿ ಮಲಿನತೆಯನ್ನು ಸೂಚಿಸುವ ಪದಕ್ಕೆ ಕಶ್ಮಲ ಮತ್ತು ಕಲ್ಮಶ ಎಂಬ ಪದಗಳಿದ್ದು, ಈ ಎರಡೂ ಪದಗಳಿಗೆ ಒಂದೇ ಅರ್ಥ ನೀಡಲಾಗಿದೆ. ವಾಸ್ತವದಲ್ಲಿ ಇವೆರಡೂ ಬೇರೆ ಬೇರೆ. ಕಶ್ಮಲ ಎಂದರೆ, ಭೌತಿಕವಾದ ಕೊಳೆ, ಕೆಸರು ಇತ್ಯಾದಿ. ಕಲ್ಮಶವೆಂದರೆ ಮನಸ್ಸಿನಲ್ಲಿರುವ ಅರಿಷಡ್ವರ್ಗಗಳು ಇತ್ಯಾದಿ. ಪೂರ್ವಿಕರು, ಪ್ರತಿಯೊಂದು ಪದದ ನಿಷ್ಪತ್ತಿಯ ಹಿಂದೆ ನಿಶಿತಮತಿಯ ಅರ್ಥವನ್ನು ಸಾಧಿಸಿದ್ದಾರೆ. ಹಾಗೆಯೇ, ಜೈನಧರ್ಮದ ಮೂಲ ತತ್ವದಲ್ಲಿ ಸವಣನಾದವನು ಸ್ನಾನ ಮಾಡುವುದು ವರ್ಜ್ಯ. ಅವರ ಪ್ರಕಾರ ದೇಹದ ಕೊಳೆಯನ್ನು ತೊಳೆದುಕೊಳ್ಳುವುದೆಂದರೆ, ಸ್ನಾನ ಮಾಡಲಾಗುತ್ತದೆ, ಆದರೆ ಮನಸ್ಸಿನ ಕೊಳೆಯನ್ನು ತೊಳೆದುಕೊಳ್ಳಲು ಏನೂ ಮಾಡುವುದಿಲ್ಲ. ಆದುದರಿಂದ ದೇಹಕ್ಕೆ ಅಂಟಿದ ಕೊಳೆಯ ಬಗೆಗೆ ಯೋಚಿಸುವುದಕ್ಕಿಂತ ಆತ್ಮದ ಕೊಳೆಯನ್ನು ತೊಳೆದುಕೊಳ್ಳುವತ್ತ ಚಿಂತಿಸಬೇಕು ಎಂಬ ಪ್ರತಿಪಾದನೆ ಅವರದು.

ಜೈನ ಧರ್ಮದಲ್ಲಿ ಅಹಿಂಸೆ ದೊಡ್ಡ ತತ್ವ. ಅದೇ ಸಮಯಕ್ಕೆ ಹಿಂಸೆ ಎನ್ನುವುದು ದೇಹಕ್ಕೆ ಸಂಬಂಧಿಸಿದ್ದೇ ಅಥವಾ ಅದು ಮಾನಸಿಕವಾದದ್ದೇ ಎನ್ನುವ ಜಿಜ್ಞಾಸೆಯು ನಡೆದಿದೆ. ಜೀವಹಿಂಸೆಯನ್ನು ವಿರೋಧಿಸುವ ಅವರು ದೇಹದ ರೋಮಗಳನ್ನು, ತಲೆಯ ಕೂದಲನ್ನು ಕಿತ್ತು ಶುಚಿಗೊಳಿಸಿಕೊಳ್ಳುವ 'ಕೇಶಲುಂಛನ' ಎಂಬ ವಿಧಾನವೊಂದಿದೆ. ಆಗ ದೇಹಕ್ಕೆ ಆಗುವ ಹಿಂಸೆಯನ್ನು ಅವರು ಲಕ್ಷಿಸುವುದಿಲ್ಲ. ಯಾಕೆಂದರೆ ದೇಹದ ಈ ಬಗೆಯ ನೋವು ಆತ್ಮನನ್ನು ಗಟ್ಟಿಗೊಳಿಸುತ್ತದೆ. ದೇಹದ ಈ ನೋವನ್ನು ಮೀರಿದರೆ ಮಾತ್ರ ಆತ್ಮ ದೇಹದ ಸ್ತರವನ್ನು ಮೀರಲು ಸಾಧ್ಯವಾಗುತ್ತದೆ ಎಂಬುದು ಅವರ ತಾತ್ವಿಕತೆ. ಆದುದರಿಂದಲೇ ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕತೆಯಲ್ಲಿ ಸುಕುಮಾರಸ್ವಾಮಿಯ ದೇಹವನ್ನು ನರಿಗಳು ತಿನ್ನುತ್ತಿದ್ದರೂ ಆತ ಅದನ್ನು ಹಿಂಸೆ ಎಂದು ಪರಿಭಾವಿಸಲಿಲ್ಲ.

ಹಾಗೆಯೇ ಬೌದ್ಧರಲ್ಲಿ ಕೂಡ ಮಾನಸಿಕ ಶುಚಿತ್ವದ ಬಗ್ಗೆ ವಿಶೇಷ ಗಮನ ನೀಡುವುದನ್ನು ನೋಡಬಹುದು. ಈ ಎಲ್ಲ ಹಿನ್ನೆಲೆಯಲ್ಲಿ ಉರಿಲಿಂಗಪೆದ್ದಿಯ ಈ ವಚನ ಒಟ್ಟು ಭಾರತೀಯ ಪರಂಪರೆಯ ಪರಿಜ್ಞಾನವನ್ನು ಅಚ್ಚುಕಚ್ಚಾಗಿ ಕಟ್ಟಿಕೊಡುತ್ತದೆ, ಮತ್ತು ಅದನ್ನು ವಿಸ್ತರಿಸುತ್ತದೆ ಕೂಡ. ಕಣ್ಣಿಗೆ ಕಾಣುವ, ಸ್ಪರ್ಶಕ್ಕೆ ಸಿಕ್ಕುವ, ಮನಸನ್ನು ಆವರಿಸುವ ಅರಿಷಡ್ವರ್ಗಗಳು ಸೇರಿದಂತೆ ವಿವಿಧ ಬಗೆಯ ಮಲಿನತೆಗಳನ್ನು ತೊಳೆಯುವ ರೀತಿಯನ್ನು ಅವರು ವಿವರಿಸಿದ್ದಾರೆ. ಅದ್ದರಿಂದಲೇ ಪರಮಾತ್ಮನ ಚಿದಂಶವೇ ಆದ ಆತ್ಮನನ್ನು ಸರಿಯಾಗಿ ಅರಿಯುವುದು, ಅಂದರೆ ಪರಮಾತ್ಮನನ್ನು ಅರಿಯುವುದು ಮುಖ್ಯವಾಗುತ್ತದೆ. ಇದರಿಂದ ಆತ್ಮ ಪರಮಾತ್ಮನ ಸ್ವರೂಪ ಒಂದೇ ಬಗೆಯದೆಂಬ ಎಚ್ಚರ ಮೂಡುತ್ತದೆ.

ಮೇಲಿನ ವಚನದಲ್ಲಿ ಕನ್ನಡಿಯ ಸುಂದರ ಉಪಮೆ ಇದೆ. ಇಡೀ ವಚನಕ್ಕೆ ಈ ಉಪಮೆಯೇ ತೋರುಗಂಬ. ಪರಮಾತ್ಮನು ಕನ್ನಡಿಯೊಳಗಣ ಪ್ರತಿಬಿಂಬದಂತೆ ಇದ್ದಾನೆ. ಕನ್ನಡಿಗೆ ಒಂದು ವಿಶೇಷ ಗುಣವಿದೆ. ಅದು ಏನನ್ನೂ ಸ್ವೀಕರಿಸುವುದಿಲ್ಲ ಮತ್ತು ತಿರಸ್ಕರಿಸುವುದೂ ಇಲ್ಲ. ಅದರ ಮುಂದೆ ನಿಂತಾಗ ಎದುರಿನ ವಸ್ತು ಇರುವ ಹಾಗೆಯೇ ಅದನ್ನು ಪ್ರತಿನಿಧಿಸುತ್ತದೆ. ಜಿಡ್ಡುಗಟ್ಟಿದ ಕನ್ನಡಿಯಲ್ಲಿ ಪ್ರತಿಬಿಂಬ ಮೂಡುವುದಿಲ್ಲ. ಅಂತೆಯೇ ಕಣ್ಣು ಮಂಜಾದಾಗಲೂ ಕೂಡ ಪ್ರತಿಬಿಂಬ ಸರಿಯಾಗಿ ಕಾಣಿಸುವುದಿಲ್ಲ. ಹೀಗೆ ಪರಸ್ಪರ ಅವಲಂಬನೆಯ ಸೂತ್ರವೊಂದು ಕನ್ನಡಿಯ ಪ್ರತಿಬಿಂಬದ ಪ್ರಮೇಯದಲ್ಲಿದೆ. ಮನದ ತಮಂಧವನ್ನು ತೊಳೆದು ಮನಸ್ಸನ್ನು ಶುದ್ಧ ಕನ್ನಡಿಯನ್ನಾಗಿ ಇರಿಸಿಕೊಂಡರೆ ಅದರಲ್ಲಿ ಪರಮಾತ್ಮನ ಪ್ರತಿಬಿಂಬ ಕಾಣಿಸುತ್ತದೆ. ಇಲ್ಲಿ ಮತ್ತೊಂದು ಸ್ವಾರಸ್ಯವಿದೆ. ಕನ್ನಡಿಯ ಮುಂದೆ ನಿಲ್ಲುವ ವಸ್ತು ಬಿಂಬವಾದರೆ ಕನ್ನಡಿಯಲ್ಲಿ ಪ್ರತಿಯಾಗಿ ಕಾಣುವುದು ಪ್ರತಿಬಿಂಬ. ಬಿಂಬವಿಲ್ಲದೆ ಪ್ರತಿಬಿಂಬವಿಲ್ಲ. ಬಿಂಬವೆಂದರೆ ಪ್ರತಿರೂಪ ಎಂದರ್ಥ. ಅದು ಪರಮಾತ್ಮನ ಪ್ರತಿರೂಪ. ಆದರೆ ಈ ಪ್ರತಿರೂಪಕ್ಕೆ ಕಲ್ಮಶಗಳೆಲ್ಲ ಆವರಿಸಿ ಅದರ

ನಿಜಸ್ವರೂಪ ಮರೆತು ಹೋಗಿ ಎದುರು ನಿಂತ ಪರಮಾತ್ಮನನ್ನು ಪ್ರತಿಮಿಸಲಾರದೆ ಹೋಗಿದೆ. ಮನಸ್ಸಿನ ಕೊಳೆಯನ್ನೆಲ್ಲಾ ತೆಗೆದು ನಿಂತಾಗ ಈ ಪ್ರತಿರೂಪದ ಎದುರಿನ ರೂಪ ಅಂದರೆ ಪರಮಾತ್ಮ ಕಾಣಿಸುತ್ತಾನೆ. ವಾಸ್ತವದಲ್ಲಿ ಕನ್ನಡಿಯ ಪ್ರತಿಮೆ ಮನುಷ್ಯ ಮತ್ತು ಪರಮಾತ್ಮ ಇಬ್ಬರಿಗೂ ಅನ್ವಯಿಸುವಂಥದು.

ಈ ಬಿಂಬ-ಪ್ರತಿಬಿಂಬ, ರೂಪ-ಪ್ರತಿರೂಪಗಳ ತೊಡಕು ಹರಿಯಬೇಕಾದರೆ ಮನಸ್ಸಿಗೆ ಲೇಪಿಸಿಕೊಂಡಿರುವ ಆಣವ, ಮಾಯಾ, ಕರ್ಮಗಳೆಂಬ ತ್ರಿಮಲಗಳನ್ನು ತೊಳೆದುಕೊಳ್ಳಬೇಕು.

ಆಣವಂ ಮಾಯಿಕಂ ಚೈವ ಕಾರ್ಮಿಕಂ ಚ ಯಥಾಕ್ರಮಮ್
ಮಲತ್ರಯಮನಾದೀದಂ ತನುತ್ರಯಗತಂ ಭವೇತ್॥
[ಚಂ.ಆ.ಕ್ರಿ.ಪಾ.3.43]

ಚಂದ್ರಜ್ಞಾನಾಗಮದ ಕ್ರಿಯಾಪಾದದಲ್ಲಿನ ಈ ಶ್ಲೋಕ, ಜೀವನು ತಾನು ಪರಮಾತ್ಮನ ಅಂಶವೆಂಬ ಸಂಗತಿಯನ್ನು ಮರೆತಿರುವುದರಿಂದ ಪರಮಾತ್ಮನ ಅನಂತ ಶಕ್ತಿ ಈತನಲ್ಲಿ ಅಲ್ಪಶಕ್ತಿಯಾಗುತ್ತದೆ. ಇದು ಆಣವಮಲ ಎನಿಸಿಕೊಳ್ಳುತ್ತದೆ. ಪರಮಾತ್ಮ ಸರ್ವಜ್ಞತ್ವವನ್ನು ಹೊಂದಿದವನು. ಆದರೆ ಜೀವನು ಸಂಕುಚಿತ ಜ್ಞಾನವನ್ನು ಹೊಂದಿ, ಮಾಯೆಯಿಂದ ಆವರಿಸಲ್ಪಟ್ಟು ಬಳಲುತ್ತಾನೆ, ಇದೇ ಮಾಯಿಕಮಲ. ಪರಮಾತ್ಮನ ಕ್ರಿಯಾಶಕ್ತಿಯು ಜೀವನಲ್ಲಿ ಕಿಂಚಿತ್ ಕರ್ತೃತ್ವಶಕ್ತಿಯಾಗಿ ಪರಿಣಮಿಸಿದೆ, ಇದುವೇ ಕಾರ್ಮಿಕಮಲ. ಈ ಮಲತ್ರಯಗಳು ಜೀವನಿಗೆ ತನ್ನ ಮೂಲಸ್ವರೂಪದ ಅರಿವಿಲ್ಲದಂತೆ ಮಾಡುತ್ತದೆ. ಇದನ್ನು ಕಳೆದು ಜೀವ ದೇವನಾಗಬೇಕು. ಅದೇ ಬದುಕಿನ ಪರಮಗುರಿ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

**ಹಸಿವಾಯಿತ್ತೆಂದು ಹುಸಿದು ಮಜ್ಜನಕ್ಕೆರೆವರಯ್ಯಾ ;**
**ತೃಷೆಯಾಯಿತ್ತೆಂದು ಅರ್ಪಿತವ ಮಾಡುವರಯ್ಯಾ.**
**ಇದೆಂತು ಭಕ್ತಿಸಂಬಂಧ ? ಇದೆಂತು ಶರಣಸಂಬಂಧ ?**
**ಇದೆಂತು ಲಿಂಗಸಂಬಂಧ ?**
**ಕಾರಣವಿಲ್ಲದ ಭಕ್ತಿಯ ಕಂಡಡೆ**
**ಹೋಗನೂಕುವನು ಗುಹೇಶ್ವರಾ.**
**– ಅಲ್ಲಮಪ್ರಭು**

# ಸಂಪಾದಕೀಯ

ಸಂಸ್ಕೃತದಲ್ಲಿ ಒಂದು ಪ್ರಸಿದ್ಧವಾದ ಮಾತಿದೆ. 'ಸ್ವಭಾವೋ ದುರತಿಕ್ರಮಃ'. ಮನುಷ್ಯನು ಸ್ವಭಾವತಃ ಕ್ರಮವನ್ನು ಮೀರುವುದರಲ್ಲಿಯೇ ಆಸಕ್ತನಾಗಿರುತ್ತಾನೆ. ನಿಯಮಗಳಿರುವುದೇ ಮುರಿಯುವುದಕ್ಕೆ ಎಂದುಕೊಂಡಿರುತ್ತಾನೆ. ಅಂಥ ನಿಯಮಗಳನ್ನು, ಕ್ರಮಗಳನ್ನು ಮುರಿಯುವುದಕ್ಕೂ ಮೊದಲು, ವಿರೋಧಿಸುವುದಕ್ಕೂ ಮೊದಲು ಒಟ್ಟು ಮನುಷ್ಯಲೋಕದ ಬಗ್ಗೆ ಯೋಚಿಸುವುದು ಮುಖ್ಯವಾಗಬೇಕು. ಎಲ್ಲ ನಿಯಮಗಳು ಕೂಡ ಮನುಷ್ಯನ ಸುಂದರ ಬದುಕನ್ನು ಕಟ್ಟಲು ತಾನೇ ಇರುವುದು. ನಿಯಮವನ್ನು ಸಾರಾಸಗಟಾಗಿ ಅಲ್ಲಗಳೆಯುವ, ಮುರಿಯುವ ಮೊದಲು ಅದರ ಸಂಪೂರ್ಣ ಪರಿಕಲ್ಪನೆಯನ್ನು ಅರಿಯಲು ಯಾವ ನಿಯಮವೂ ಇರುವುದಿಲ್ಲ. ಅದರ ಹಿಂದೆ ಒಂದು ಸಂಯಮ–ತರ್ಕ–ಸೂತ್ರವಿರುತ್ತದೆ. ಈ ಎಲ್ಲವೂ ಆಯಾ ಕಾಲ–ದೇಶ–ಧರ್ಮಕ್ಕೆ ಅನುಗುಣವಾಗಿಯೇ ಇರುತ್ತದೆ. ಎಲ್ಲ ಕಾಲಗಳಲ್ಲೂ ಅವು ಬಳಕೆಗೆ ಯೋಗ್ಯವಾಗಿದ್ದರೆ ಅವುಗಳನ್ನು ಸಾರ್ವಕಾಲಿಕ ನಿಯಮಗಳೆಂದು, ವಿಧಿಗಳೆಂದು ಕರೆಯಲಾಗುತ್ತದೆ. ಇಂತಹ ತತ್ತ್ವಗಳನ್ನು ಪರಾಮರ್ಶೆ ಮಾಡದೆ ಎಲ್ಲವನ್ನೂ ಕೇವಲ ವ್ಯಂಗ್ಯವಾಗಿ ನೋಡುವುದು ಸರಿಯಲ್ಲ.

ಇತ್ತೀಚೆಗೆ ನೂತನ ಸಂಸತ್ ಭವನ ಲೋಕಾರ್ಪಣೆಯಾಗಿದೆ. ಹೊಸ ಕಾಲದ ಅಗತ್ಯಗಳಿಗೆ ಬೇಕಾಗುವಂತೆ ವಿಶಾಲವಾದ ಭವನವನ್ನು ನಿರ್ಮಿಸಲಾಗಿದೆ. ಆದರೆ ಈ ಲೋಕಾರ್ಪಣೆಯ ಸಂದರ್ಭದಲ್ಲಿ ಅತಿ ಚರ್ಚಿತವಾದ ಒಂದು ಪ್ರಮುಖ ವಿಷಯವೆಂದರೆ, ಸಂಸತ್ ಭವನದಲ್ಲಿ 'ಸೆಂಗೋಲ್' ಸ್ಥಾಪನೆ. ಸೆಂಗೋಲ್ ಎನ್ನುವ ಪದ 'ಸೆಮ್ಮೈ' ಎನ್ನುವುದರಿಂದ ಬಂದಿದೆ. 'ಸೆಮ್ಮೈ' ಎಂದರೆ ಸದಾಚಾರ ಎಂದರ್ಥ. ಈ 'ಸೆಂಗೋಲ್' ಬಗ್ಗೆ 'ತುಘಲಕ್' ಎನ್ನುವ ತಮಿಳು ಪತ್ರಿಕೆಯಲ್ಲಿ ಗುರುಮೂರ್ತಿ ಎಂಬುವರು ಒಂದು ಲೇಖನವನ್ನು ಬರೆದು "ಆಧೀನಂ ಸಂಸ್ಥಾನದವರು ಮೊದಲು ಈ ಸೆಂಗೋಲನ್ನು ಮೌಂಟ್ ಬ್ಯಾಟನ್‌ಗೆ 'ರಾಜದಂಡ'ವಾಗಿ ನೀಡಿದ್ದರು. ಅನಂತರ ಅದನ್ನು ನೆಹರೂ ಅವರಿಗೆ ಅಧಿಕಾರದ ಹಸ್ತಾಂತರ ಸಂದರ್ಭದಲ್ಲಿ ನೀಡಲಾಯಿತು. ಈಗ ಅದು ಅಲಹಾಬಾದ್ ವಸ್ತುಸಂಗ್ರಹಾಲಯದಲ್ಲಿ ಇದೆ" ಎಂದು ತಿಳಿಸಿದರು. ಅನಂತರ ಅದು ಚರ್ಚೆಯ ಕೇಂದ್ರವಾಯಿತು. ಕೊನೆಗೂ ಆ 'ಸೆಂಗೋಲ್' ಅನ್ನು ಸಂಸತ್ತಿನಲ್ಲಿ ಪ್ರತಿಷ್ಠಾಪಿಸಲಾಯಿತು.

ಇದರಲ್ಲಿ ವಿವಾದದ ಅಂಶಕ್ಕಿಂತಲೂ ಕುತೂಹಲದಿಂದ ಗಮನಿಸಬೇಕಾದ ಕೆಲವು ಅಂಶಗಳಿವೆ. ಒಂದು ಕೋಲಿನ ಆಕೃತಿ, ಮತ್ತೊಂದು ದಂಡಸ್ಥಾಪನೆಯ ಹಿನ್ನೆಲೆ. ದಂಡದ ತುದಿಯಲ್ಲಿ ನಂದಿಯ ಸಣ್ಣ ವಿಗ್ರಹವಿದ್ದು, ದಂಡಕ್ಕೆ ಚಿನ್ನದ ಲೇಪನ ಮಾಡಲಾಗಿದೆ. ಇದನ್ನು ಕೆಲವರು ನಂದೀಧ್ವಜವೆಂದರು. ಮತ್ತೆ ಕೆಲವರು ಪಟ್ಟದ

ಕಲ್ಲಿನಲ್ಲಿ ಇಂಥ ದಂಡವನ್ನು ಹಿಡಿದಿರುವ ಶಿವನ ಮೂರ್ತಿಯನ್ನು ತೋರಿಸಿದರು. ಮತ್ತೊಂದು ಸಂಗತಿ. ಮಹಾಭಾರತದ ಶಾಂತಿಪರ್ವದ 121 ಮತ್ತು 122ನೇ ಅಧ್ಯಾಯಗಳಲ್ಲಿ ದಂಡದ ಸ್ವರೂಪ, ನಾಮ, ಲಕ್ಷಣ, ಸ್ವಭಾವ, ಪ್ರಯೋಗ, ಉತ್ಪತ್ತಿ ಮತ್ತು ಪರಂಪರೆಗಳನ್ನು ಕುರಿತು ಸುದೀರ್ಘವಾದ ವಿವರಗಳಿವೆ. ಅದರಲ್ಲೂ 122ನೇ ಅಧ್ಯಾಯದಲ್ಲಿ ದಂಡದ ಹುಟ್ಟಿನ ಬಗ್ಗೆ ಇರುವ ಒಂದು ಕಥೆ ಸ್ವಾರಸ್ಯಕರವಾಗಿದೆ.

ಭೀಷ್ಮರ ಬಳಿ ರಾಜಧರ್ಮದ ಬಗ್ಗೆ ಕೇಳುತ್ತಿದ್ದ ಯುಧಿಷ್ಠಿರನಿಗೆ ದಂಡದ ಹುಟ್ಟು ಮತ್ತು ಪರಂಪರೆಯ ಕಥೆಯನ್ನು ಭೀಷ್ಮ ಹೇಳುತ್ತಾನೆ. ಅಂಗ ದೇಶದ ರಾಜನಾಗಿದ್ದ ವಸುಹೋಮನು ಹಿಮಾಲಯದ ಮೇಲಿರುವ ಮುಂಜಪೃಷ್ಠ ಎಂಬ ತೀರ್ಥಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದನು. ಅವನ ನಂತರ ರಾಜನಾಗಿ ಬಂದ ಮಾಂಧಾತನು ವಸುಹೋಮನನ್ನು ನೋಡಲು ಹೋದನು. ಉಭಯ ಕುಶಲೋಪರಿಯಾದ ನಂತರ ಮಾಂಧಾತನು ವಸುಹೋಮನನ್ನು ದಂಡದ ಹುಟ್ಟಿನ ಬಗ್ಗೆ ಪ್ರಶ್ನೆ ಮಾಡಿದನು. ಆಗ ವಸುಹೋಮನು 'ಬ್ರಹ್ಮನು ಯಜ್ಞಕಾರ್ಯದಲ್ಲಿ ನಿರತರಾಗಿದ್ದಾಗ ಆತನಲ್ಲಿ ದಂಡವು ಅಂತರ್ಗತವಾಗಿ ಲುಪ್ತವಾಯಿತು. ಇದರಿಂದ ಲೋಕದಲ್ಲಿ ಅನೀತಿ ತಲೆದೋರಿತು. ಆ ಕಾರಣದಿಂದ ಬ್ರಹ್ಮ ಮತ್ತು ವಿಷ್ಣು ಇಬ್ಬರೂ ಶಿವನನ್ನು ಪ್ರಾರ್ಥಿಸಿ ಲೋಕವನ್ನು ಸಂರಕ್ಷಿಸುವ ಕುರಿತು ವಿನಂತಿಸಿದರು. ಆಗ ಶೂಲಧಾರಿಯಾದ ಶಂಕರನು ಕೆಲಕಾಲ ಚಿಂತಿಸಿ ತಾನೇ ದಂಡರೂಪದಲ್ಲಿ ಪ್ರಕಟವಾದನು.

> ದೇವದೇವ ಶಿವಃ ಸರ್ವೋ ಜಾಗರ್ತಿ ಸತತಂ ಪ್ರಭುಃ।
> ಕಪರ್ದಿ ಶಙ್ಕರೋ ರುದ್ರಃ ಶಿವಃ ಸ್ಥಾಣುರುಮಾಪತಿಃ॥

(ದೇವದೇವನಾದ ಕಲ್ಯಾಣಸ್ವರೂಪನಾದ ಸರ್ವಾತ್ಮನಾದ ಪ್ರಭುವಾದ ಜಟಾಧರನಾದ ಉಮಾಪತಿಯಾದ ದುಃಖಹರನಾದ ಸ್ಥಾಣುಸ್ವರೂಪನಾದ ಲೋಕಮಂಗಳಕರನಾದ ಶಂಕರನು ದಂಡರೂಪದಲ್ಲಿ ಸದಾ ಜಾಗರೂಕನಾಗಿ ಆವಿರ್ಭವಿಸುತ್ತಾನೆ)

ಶಂಕರನು ಮಾಡಿದ ಧರ್ಮಾಚರಣೆಯ ಮುಂದುವರಿಕೆಯಾಗಿ ನೀತಿಸ್ವರೂಪಳಾದ ಸರಸ್ವತಿಯು ದಂಡನೀತಿಯನ್ನು ರಚಿಸಿದಳು ಎಂದು ಮಾಂಧಾತನು ವಿವರಿಸಿದನು. ದಂಡವು ಶಿವನಿಂದ ಭೂಲೋಕದಲ್ಲಿ ಸೃಷ್ಟಿಯಾಗಿದ್ದರಿಂದ ನಂದಿಯನ್ನು ಒಳಗೊಂಡ ದಂಡವು ಪ್ರಸಿದ್ಧವಾಯಿತು. ತಮಿಳುನಾಡಿನ ಚೋಳರು ಮಹಾ ಶಿವಭಕ್ತರಾಗಿದ್ದರು. ಅವರು ಮಹಾಭಾರತದಲ್ಲಿ ಹೇಳಿದ ದಂಡದ ಸ್ವರೂಪವನ್ನು ಸೆಂಗೋಲ್ (ಸದಾಚಾರ) ಮೂಲಕ ಅನುಸರಿಸುತ್ತಿದ್ದರು. ಶಿವನಿಗೆ ಸದಾಶಿವನೆಂಬ ಹೆಸರೂ ಇರುವುದನ್ನು ಗಮನಿಸಬೇಕು. ಈ ಕಾರಣದಿಂದ ನಂದಿಯುಕ್ತವಾದ ಸೆಂಗೋಲ್ ದಂಡವನ್ನು ಸಂಸತ್ತಿನಲ್ಲಿ ಸ್ಥಾಪಿಸಲಾಗಿದೆ. ರಾಜ್ಯಾಡಳಿತವು ಧರ್ಮ ಸಮ್ಮತವಾಗಿ ನಡೆಯಬೇಕೆಂಬುದು ಇದರ ತಾತ್ಪರ್ಯ. ಇದು ಎಲ್ಲರೂ ಎಲ್ಲ ಕಾಲಕ್ಕೂ ಒಪ್ಪಬೇಕಾದ ಮಾತು.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ನಿರ್ಲಿಪ್ತ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಪರಮಪ್ರೇಮವು ಭಕ್ತಿ. ಪ್ರೇಮವಿರುವಲ್ಲಿ ದ್ವೇಷವಿರದು. ಸ್ವರೂಪತಃ ಎರಡೂ ಪರಸ್ಪರ ವಿರೋಧಿ ಭಾವನೆಗಳು. ಪ್ರೀತಿಸಿದ ವಸ್ತುವನ್ನು ದ್ವೇಷಿಸಲಿಕ್ಕಾಗದು. ಅಮೃತವನ್ನು ನೀಡಿದ ವ್ಯಕ್ತಿಗೆ ವಿಷವನ್ನು ಕೊಡಲಾಗದು. ಪ್ರೇಮ ಹಾಗೂ ದ್ವೇಷ ಎರಡೂ ಭಾವನೆಗಳು ಒಂದೇ ವಸ್ತುವಿನ ಅಥವಾ ವ್ಯಕ್ತಿಯ ಮೇಲೆ ಎಂದೂ ಇರುವುದಿಲ್ಲ. ಒಂದು ವೇಳೆ ಇದ್ದರೆ ಆ ಪ್ರೇಮ ನಿಜವಾದ ಪ್ರೇಮವಲ್ಲ. ಅಥವಾ ಆ ದ್ವೇಷ ನಿಜವಾದ ದ್ವೇಷವಲ್ಲ.

ಮನುಷ್ಯನು ಹಿತಕರ ವಸ್ತುಗಳನ್ನು ಪ್ರೀತಿಸುತ್ತಾನೆ. ಅಹಿತಕರ ವಸ್ತುಗಳನ್ನು ದ್ವೇಷಿಸುತ್ತಾನೆ. ಜೀವನದಲ್ಲಿ ಎಲ್ಲಾ ವಸ್ತುಗಳು ಹಿತಕರವಾಗಿರುತ್ತವೆ ಎಂದು ಹೇಳಲಾಗದು ಅಥವಾ ಒಂದು ವಸ್ತು ಯಾವಾಗಲೂ ಹಿತಕರವಾಗಿರುತ್ತದೆ ಎಂದೂ ಹೇಳಲಿಕ್ಕಾಗದು.

ಅಲ್ಲದೆ ಒಂದೇ ವಸ್ತುವನ್ನು ಇಬ್ಬರು ಪ್ರೀತಿಸಿದರೆ ಅವರಲ್ಲಿ ದ್ವೇಷ ಬರುತ್ತದೆ. ಇತಿಹಾಸದಲ್ಲಿ ಅಂಥ ಘಟನೆಗಳು ಸಾಕಷ್ಟು. ಸುಂದ, ಉಪಸುಂದರು ಸಹೋದರರು. ಎರಡು ದೇಹ, ಒಂದೇ ಜೀವ ಎನ್ನುವಷ್ಟು ಅನ್ಯೋನ್ಯವಾಗಿದ್ದರು. ಮುಂದೆ ಇಬ್ಬರೂ ಒಬ್ಬಳನ್ನೇ ಪ್ರೀತಿಸಿದರು. ಅವಳೇ ತಿಲೋತ್ತಮೆ ಎಂಬ ಅಪ್ಸರೆ. ಆಗ ಅವರಲ್ಲಿ ದ್ವೇಷ ತಲೆದೋರಿತು. ಹೋರಾಡಿದರು. ಇಬ್ಬರ ತಲೆಗಳೂ ಉರುಳಿದವು. ಪ್ರೀತಿಯ ಹೊಟ್ಟೆಯಿಂದಲೇ ದ್ವೇಷ ಹುಟ್ಟಿತ್ತು. ಸರ್ವನಾಶವಾಗಿತ್ತು. ಹಾಗಾದರೆ ಪ್ರೇಮವಿರುವಲ್ಲಿ ದ್ವೇಷವಿರುವುದಿಲ್ಲ ಎಂಬ ಮಾತು ಎಷ್ಟು ಸತ್ಯ?

ನಿಜವಾಗಿಯೂ ಪ್ರೇಮವಿರುವಲ್ಲಿ ದ್ವೇಷವಿರುವುದಿಲ್ಲ. ಆದರೆ ಅದು ಪರಮಪ್ರೇಮವಾಗಿರಬೇಕಷ್ಟೆ. ಸಾಮಾನ್ಯ ಪ್ರೇಮವಾಗಿದ್ದರೆ ದ್ವೇಷ ತಪ್ಪಿದ್ದಲ್ಲ. ಏಕೆಂದರೆ ಸಾಮಾನ್ಯ ಪ್ರೇಮದಲ್ಲಿ 'ಅಹಂ-ಮಮ' 'ನಾನು-ನನ್ನದು' ಎಂಬುದು ಬೆರೆತಿರುತ್ತದೆ. ಪರಮಪ್ರೇಮದಲ್ಲಿಯೂ 'ನಾನು-ನನ್ನದು' ಎಂಬ ಭಾವವಿರುತ್ತದೆ; ಆದರೆ ಇದ್ದೂ ಇಲ್ಲದಂತೆ ಇರುತ್ತದೆ. ಅತ್ಯಂತ ದುರ್ಬಲವಾಗಿರುತ್ತದೆ. ಹೀಗಾಗಿ ಅಲ್ಲಿ ದ್ವೇಷದ ಪ್ರಶ್ನೆಯೇ ಬರುವುದಿಲ್ಲ.

ಸೂರ್ಯೋದಯಕ್ಕೆ ಮುಂಚೆ ಅರುಣೋದಯವಾಗುತ್ತದೆ. ಪೂರ್ವದಿಶೆ ಯಲ್ಲಿ ಎಂಥ ಅದ್ಭುತ ದೃಶ್ಯ ನಿರ್ಮಾಣವಾಗುತ್ತದೆ! ಬೆಳ್ಳಿಯ ಪರದೆಯ ಮೇಲೆ, ವಜ್ರದ ಕುಂಚ ಹಿಡಿದು, ಚಿನ್ನದ ಬಣ್ಣ ಬಳಸಿ ಮುತ್ತುರತ್ನಗಳನ್ನು ಉದುರಿಸುವ ಆ ಹೃದಯಂಗಮ ದೃಶ್ಯಕ್ಕೆ

ಮನಸೋಲದವರಾರು? ನಿತ್ಯನೂತನವಾದ ಈ ಅರುಣೋದಯವನ್ನು ಅಸಂಖ್ಯ ಜನರು ನೋಡಿ ಸಂತಸಪಡುತ್ತಾರೆ. ಆದರೆ ಅವರಲ್ಲಿ ಪರಸ್ಪರ ದ್ವೇಷಾಸೂಯೆಗಳಿರಲು ಸಾಧ್ಯವೆ? ಇಲ್ಲ. ಏಕೆಂದರೆ ಅರುಣೋದಯ ಯಾರದು? ಎಲ್ಲರದು. ಹೀಗಾಗಿ ಅದನ್ನು ಅನುಭವಿಸುವವರಲ್ಲಿ ಇದು 'ನನ್ನದು' ಎಂಬ ಭಾವವಿಲ್ಲ. ಆದ್ದರಿಂದ ಅಲ್ಲಿ ದ್ವೇಷಕ್ಕೆ ಎಡೆಯಿಲ್ಲ.

ಪರಿಮಿತ ವಸ್ತುವಿನ ಪ್ರೇಮ ರಾಗ-ದ್ವೇಷಕ್ಕೆ ಕಾರಣ. ಅಪರಿಮಿತ ವಸ್ತುವಿನ ಪ್ರೇಮ ಪರಮ ಪಾವನ! ಸಾಮಾನ್ಯ ಪ್ರೇಮ ಪರಿಮಿತ ವಸ್ತುವಿಗೆ ಸೀಮಿತ. ಪರಿಮಿತ ಹಾಗೂ ಅಪರಿಮಿತ ಎರಡು ವಸ್ತುಗಳನ್ನೂ, ಸಕಲ ವಿಶ್ವವನ್ನೂ ಒಳಗೊಳ್ಳುತ್ತದೆ ಪರಮಪ್ರೇಮ! ಇಂಥ ಪರಮಪ್ರೇಮವುಳ್ಳ ಭಕ್ತನ ಹೃದಯದಿಂದ ದ್ವೇಷವೇ ಮರೆಯಾಗಿಹೋಗುತ್ತದೆ. ಏಕೆಂದರೆ ಅವನಲ್ಲಿ 'ಅಹಂ-ಮಮ' ನಾನು ನನ್ನದು ಎಂಬುದೇ ಇರುವುದಿಲ್ಲ!

ಒಬ್ಬ ಶ್ರೇಷ್ಠ ಭಕ್ತಿಸಾಧಕನಿದ್ದ. ಆತ ತರುಣ. ಒಂದು ದಿನ ಅವನು ಪ್ರವಾಸಕ್ಕೆ ಹೊರಟ. ದಾರಿಯಲ್ಲಿ ಧಾರಾಕಾರವಾಗಿ ಮಳೆ ಬೀಳತೊಡಗಿತು. ಹತ್ತಿರದಲ್ಲಿ ಒಂದು ಸುಂದರ ಮನೆ. ಆ ಮನೆಯ ಮುಂದೆ ಚಪ್ಪರದ ಅಡಿಯಲ್ಲಿರುವ ಕಟ್ಟೆಯ ಮೇಲೆ ಈತ ಕುಳಿತ. ಅದನ್ನು ಕಂಡು ಆ ಮನೆಯ ಯಜಮಾನ ತಕ್ಷಣ ಬಾಗಿಲು ತೆಗೆದು ಹೊರಬಂದ. "ನಮ್ಮ ಮನೆಯ ಮುಂದೇಕೆ ಕುಳಿತಿರುವೆ? ನಡೆಯಾಚೆ!" ಎಂದು ಆ ತರುಣನನ್ನು ಗದರಿಸಿದ.

"ಓ, ಇದು ನಿಮ್ಮ ಮನೆಯೆ ? ಕ್ಷಮಿಸಿ, ನನಗೆ ಗೊತ್ತಾಗಲಿಲ್ಲ" ಎಂದು ಆ ತರುಣ ಸಹಜವಾಗಿ ಎದ್ದ. ಎದುರಿಗಿರುವ ಮರದಡಿ ಬಂದು ಕುಳಿತ. ಮೇಲೆ ತುಂತುರು ಮಳೆ ಸುರಿಯುತ್ತಿದೆ. ಸುತ್ತಮುತ್ತ ಹಸಿರು ಹಾಸಿದೆ. ಪ್ರಕೃತಿಯೆಲ್ಲ ವರ್ಷಾಸ್ನಾನ ಮಾಡಿ ಕಳೆಗೊಂಡಿದೆ. ಈ ನಿಸರ್ಗಸ್ವರ್ಗ ಕಂಡು ಭಕ್ತಿಸಾಧಕನ ಹೃದಯ ತುಂಬಿಬಂದು ಹಾಡತೊಡಗಿದ.

ಒಳಗಿರುವ ಯಜಮಾನನು ತರುಣನ ಆನಂದಗೀತೆಯನ್ನು ಕೇಳಿ ಹೊರಬಂದ. ಮಳೆಯಲ್ಲಿ ತೊಯ್ಯುತ್ತಲಿದ್ದರೂ ಈ ತರುಣ ಎಷ್ಟು ಆನಂದವಾಗಿ ಹಾಡುತ್ತಿದ್ದಾನೆ! ನಾನು ಇಂಥ ಭವ್ಯ ಮನೆಯಲ್ಲಿದ್ದು ಅರುವತ್ತು ವರುಷಗಳೇ ಆದವು. ಆದರೆ ಒಂದು ದಿನವೂ ಈ ತರುಣನಿಗಾದ ಆನಂದ ನನಗೆ ಆಗಲಿಲ್ಲ. ಈ ತರುಣನಲ್ಲಿ ಏನೋ ವಿಶೇಷ ಇರಬೇಕು ಎಂದು ಅವನ ಬಳಿಗೆ ಹೋದ. "ಬಾರಪ್ಪ, ನಮ್ಮ ಮನೆಯ ಮುಂದೆ ಕುಳಿತುಕೊಂಡು ಹಾಡು ಬಾ" ಎಂದು ವಿನಯದಿಂದ ಕರೆದ.

"ಇಲ್ಲ ಯಜಮಾನರೇ, ನಾನಿಲ್ಲಿ ಆರಾಮವಾಗಿದ್ದೇನೆ. ನೀವೂ ಬನ್ನಿ, ನಿಮಗೂ ಆನಂದವಾಗುತ್ತದೆ. ಅದು ನಿಮ್ಮ ಮನೆ. ಇದು ಎಲ್ಲರ ಮನೆ! ದೇವನ ಮನೆ!! ನಿಮ್ಮ ಮನೆಯಲ್ಲಿ ನಿಮಗೆ ಆನಂದವಾಗಿರಬಹುದು, ಆಗಿರಲಿಕ್ಕಿಲ್ಲ. ಆದರೆ ದೇವನ ಈ ಮನೆಯಲ್ಲಿ ಎಲ್ಲರಿಗೂ ಆನಂದ! ದಯವಿಟ್ಟು ಅನುಭವಿಸಿ" ಎಂದ ಆ ಭಕ್ತಿಯೋಗಿ.

ಈ ಬೆಳಕಿನ ನುಡಿಗಳನ್ನಾಲಿಸಿದಾಗ ಯಜಮಾನನ ಹೃದಯದಲ್ಲಿದ್ದ ಅಹಂಕಾರದ ಕತ್ತಲೆ ಕರಗಿಹೋಯಿತು. "ನೀವು ಮಹಾಸಂತರು. ನಾನು ನಿಮ್ಮನ್ನು ಅರಿಯಲಿಲ್ಲ. ನನ್ನನ್ನು ಕ್ಷಮಿಸಿರಿ. ದಯವಿಟ್ಟು ನಿಮ್ಮ ಆನಂದಯೋಗವನ್ನು ನನಗೂ ತಿಳಿಸಿರಿ" ಎಂದು ಯಜಮಾನ ಬೇಡಿಕೊಂಡ.

"ಜಗತ್ತಿನಲ್ಲಿ ನಾವು ಮನೆ-ಮಠ, ಮಕ್ಕಳು-ಮರಿ, ಗುರು-ದೇವರು ಏನನ್ನಾದರೂ ಪ್ರೀತಿಸಬಹುದು. ಆದರೆ ಆ ಪ್ರೀತಿಯಲ್ಲಿ ಈ ವಸ್ತು 'ನನ್ನದು' ಎಂಬ ಭಾವ ಅತಿಯಾಗಿ ಬೆರೆತುಕೊಂಡಿರಬಾರದು. ಆಗ ನಮ್ಮ ಜೀವನವು ಜೇನಾಗುತ್ತದೆ!" ಎಂದು ಆ ಭಕ್ತಿಸಾಧಕ ಮಧುವಿದ್ಯೆಯನ್ನು ಅರುಹಿದ.

ಈ ಮಧುರ ಮಾತುಗಳನ್ನು ಕೇಳುತ್ತಲೇ ಆನಂದಬಾಷ್ಪಸಮೇತನಾಗಿ ಆ ಯಜಮಾನನು "ನಾನು ಧನ್ಯನಾದೆ. ಇನ್ನು ಮೇಲೆ ನೀನೇ ನನ್ನ ಗುರು" ಎಂದು ಆ ಸಂತನಿಗೆ ತಲೆಬಾಗಿದ.

"ನನ್ನನ್ನು ಗುರು ಎನ್ನಬೇಡಿ, ಸಹಜವಾಗಿ ಸತ್ಯವನ್ನು ಅನುಭವಿಸಿ, ಆನಂದಿಸಿರಿ" ಎಂದು ಸಂತನು ಯಜಮಾನನನ್ನು ಎಚ್ಚರಿಸಿದನು. ಈಗ ಯಜಮಾನನು ನಿಜವಾಗಿಯೂ ಅನಿಕೇತನನಾಗಿದ್ದ, ಆನಂದನಿಲಯವನ್ನು ಪ್ರವೇಶಿಸಿದ್ದ.

ಇಂಥ ಭಕ್ತಿಸಾಧಕನು 'ಅದ್ವೇಷ್ಟ'ನಾಗಿ ಇರುತ್ತಾನೆಂದು ತಿಳಿದಿದ್ದೇವೆ. ಈಗ ಆತನ ಇನ್ನೊಂದು ಲಕ್ಷಣ 'ನಿರ್ಲಿಪ್ತತೆ.'

ಈ ಮನುಷ್ಯನ ಮನಸ್ಸಿನಿಂದ 'ನನ್ನದು' ಎನ್ನುವುದನ್ನು ಬಿಡಿಸುವುದು ಸುಲಭವಲ್ಲ. ಒಟ್ಟಿನಲ್ಲಿ ಯಾವುದಾದರೂ ಒಂದು ವಸ್ತುವಿಗೆ ಅಂಟಿಕೊಳ್ಳುವುದು ಮನಸ್ಸಿನ ವಿಚಿತ್ರಗುಣ. ಎಂಥಾ ಕ್ಷುದ್ರವಸ್ತುವೇ ಇರಲಿ ಅದಕ್ಕೆ ಒಮ್ಮೆ ಈ ಮನಸ್ಸು ಅಂಟಿಕೊಂಡರೆ ತೀರಿತು. ಪ್ರಾಣ ಹೋಗುವ ಪ್ರಸಂಗ ಬಂದರೂ ಮನಸ್ಸು ಅದರಲ್ಲಿಯೇ ರಮಿಸುತ್ತಿರುತ್ತದೆ.

ಧರ್ಮರಾಜನ ಮನಸ್ಸು ಲೆತ್ತದಾಟದಲ್ಲಿ ಅಂಟಿಕೊಳ್ಳಲಿಲ್ಲವೆ?

ಅದರಿಂದ ಆತ ಗದ್ದುಗೆ ಗೌರವ, ಸಕಲ ಭೋಗ-ಭಾಗ್ಯಗಳನ್ನೂ ಕಳೆದು ಕೊಳ್ಳಲಿಲ್ಲವೆ? ಆದರೆ ಭಕ್ತಿರಸವನ್ನುಂಡ ಮನುಷ್ಯನು ಇಂಥ ನಶ್ವರವಾದ ಪ್ರಾಪಂಚಿಕ ವಿಷಯಗಳಿಗೆ ಎಂದೂ ಅಂಟಿಕೊಳ್ಳುವುದಿಲ್ಲ. ಇಂದ್ರಿಯಸುಖಕ್ಕಾಗಿ ಹಾತೊರೆಯುವುದಿಲ್ಲ.

ಅಬುಬೆನ್ ಅದಮ್ ಒಬ್ಬ ಆದರ್ಶ ಸಂತ. ಆತನಿಗೆ ಮನೆ-ಮಡದಿ, ಮಕ್ಕಳು-ಮರಿ ಯಾರೂ ಇರಲಿಲ್ಲ. ಒಂದು ಚಿಕ್ಕ ಗುಡಿಸಲಿನಲ್ಲಿ ಒಬ್ಬನೇ ಇರು ತ್ತಿದ್ದ. ಆತನು ಗಳಿಸಿದ್ದ ಒಂದೇ ಒಂದು ಆಸ್ತಿ ಎಂದರೆ ಅವನ ಹೃದಯದಲ್ಲಿದ್ದ ಪರಿಶುದ್ಧ ಪ್ರೇಮ!

ಕ್ರಿಮಿ-ಕೀಟ, ಪಶು-ಪಕ್ಷಿ, ಜನ-ಮನ ಎಲ್ಲವನ್ನೂ ಒಂದೇ ರೀತಿಯಾಗಿ ಪ್ರೀತಿಸುತ್ತಿದ್ದ. ಹೀಗೆ ಸಮಸ್ತ ಪ್ರಪಂಚದ ಮೇಲೆ ಪ್ರೇಮವರ್ಷ ಸುರಿಸುತ್ತ ಎಪ್ಪತ್ತು ಸುಮಧುರ ವಸಂತಗಳನ್ನು ಕಂಡಿದ್ದ!

ವೃದ್ಧಾಪ್ಯವಾದಂತೆ ಮರಣ ಸಮೀಪಿಸಿತು. ಒಂದು ದಿನ ರಾತ್ರಿ ಅಬುಬೆನ್ ಅಂದುಕೊಳ್ಳುತ್ತಾನೆ, "ಪ್ರೇಮಸಾಮ್ರಾಜ್ಯದಲ್ಲಿ ಇರುವಷ್ಟು ಸಂತಸ ಬೇರೆಲ್ಲಿಯೂ ಇಲ್ಲ. ಬದುಕಿರುವಷ್ಟು ಕಾಲ ನಾನು ಪರಿಶುದ್ಧ ಪ್ರೇಮವನ್ನೇ ಉಸಿರಾಡುತ್ತಿರಬೇಕು!" ಹೀಗೆ ಧ್ಯಾನಿಸುತ್ತ ಅಬುಬೆನ್ ನಿದ್ರೆ ಮಾಡುತ್ತಾನೆ. ಕನಸಿನಲ್ಲಿ ದೇವನು ಬರುತ್ತಾನೆ.

ಅಬುಬೆನ್ ದೇವನಿಗೆ ಕೇಳುತ್ತಾನೆ, "ಓ ದೇವನೇ, ನೀನೇಕೆ ಬಂದೆ?" "ನಿನ್ನ ಪ್ರೇಮಭರಿತ ಜೀವನವನ್ನು ಮೆಚ್ಚಿಕೊಂಡಿದ್ದೇನೆ. ನಿನ್ನನ್ನು ನನ್ನ ರಾಜ್ಯಕ್ಕೆ, ಸ್ವರ್ಗಕ್ಕೆ ಕರೆದೊಯ್ಯಲು ಬಂದಿದ್ದೇನೆ!" ಎನ್ನುತ್ತಾನೆ ದೇವನು.

ಸಂತ : "ಸರಿ, ನಿನ್ನ ರಾಜ್ಯದಲ್ಲಿ ಏನಿದೆ?"

ದೇವರು : "ಅಲ್ಲಿ ಬರೀ ಸೌಖ್ಯ. ದುಃಖವೆಂಬುವುದು ಲವಲೇಶವೂ ಇಲ್ಲ! ಅಲ್ಲಿ ಎಲ್ಲರೂ ಪುಣ್ಯಪುರುಷರು, ಸಿರಿವಂತರು. ಯಾರಿಗೂ ಯಾವುದಕ್ಕೂ ಕೊರತೆಯಿಲ್ಲ!"

ಸಂತ : "ಅಲ್ಲಿ ನನ್ನ ಕೆಲಸವೇನು?"

ದೇವರು : "ಸುಮ್ಮನೆ ಸೌಖ್ಯದಿಂದ ಇರುವುದು!"

ಸಂತ : "ಹಾಗಾದರೆ, ನಾನು ನಿನ್ನ ಸ್ವರ್ಗಕ್ಕೆ ಬರಲಾರೆ!"

ದೇವರು : "ಎಲ್ಲರೂ ಸ್ವರ್ಗವನ್ನು ಬಯಸುತ್ತಾರೆ. ನೀನೇಕೆ ಒಲ್ಲೆ?"

ಸಂತ : "ಬಯಸುವವರನ್ನು ಕರೆದೊಯ್ಯಬಹುದು. ನಾನು ನಿನ್ನ ಸ್ವರ್ಗಕ್ಕೆ ಖಂಡಿತಾ ಬರಲಾರೆ! ದೀನರ-ದಲಿತರ, ನೊಂದವರ-ಬೆಂದವರ, ಕಣ್ಣೀರು ಒರೆಸುತ್ತಾ ನಾನಿಲ್ಲೇ ಇರುತ್ತೇನೆ. ಅದು ನನಗೆ ನಿನ್ನ ಸ್ವರ್ಗಕ್ಕಿಂತ ಹೆಚ್ಚಿನ ಸೌಖ್ಯವನ್ನಿತ್ತಿದೆ" ಎಂದು ನುಡಿದ ಸಂತ ಭೂಮಿ ಯನ್ನು ಸ್ವರ್ಗಕ್ಕೆ ಮಿಗಿಲಾಗಿಸಿದ್ದ. ಭಕ್ತಿಸಾಧಕನು ಲೌಕಿಕ ವಿಷಯ ಗಳಲ್ಲಿ ಎಂದೂ ರಮಿಸನು. ಅಂತೆಯೇ ಆತ ಸದಾ ನಿರ್ಲಿಪ್ತನು!

□

**ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ**
**ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ**
**ಶಿವನ ನೆನೆಯಿರೆ ಶಿವನ ನೆನೆಯಿರೆ ಈ ಜನ್ಮ ಬಳಿಕಿಲ್ಲ**
**ಚನ್ನಮಲ್ಲಿಕಾರ್ಜುನದೇವರ ದೇವನ ನೆನೆದು**
**ಪಂಚಮಹಾಪಾತಕರೆಲ್ಲರು ಮುಕ್ತಿವಡೆದರಂದು !**

**– ಅಕ್ಕಮಹಾದೇವಿ**

# ಸಂತೆಯೊಳಗೊಂದು ಮನೆಯ ಮಾಡಿ.....

ಡಾ. ಎಂ.ಎನ್. ನಂದೀಶ್ ಹಂಚೆ

ಬಹುದಿನಗಳ ಕಾಲ ವಿದೇಶದಲ್ಲಿ ನೆಲೆಸಿದ್ದ ಭಕ್ತರ ಒತ್ತಾಯಕ್ಕೆ ಮಣಿದು ವಿದೇಶಕ್ಕೆ ತೆರಳಲು ಪರಮಪೂಜ್ಯರು ಅಣಿಯಾದರು. ಪೂಜ್ಯರ ಜೊತೆಗೆ ಕ್ಯಾತನಹಳ್ಳಿಯ ಪ್ರಭುಸ್ವಾಮಿಗಳು, ಕುಂದೂರು ಮಠದ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು, ಶ್ರೀಮಠದ ಕಿರಿಯ ಶ್ರೀಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಶ್ರೀಮಠದ ಭಕ್ತರೂ ವಕೀಲರೂ ಆಗಿದ್ದ ಶ್ರೀ ಎಚ್. ಗಂಗಾಧರನ್ ಹೀಗೆ ಶ್ರೀಗಳ ಜೊತೆಯಲ್ಲಿ ತೆರಳುವವರ ಯಾದಿ ಸಿದ್ದವಾಯಿತು. ವಿದೇಶದಲ್ಲಿ ಯಾರೆಲ್ಲರ ಮನೆಗೆ ಹೋಗಬೇಕು ಎನ್ನುವುದರ ಜೊತೆಗೆ ಶರಣ ತತ್ವಗಳನ್ನು ಅಲ್ಲೆಲ್ಲ ಪ್ರಚಾರ ಮಾಡಲು ಸಿದ್ಧತೆ ಪೂರ್ಣಗೊಂಡಿತು.

ಈ ಎಲ್ಲ ಸಿದ್ಧತೆಗಳು ಪೂರ್ಣಗೊಳ್ಳುವುದರೊಳಗಾಗಿ ಪ್ರಯಾಣದ ದಿನ ಬಂದೇ ಬಿಟ್ಟಿತು. ಶ್ರೀಗಳು ಹಾಗೂ ಇನ್ನಿತರರು ಮೈಸೂರಿನಿಂದ ಇಂದಿನ ಚೆನ್ನೈಗೆ (ಅಂದಿನ ಮದ್ರಾಸ್) ಪ್ರಯಾಣ ಬೆಳಸಿ, ಅಲ್ಲಿಂದ ವಿದೇಶಕ್ಕೆ ತೆರಳಬೇಕಾಗಿತ್ತು. ಅಂತೆಯೇ ಪ್ರಯಾಣ ಬೆಳೆಸಿದವರು ಬೆಳಗ್ಗೆಯೇ ಮದ್ರಾಸ್ ನಗರವನ್ನು ಮುಟ್ಟಿದರು. ಆದರೆ ಶ್ರೀಗಳು ಪ್ರಯಾಣಿಸಬೇಕಾಗಿದ್ದ ವಿಮಾನದ ಸಮಯ ಸಂಜೆ ಇತ್ತು. ಬೇಗ ತಲುಪಿದ ಶ್ರೀಗಳು ಮತ್ತು ಇನ್ನಿತರರು, ಸಂಜೆಯವರೆವಿಗೂ ಸುಮ್ಮನೆ ಕಾಲಹರಣ ಮಾಡುವುದರ ಬದಲು ಸಮುದ್ರವನ್ನಾದರೂ ನೋಡಿಬರೋಣವೆಂದು ಇಮ್ಮಡಿ ಶಿವಬಸವ ಸ್ವಾಮಿಗಳು ಹೇಳಿದ ಮಾತಿಗೆ ದನಿಗೂಡಿಸಿದರು.

ಮದ್ರಾಸಿನ ಪಶ್ಚಿಮದಲ್ಲಿ ವಿಸ್ತಾರವಾಗಿ ಹಬ್ಬಿರುವ ಬಂಗಾಳಕೊಲ್ಲಿಯ ಆ ಸಮುದ್ರ ತೀರವನ್ನು ನೋಡುವುದೇ ಒಂದು ಆಹ್ಲಾದಕರ ಸಂಗತಿ. ಸಮುದ್ರಕ್ಕೆ ಅಭಿಮುಖವಾಗಿ ನಿರ್ಮಾಣಗೊಂಡಿರುವ ಈಸ್ಟ್ ವೆಸ್ಟ್ ರೋಡ್ ವಾಯುವಿಹಾರಕ್ಕೆ ಹೆಸರುವಾಸಿಯಾದ ತಾಣ. ಎಲ್ಲಕ್ಕೂ ಮಿಕ್ಕು ಸಮುದ್ರವನ್ನು ನೋಡುವುದೇ ಒಂದು ಆನಂದ. ಬಿಳಿಯ ನೊರೆಗಳನ್ನು ಹೊತ್ತು ಗಂಭೀರ ಧ್ವನಿಯಲ್ಲಿ ಭೋರ್ಗರೆಯುತ್ತಾ ಒಂದರ ನಂತರ ಒಂದರಂತೆ ಕಡಲ ತಡಿಗೆ ಅಪ್ಪಳಿಸುವ ಅದರ ಲೀಲೆಗಳ ಸೊಗಸು ನೋಡಿಯೇ ಅನುಭವಿಸಬೇಕು. ಕಾರಿನಿಂದ ಇಳಿದು ಶ್ರೀಗಳು ಇನ್ನಿತರ ಎಲ್ಲರ ಜೊತೆಗೂಡಿ ಕಾದ ಮರಳ ಮೇಲೆ ತಮ್ಮ ಹಾವುಗೆಯನ್ನು ನಿಧಾನವಾಗಿ ಇಡುತ್ತಾ ಗಂಭೀರವಾಗಿ ಸಮುದ್ರವನ್ನೇ ನೋಡುತ್ತ ಅದರ ಬಳಿ ಬಂದರು. ಕಣ್ಣು ಹಾಯಿಸಿದಷ್ಟು ವಿಸ್ತಾರವಾದ

ಆ ಕಡಲನ್ನು ನೋಡುತ್ತಾ, ಶ್ರೀಗಳ ಸ್ಮೃತಿಪಟಲದಲ್ಲಿ ಈ ಸಾಗರಕ್ಕೆ ಕೊನೆಯೇ ಇಲ್ಲವೇ ಎನ್ನುವ ಶೈಶವಾವಸ್ಥೆಯ ಮನಸ್ಸು ಕುತೂಹಲದಿಂದ ಕೇಳುವಂತೆ ಭಾಸವಾಯಿತು. ಶ್ರೀಗಳಿಗೆ ಆ ವಿವರವೆಲ್ಲ ತಿಳಿದಿಲ್ಲವೆಂದಲ್ಲ. ನಮ್ಮ ಮನಸ್ಸಿಗೆ ಅಂಥ ಅನುಭವ ಅಪ್ಪಳಿಸಿದಾಗ ನಾವು ಬಾಲ್ಯವನ್ನು ಹೊಂದುತ್ತೇವೆ. ಆ ಭವ್ಯತೆಯನ್ನು ನೋಡಿದಾಗ ನಾವೆಷ್ಟರವರು ಎಂದು ನಮ್ಮ ಮನಸ್ಸು ನಮ್ಮನ್ನೇ ಪ್ರಶ್ನಿಸುತ್ತದೆ. ಹಿಮಾಲಯವನ್ನು ನೋಡಿದಾಗ, ದಟ್ಟ ಕಾನನವನ್ನು ವೀಕ್ಷಿಸಿದಾಗ ಆಗುವ ಅನುಭವ ನಮ್ಮ ಮನಸ್ಸನ್ನು ಹಾದು ಹೋಗುವುದುಂಟು.

ತಮ್ಮ ಎಳೆಯ ವಯಸ್ಸಿನಲ್ಲಿ ಶ್ರೀಮಠದ ಎದುರು ಹರಿಯುತ್ತಿದ್ದ ಕಪಿಲಾ ನದಿಯ ದಡದಲ್ಲಿ ನೀರಿಗೆ ಕಾಲು ಇಳಿಬಿಟ್ಟು ಮುಳುಗುವ ಸೂರ್ಯನನ್ನು ನೋಡುತ್ತಾ ಏಕಾಂತದಲ್ಲಿ ತನ್ಮಯರಾಗುತ್ತಿದ್ದ ಬಾಲ್ಯದ ದಿನಗಳು ಸ್ಮೃತಿಪಟಲದಲ್ಲಿ ಹಾದುಹೋದವು. ಸಮುದ್ರದ ದೂರದಲ್ಲಿ ಮೀನು ಹಿಡಿಯಲು ಮುಂಜಾನೆ ತೆರಳಿದ್ದ ಅನೇಕ ಮೀನುಗಾರರ ದೋಣಿಗಳು ನೀರಿನಲ್ಲಿ ಮುಳುಗುತ್ತೇಳುತ್ತಾ ದಡದ ಬಳಿಗೆ ಧಾವಿಸುತ್ತಿದ್ದವು. ಒಂದು ಅಲೆ ದೋಣಿಯನ್ನು ಮುಂದಕ್ಕೆ ತಳ್ಳಿದರೆ ಮತ್ತೊಂದು ಹಿಂದಕ್ಕೆ ಎಳೆಯುತ್ತಿತ್ತು. ನಾವಿಕ ಮುಂದೆ ಸಾಗಿ ದಡ ಸೇರಲು ಸತತವಾಗಿ ಹುಟ್ಟುಹಾಕುತ್ತಿದ್ದ ದೃಶ್ಯ ಶ್ರೀಗಳಿಗೆ ಮನುಷ್ಯನ ಬದುಕಿನ ಜಂಜಡವನ್ನು ಅನಾವರಣ ಮಾಡಿಸಿದಂತೆ ತೋರಿತು. ಈ ಲೋಕದಲ್ಲಿ ಸಂಸಾರಿಗಳು ಮತ್ತು ಸನ್ಯಾಸಿಗಳಿಬ್ಬರದ್ದು ಒಂದೇ ಬಗೆಯ ಜೀವನ ಎನ್ನಿಸತೊಡಗಿತ್ತು ಶ್ರೀಗಳಿಗೆ. ಸಂಸಾರಿ ತಾನೇ ಕಟ್ಟಿಕೊಂಡ ಲೌಕಿಕ ಬಾಂಧವ್ಯದ ಸುಳಿಯಲ್ಲಿ ಸಿಕ್ಕು ಪರಿತಪಿಸಿದರೆ ಸನ್ಯಾಸಿ ಇಡೀ ಲೋಕವನ್ನೇ ಸಂಸಾರವನ್ನಾಗಿ ಮಾಡಿಕೊಂಡು ಚಿಂತಿಸುತ್ತಾನೆ. ಹೀಗೆಯೇ ನೂರೆಂಟು ವಿಚಾರಗಳು ಶ್ರೀಗಳ ಮನಸ್ಸಿನಲ್ಲಿ ಮೂಡಿ ಮುಳುಗುತ್ತಿದ್ದವು.

ಕಾವಿ ತೊಟ್ಟು ನಿಂತ ಈ ಸನ್ಯಾಸಿಗಳನ್ನು ಸಮುದ್ರ ವೀಕ್ಷಿಸಲು ಬಂದ ಎಲ್ಲರೂ ನೋಡಿ ನಮ್ರತೆಯ ಭಾವ ಹೊಂದಿ ಸಾಗುತ್ತಿದ್ದರೆ ಶ್ರೀಗಳು ಮಾತ್ರ ಆ ಜನರ ಬದುಕಿನ ವಿವರಗಳು ಹೇಗಿರಬಹುದು ಎಂದು ಯೋಚಿಸುತ್ತಾ ಮತ್ತೊಮ್ಮೆ ಸಮುದ್ರವನ್ನು ನೋಡುತ್ತಾ ನಿಂತರು. ಹೀಗೆ ಬಹಳ ಹೊತ್ತು ಕಳೆದ ನಂತರ ಇಮ್ಮಡಿ ಶಿವಬಸವಸ್ವಾಮಿ ಗಳವರು 'ತುಂಬ ಬಿಸಿಲು. ನೆರಳಿಗಾಗಿ ಇಲ್ಲಿ ಯಾವ ಮರವೂ ಇಲ್ಲ. ನೋಡಿದ್ದಾಯಿತಲ್ಲ, ಹೋಗೋಣವೇ' ಎಂದರು.

ಅಷ್ಟರಲ್ಲಿ ಶ್ರೀಗಳ ಬಳಿ ಬಂದ ಒಬ್ಬ ವ್ಯಕ್ತಿ ಅವರ ಪಾದಕ್ಕೆ ನಮಸ್ಕರಿಸಿ, ಮದ್ರಾಸಿಗೆ ಯಾವಾಗ ಬಂದಿರಿ ಎಂದು ಕನ್ನಡದಲ್ಲಿ ಕೇಳಿದನ್ನು ನೋಡು ಶ್ರೀಗಳು ಚಕಿತರಾದರು. ನೀನೇನು ಕನ್ನಡದವನೇ ಎಂದರು. ಆತ ಹೌದು ಬುದ್ಧಿ, ನಾನು ಮೈಸೂರಿನವನು. ಇಲ್ಲಿಯೇ ಬಹಳ ವರ್ಷದಿಂದ ಇದ್ದೇನೆ. ಇಲ್ಲೆ ನುಂಗಂಬಾಕಂನಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಂಡು ಜೀವನ ನಡೆಸುತ್ತಿದ್ದೇನೆ. 'ಏನು ಕೆಲಸ ಮಾಡುತ್ತೀಯಾಪ್ಪ ನೀನು'

ಎಂದರು ಶ್ರೀಗಳು. ಅದಕ್ಕೆ ಅವನು 'ಬುದ್ಧಿ ನಾನು ಗೈಡ್ ಆಗಿದ್ದೇನೆ. ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಬರುವ ಜನರಿಗೆ ಸಮುದ್ರದ ಇತಿಹಾಸ ಹೇಳಿ ಜೀವನ ಸಾಗಿಸುತ್ತೇನೆ. ಜೀವನಕ್ಕೆ ಏನೂ ತೊಂದರೆ ಇಲ್ಲ. ಸಾಕಷ್ಟು ಸಂಪಾದನೆ ಇದೆ' ಎಂದನು. ಕ್ಯಾತನಹಳ್ಳಿಯ ಶ್ರೀಗಳು ಆತನಿಗೆ 'ಈ ಸಮುದ್ರಕ್ಕೆ ಏನು ಇತಿಹಾಸವಿದೆಯಪ್ಪ? ಇದೇನು ರಾಜ್ಯವೇ ಕೋಟೆಯೆ, ಕೊತ್ತಳವೆ' ಎಂದರು. ಅದಕ್ಕೆ ಆ ಗೈಡ್ ಹೌದು ಬುದ್ಧಿ ಇದಕ್ಕೆ ಅಂತಹ ಇತಿಹಾಸವಿದೆ. ಕೇವಲ ಕೋಟೆ, ರಾಜ್ಯಗಳಿಗೆ ಮಾತ್ರವಲ್ಲ, ಪತ್ರಿಯೊಂದು ಸ್ಥಳಕ್ಕೂ ಇತಿಹಾಸವಿರುತ್ತದೆ ಎಂದನು.

ಸಹಜಕುತೂಹಲಿಗಳಾದ ಇಮ್ಮಡಿ ಶಿವಬಸವಸ್ವಾಮಿಗಳು 'ಅಷ್ಟೊಂದು ಇತಿಹಾಸವಿದೆಯೇ ಇದನ್ನು ಸ್ವಲ್ಪ ವಿವರಿಸಬಹುದೇ' ಎಂದರು. ಪರಮಪೂಜ್ಯರು ಮಾತ್ರ ಮ್ಲಾನವದನರಾಗಿ ಎಲ್ಲವನ್ನು ಮೌನದಿಂದ ವೀಕ್ಷಿಸುತ್ತಿದ್ದರು.

ಆ ಗೈಡ್ ಇದರಿಂದ ಉತ್ಸುಕನಾಗಿ, ನೋಡಿ ಸ್ವಾಜೀಜಿ. ಈ ಸಮುದ್ರ 16ನೇ ಶತಮಾನಕ್ಕೆ ಮೊದಲು ಸಮುದ್ರದ ಏರಿಳಿಕೆಯಿಂದ ಇಲ್ಲಿನ ಕರಾವಳಿಯ ಬಳಿ ಭೂಮಿ ಮುಳುಗುವ ಹಾಗೂ ಹಿಂದೆಗೆಯುವ ಚಟುವಟಿಕೆಗಳು ನಡೆಯುತ್ತಿದ್ದವು. 1640ರಲ್ಲಿ ಸೇಂಟ್ ಜಾನ್ ಕೋಟೆಯನ್ನು ಇಲ್ಲಿ ನಿರ್ಮಿಸಿದಾಗ ಸಮುದ್ರವು ಕೋಟೆಯ ಪಕ್ಕದಲ್ಲಿಯೇ ಇತ್ತು. ಕೋಟೆಯ ಸಮೀಪ ಬಂದರಿನ ಕಟ್ಟಡವು ಕೋಟೆಯ ದಕ್ಷಿಣಕ್ಕೆ ಮರಳಿನ ರಾಶಿ ಸಂಗ್ರಹ ಆಗುವ ಹಾಗೆ ಮಾಡಿತು. ಮುಂದೆ ಕಾರಣಾಂತರಗಳಿಂದ ಸಮುದ್ರ ಹಿಂದೆ ಸರಿದಿದ್ದರಿಂದ ಇಲ್ಲಿ ವಿಶಾಲವಾದ ಕಡಲತೀರ ನಿರ್ಮಾಣವಾಯಿತು. ಬಂದರು ನಿರ್ಮಿಸುವ ಮೊದಲು ಕಡಲಿನ ಮೆಕ್ಕಲು ಮಣ್ಣಿನಿಂದ ಕೂಡಿತ್ತು. 1881ರಲ್ಲಿ ಬ್ರಿಟಿಷ್ ಗೌರ್ನರ್ ಆಗಿದ್ದ ಮೌಂಟ್ ಸ್ಟುವರ್ಟ್ ಎಲ್ಫಿನ್ಸ್ಟೋನ್ ಗ್ರಾಂಟ್ ಡಫ್ ಈ ಬಂದರನ್ನು ನಿರ್ಮಿಸಿದನು.

1884ರಲ್ಲಿ ವಾಯುವಿಹಾರಕ್ಕಾಗಿ ಮೃದುವಾದ ಮರಳಿನಿಂದ ಪದರನ್ನು ನಿರ್ಮಿಸಲಾಯಿತು. ಅದೇ ವರ್ಷ ಇದಕ್ಕೆ ಮದ್ರಾಸ್ ಮರೀನಾ ಎಂದು ಹೆಸರು ನೀಡಲಾಯಿತು. ದೇಶದ ಮೊದಲ ಅಕ್ವೇರಿಯಂ ಅನ್ನು 1909ರಲ್ಲಿ ಸ್ಥಾಪಿಸಲಾಯಿತು. ಎಂದು ಮರೀನಾ ಬೀಚ್‌ನ ವಿವರಗಳನ್ನು ಸೋದಾಹರಣವಾಗಿ ನೀಡತೊಡಗಿದ. ಹೀಗೆ ಮಾತನಾಡುತ್ತಲೆ ಶ್ರೀಗಳು ಹಾಗೂ ಇನ್ನಿತರರು ರಸ್ತೆಯ ಇಕ್ಕಲೆಕ್ಕೆ ಬಂದರು. ಅಲ್ಲಿ ಅಣ್ಣಾ ಸಮಾಧಿಯ ಬಳಿ ರಸ್ತೆಯ ಪಕ್ಕದಲ್ಲಿ ಬಿರುಬಿಸಿಲಿನ ನಡುವೆಯೂ ನಿರುಮ್ಮಳನಾಗಿ ವ್ಯಕ್ತಿಯೊಬ್ಬ ಮಲಗಿದ್ದ.

ಅಷ್ಟರಲ್ಲಿ ಆ ಗೈಡ್‌ಗೆ ಶಿವಬಸವ ಸ್ವಾಮಿಗಳು ಆತ ಬೇಡವೆಂದರೂ ಹಣ ನೀಡಿ ಕಳುಹಿಸಿದ್ದರು. ಶ್ರೀಗಳು ತದೇಕದಿಂದ ಆ ವ್ಯಕ್ತಿಯನ್ನೇ ನೋಡುತ್ತಿರುವುದನ್ನು ಗಮನಿಸಿದ ಗಂಗಾಧರನ್ ಅವರು, 'ಆತನನ್ನೇಕೆ ಹಾಗೆ ನೋಡುತ್ತಿರುವಿರಿ' ಎಂದರು. "ನೋಡಿ

ಗಂಗಾಧರನ್, ನಿಜವಾದ ಸನ್ಯಾಸಿ ಎಂದರೆ ಇವನೇ" ಎಂದರು. ಅದು ಹೇಗೆ ಎಂದರು ಗಂಗಾಧರನ್ ಅದಕ್ಕೆ ಶ್ರೀಗಳು 'ನೋಡಿ, ಅವನು ಈ ಉರಿಬಿಸಿಲಿನಲ್ಲೂ ಹೇಗೆ ನಿರುಮ್ಮಳವಾಗಿ ನಿದ್ರಿಸುತ್ತಿದ್ದಾನೆ ಈ ಭಾವ ಎಂಥದ್ದು' ಎಂದರು. ಅದಕ್ಕೆ ಕ್ಯಾತನಹಳ್ಳಿ ಶ್ರೀಗಳು 'ಎಲ್ಲೋ ಆತ ಕುಡಿದಿರಬೇಕು' ಎಂದರು. ಆತನ ಮುಖ ನೋಡಿ "ಕುಡಿತದ ಯಾವ ಲಕ್ಷಣವೂ ಇಲ್ಲ, ಹೆಚ್ಚೆಂದರೆ ಊಟಮಾಡಲು ತೊಂದರೆ ಇರಬಹುದು. ಬಡವನಂತೆ ಕಾಣುತ್ತಾನೆ ಅಷ್ಟೆ ; ಈತ ಕುಡುಕನಲ್ಲ" ಅಂದರು.

"ಅಯ್ಯೋ ಬಿಡಿ ಬುದ್ದಿ, ಇಂತವರು ಬೇಕಾದಷ್ಟು ಜನ ಸಿಗುತ್ತಾರೆ ಲೋಕದಲ್ಲಿ" ಎಂದರು ಗಂಗಾಧರನ್. ಹಾಗಲ್ಲ ಅದು ಅಲ್ಲಿ ಸಮುದ್ರದಲ್ಲಿ ಮೀನು ಹಿಡಿಯಲು ಹೋಗಿದ್ದ ಅಂಬಿಗರು ಅಲೆಗಳ ಏರಿಳಿತಗಳಿಗೆ ವಿರುದ್ಧವಾಗಿ ಸಾಗಿ ಬದುಕಲು ಹವಣಿಸುವ ಅವರು ಹಾಗೂ ಉರಿಬಿಸಿಲಿನಲ್ಲಿ ಮಲಗಿರುವ ಈತ ಇಬ್ಬರೂ ಜೀವನದ ಎರಡು ಸಂಕೇತಗಳಂತಿದ್ದಾರೆ. ಮೀನುಗಾರರು ಸಂಸಾರದ ಬಂಧನದಲ್ಲಿ ಸಿಕ್ಕು ಒದ್ದಾಡುತ್ತಿರುವ ಜನರಂತೆಯೂ, ಈತ ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚದೆ, 'ನಾವು ಕುಡುಕನಿರಬಹುದು, ಬಡವನಿರಬಹುದು' ಎಂದ ಯಾವ ಮಾತಿಗೂ ಗಮನಕೊಡದೆ ಏಕಾಗ್ರತೆಯಿಂದ ಯಾವ ಜಂಜಡವೂ ಇಲ್ಲದೆ ಇರುವ ಈತ ಅನಂತವನ್ನು ಮಾತ್ರ ಧ್ಯಾನಿಸುವ ಸನ್ಯಾಸಿಯಾಗಿ ಕಾಣುತ್ತಾನೆ ಎಂದರು. ಎಲ್ಲರೂ ಒಂದು ಕ್ಷಣ ಮೌನಕ್ಕೆ ಜಾರಿದರು. ಎಲ್ಲರ ಹೃದಯದ ಕವಾಟ ತೆರೆದಂತೆ ಭಾಸವಾಗತೊಡಗಿತು ಎಂದರು ಗಂಗಾಧರನ್. ಆ ಮಾತಿಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡದೆ ಇಳಿಜಾರಿಗೆ ಜಾರುತ್ತಿದ್ದ ಸೂರ್ಯನನ್ನೊಮ್ಮೆ ದೃಷ್ಟಿಸಿ ಕಾರಿನ ಸಮೀಪಕ್ಕೆ ಬಂದರು.

□

**ಏತ ತಲೆವಾಗಿದಡೇನು, ಗುರುಭಕ್ತನಾಗಬಲ್ಲುದೆ ?**
**ಇಕ್ಕುಳ ಕೈಮುಗಿದಡೇನು, ಭೃತ್ಯಾಚಾರಿಯಾಗಬಲ್ಲುದೆ ?**
**ಗಿಳಿಯೋದಿದಡೇನು, ಲಿಂಗವೇದಿಯಾಗಬಲ್ಲುದೆ ?**
**ಕೂಡಲಸಂಗನ ಶರಣರು ಬಂದ ಬರವ, ನಿಂದ ನಿಲವ**
**ಅನಂಗಸಂಗಿಗಳೆತ್ತಬಲ್ಲರು !**

**– ಬಸವಣ್ಣ**

## ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರ ವಿಲಾಸ–ಟೀಕು

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು

ಮ॥ ಗಳಿತಾಲಂಕೃತಿವೀತಧಾತುಶಿಥಿಲೀಭೂತಾಂಗಿ ದೋಷವ್ರಜಾ ।
ಕುಲೆಭಾಸ್ಯದ್ರಸವೃತ್ತಿವರ್ಜಿತೆಸ ದಂತಸ್ಸಾರನಿರ್ಮುಕ್ತೆ ರಿ॥
ಕ್ತಲಸತ್ಪದ್ಧತಿಶಯ್ಯೆಗಿಂಪೆ ನಿಸದಾದಂದುರ್ಗುಣಂ ಚಿತ್ತ ದು।
ರ್ಬಲವದ್ದುಷ್ಕೃತಿವೃದ್ಧೆ ಸದ್ರಸಿಕಚೇತೋರಾಗಮಂ ಮಾಳ್ಪಳೇ ॥ ೧೨ ॥

**ಟೀಕ॥** ಗಳಿತ – ಜಾರಿಹೋದ – ಅಲಂಕೃತಿ – ಉಪಮಾದ್ಯಲಂಕಾರಗಳುಳ್ಳ – (ಆಭರಣಗಳುಳ್ಳ) ವೀತ ಕಳೆದುಹೋದ – ಧಾತು ಕ್ರಿಯಾದಿನದ ರೂಪಗಳುಳ್ಳ, (ತ್ವಜ್ಮಾಂಸಾದಿ ಧಾತುಗಳುಳ್ಳ) ಶಿಥಿಲಿಭೂತಸಡುಲಿದ್ದಾದ ಅಂಗಿ ಪ್ರಕೃತಿಪ್ರತ್ಯೆಯಾದ್ಯಂಗಳುಳ್ಳ – (ಕರಚರಣಾದ್ಯವಯವಗಳುಳ್ಳ,) ದೋಷ ಪದದೋಷಕಾವ್ಯದೊಷಗಳ) ವಾತಪಿತ್ತಶ್ಲೇಷ್ಮ ವಿಕಾರಗಳ) ವ್ರಜ ಸಮೂಹದಿಂದ – ಆಕುಲೆ ಕಲುಷವಾದ ಭಾಸ್ಯತ್ – ಪ್ರಕಾಶಿಸುವ ರಸಶೃಂಗಾರಾದಿಗಳಿಂದಲು – ವೃತ್ತಿ – ಕೈಶಿಕ್ಯಾದಿಗಳಿಂದಲೂ (ರಸವೃತ್ತಿ ಅನುರಾಗ ಬುದ್ಧಿಯಿಂದ – ವರ್ಜಿತೆ ರಹಿತವಾದ – ಸತ್ ವುತ್ತಮವಾದ – ಅಂತಸ್ಸಾರ – ಒಳಗಿನ ಜೀವಾಳದಿಂದ – ನಿರ್ಮುಕ್ತೆಬಿಡಲ್ಪಟ್ಟ – ರಿಕ್ತ ಬಡವಾದ ಲಸತ್ ಸ್ಫುರಿಸುವ – ಪದ್ಧತಿ ಮಾರ್ಗವುಳ್ಳ ಶೆಯ್ಯೆಗೆ ಪದಾನುಗುಣ ಸಂದರ್ಭಕ್ಕೆ (ಹಾಸಿಗೆ) ಇಂಬೆನಿಸಿದ – ಹಿತವಂದೆನಿಸಿಕೊಳ್ಳದ – ಆದಂ ಅತಿಶಯವಾಗಿ – ದುರ್ಗುಣಂ ದೋಷಗಳನ್ನು – (ದುಗುಡವನ್ನು) ಪೆತ್ತ ತಳೆದ – ದುರ್ಬಲ ವತ್ ದುಷ್ಟಬಲವುಳ್ಳ – ಎಂದರೆ ಸುಬಲವಿಲ್ಲಿದ – ದುಷ್ಕೃತಿವ್ರುದ್ಧೆ – ದುಷ್ಟಕಾವ್ಯವೆಂಬ ಮುದುಕಿಯು – ಸತ್ ಸಜ್ಜನರಾಗಿಯು – ರಸಿಕ ರಸಜ್ಞರಾಗಿಯು – ಇರುವರ ಚೇತಃ ಮನಸ್ಸಿಗೆ – ರಾಗಮಂ ಅಕ್ಕರೆಯನ್ನು – ಮಾಳ್ಪಳೆ ಮಾಡುವಳೊ – (ಇವೆಲ್ಲವೆಂದು ವ್ಯತಿರೇಕಾಶಯವು) ಇದರನ್ನೇ ಕಾಕ್ಯರ್ಥ ವೆಂಬುವರು ॥ತಾ॥ ರಸಜ್ಞರಾದ ಪ್ರಾಯದವರಿಗೆ – ಮುದುಕಿಯು ಅಸಹ್ಯವಾಗುವಂತೆ ದುಷ್ಟಕಾವ್ಯವು ಇಷ್ಟವಾಗುವದೆಂಬುದರಿಂದ – ಅಲಂಕೃತಳಾದ ತರುಣಿಯಂತೆ – ಸತ್ಕಾವ್ಯವು ರಸಜ್ಞರಿಗೆ ಅನುರಾಗವನ್ನುಂಟುಮಾಡುವದೆಂಬರ್ಥವು ಆರ್ಥಿಕವಾಗಿ ಸಿದ್ಧಿಸುವದು ॥ ಕ್ಲಿಷ್ಟರೂಪಕಾಲಂಕಾರವು ಮತ್ತೇಭವಿಕ್ರೀಡಿತವೃತ್ತ ॥ ೧೨ ॥

ಮ॥ ಜ್ವರತಪ್ತಂ ಸುಧೆಯಂ ಸುಧಾಂಬುನಿಧಿಯಂ ಭೇಕಂಸು ದಾರೋಚಿಯಂ ।
ವಿರಹಾವಿಷ್ಟನನಂತರತ್ನರುಚಿಯಂ ಘೋರಕರವ್ಯೀಣೆಯಿಂ ।
ಚರದೊಳ್ಪಂಬದಿರಂ ಲಸನ್ಮುಕುರಮಂಜಾತ್ಯಂಧಮದ್ಯದ್ಗುಣಾ ।
ಕರಸತ್ಕಾವ್ಯಮನಜ್ಞನೇಂ ಪಳಿಯೆ ಕುಂದಾದಪ್ಪುದೆ ಧಾತ್ರಿಯೋಳ್ ॥ ೧೩ ॥

**ಟೀಕ॥** ಜ್ವರತಪ್ತಂ – ಜ್ವರರೋಗದಿಂದ ಬೇಯುವವನು – ಸುಧೆಯ ಹಾಲನ್ನು – ಭೇಕಂ ಕಪ್ಪೆಯು – ಸುಧಾಂಬುನಿಧಿಯಂ – ಪಾಲ್ಗಡಲನ್ನು – ವಿರಹಾವಿಷ್ಟಂ – ಅಗಲಿಕೆಯಿಂದ ಆಕ್ರಮಿಸಲ್ಪಟ್ಟವನು – ವಿರಹಿಯು – ಸುಧಾರೋಚಿಯಂ – ಅಮೃತಕಿರಣನಾದ ಚಂದ್ರನನ್ನು – ಘೂಕಂ ಗೂಗೆಯು – ಅನಂತರತ್ನ ರುಚಿಯಂ – ಕೊನೆಯಿಲ್ಲದ ಶ್ರೇಷ್ಠವಾದ ಹೊಳಪುಗಳುಳ್ಳ ಸೂರ್ಯನನ್ನು – ಬಧಿರಂ ಕಿವುಡನು ರಣದ್ವೀಣೆಯ – ಕಬ್ದಿಸುತ್ತಿರುವ ವೀಣಾವಾದ್ಯದ ಇಂಚರದ – ಇನಿದಾದ ಸ್ವರದ ಒಳ್ಪಂ – ಒಳ್ಳಿತನ್ನು ಜಾತ್ಯಂಧ ಹುಟ್ಟು ಕುರುಡನು – ಲಸನ್ಮುಕುರಮಂ – ಎಸೆವ ಕನ್ನಡಿಯನ್ನು – ಅಜ್ಞಂ ಮೂಢನು – ಉದ್ಯತ್ ಆವಿರ್ಭವಿಸುತ್ತಿರುವ ಗುಣ ಶ್ಲೇಷಾದಿಗುಣಗಳಿಗೆ ಆಕರಗಣೀಯಾದ – ಸತ್ ವುತ್ತಮವಾದ ಕಾವ್ಯಮಂ ಕಬ್ಬವನ್ನು – ಪಳಿಯೆ ಕೊರಚಾಡಿದರೆ ಕುಂದಾದಪ್ಪುದೇಯೇಂ ಕೊರತೆಯಾದೀತೇಯೇನು (ಇಲ್ಲವೆಂದು ವ್ಯತಿರೇಕಾಶಯವು ॥

**ತಾ॥** ಹೀನರುವುತ್ತಮನಿಷಯಗಳಂ ನಿಂದಿಸಲು, ಅವುಗಳಉತ್ತಮತ್ವವನ್ನು ತಿಳಿದು – ಆನಂದಿಸಲು ಶಕ್ತಿಸಾಲದೆ ಅದರ ಪ್ರಯೋಜನಮಂ ಪಡೆಯಲಾರದೆ ದೂಷಿಸುವದರಿಂದ ಆವುತ್ತಮ ವಿಷಯಗಳಿಗೆ ಹಾನಿಯಿಲ್ಲವು.

ಕಂ॥ ಧರೆಯೊಳ್ ಸದ್ಬುಧನುರರೀ ಕರಸಿದ ಸತ್ಕೃತಿಯನಧಮನೇಗೆಯ್ವನೊಭಾ।
ಸ್ಕರಕರಗೃಹೀತನಳಿನಮ ನರುದೋಷಾಕರನದೆಂತುಮೇಂ ಕೊರಗಿಪನೇ ॥ ೧೪ ॥

**ಟೀಕ॥** ಧರೆಯೊಳ್ – ಭೂಮಿಯಲ್ಲಿ – ಸದ್ಬುದಂ ಸಜ್ಜನರಾದ ಪಂಡಿತರು – ಉರರೀಕರಿಸಿದ – ಒಪ್ಪಿ ಸ್ಥಿರಪಡಿಸಿದ – ಸತ್ಕೃತಿಯಂ ಉತ್ತಮಕಾವ್ಯವನ್ನು – ಅಧಮಂ ನೀಚನು – ಏಗೆಯ್ಯನೊ – ಏನುಮಾಡುವನು ಏನೊ (ಏನುಮಾಡಲಾರನು) ಹೇಗಂದರೆ,– ಭಾಸ್ಕರ – ಸೂರ್ಯನ – ಕರ – ಕಿರಣಗಳಿಂದ – ಗೃಹೀತ – ಅರಳಿಸಲು ಸ್ವೀಕರಿಸಲ್ಪಟ್ಟ – ನಳಿನಮಂತಾವರೆಯನ್ನು – ಉರುದೋಷಾಕರನ್ – ಅತಿಶಯವಾದ ಯಿರುಳನ್ನು – ಮಾಡುವ ದೋಷಗಳಿಗೆ – ಕಡಿಯಾದ ಎಂದು ಧ್ವನಿಚಂದ್ರನು – ಆದ ಆ ತಾವರೆಯನ್ನು – ಎಂತು – ಹೇಗಾದರು ಕೊರಗಿಪನೇಯೇಂ – ಕೊರೆಯಿಸ ಲಾಪುವನೇ – ಏನು (ಇಲ್ಲ ವೆಂದಾಶಯವು) ತಾ॥ ಸೂರ್ಯನಿಂದತಾವರೆಯು ಅರಳಿಸಲ್ಪಡುತ್ತಿರುವಾಗ ಚಂದ್ರನುದಯಿಸಿದರೂ ಏನು ಮಾಡಲಾರನು; ಹಾಗೆಯೇ ವಿದ್ಯಾರಸರು ಅಂಗೀಕರಿಸಿದ ಕಾವ್ಯವನ್ನು ನಿಂದಕನೇನು ಮಾಡಲಾರನು? ಲೋಕದಲ್ಲಿ ಮಹದನುಗ್ರಹವಿರುವವರಿಗೆ ಕ್ಷುದ್ರಬಾಧೆಗಳು ಅಕಿಂಚಿತ್ಕರಗಳಾಗುವದೆಂದು ಭಾವವು. ದೃಷ್ಟಾಂತಾಲಂಕಾರವು ಬಿಂಬಸ್ಥಾನೀಯವಾದ ಅಪ್ರಕೃತಾರ್ಥವನ್ನು ಜೋಡಿಸಿ ಹೇಳುವಿಕೆಯೇ ದೃಷ್ಟಾಂತವು ॥ ೧೪ ॥

ಕಂ॥ ತೆಗಳಲ್ಬಲ್ಲಂ ಖಳ ತಾಂ । ನೆಳಲ್ಬಲ್ಲನೆ ನವೀನಕೃತಿಯಂ ಶಾಖಾ ।
ಮೃಗಮಲರಮಾಲೆಗೀಳ । ಲ್ಮಿಗೆ ಬಲ್ಲುದದಲ್ಲದಂತಿರೇಂರಚಿಮಿಕುಮೇ ॥ ೧೫ ॥

**ಟೀಕ॥** ಖಳ – ದುರ್ಜನನು – ತಾಂ ತಾನಾಗಿ – ತೆಗಳಲ್ – ವಳಿದಾಡುವದಕ್ಕೆ – ಬಲ್ಲಂ ತಿಳಿದಿರುವನೇ ಹೊರತು – ನವೀನಕೃತಿಯಂ ಹೊಸ ಗ್ರಂಥವನ್ನು – ಅಥವಾ

ಆಶ್ಚರ್ಯಕರವಾದ ಕಾವ್ಯವನ್ನು – ನಗಳಲ್ ಮಾಡುವದಕ್ಕೆ – (ಪ್ರಚಾರಗೊಳಿಸುವದಕ್ಕೆ) ಬಲ್ಲನೆ – ತಿಳಿದಿರುವನೊ – ಇಲ್ಲವು ಶಾಖಾಮೃಗಂ – ಕಪಿಯು ಅಲರಮಾಲೆ – ಹುವ್ವಿನದಂಡೆಯನ್ನು – ಕೀಳಲ್ ಕಿತ್ತುಹಾಕುವದಕ್ಕೆ – ಮಿಗೆ ಹೆಚ್ಚಾಗಿ – ಬಲ್ಲುದಲ್ಲದೆ – ತಿಳಿದಿರುವುದೇ ಹೊರತು – ಅದು ಆ ಕೋತಿಯು – ಅಂತಿರೆ – ಹಾಗೆ ಪುಷ್ಪಸರ ವಾಗಿರುವಂತೆ – ರಚಿಯಿಕುಮೇ – ಕಟ್ಟೀತೊ ಏನು? (ಇಲ್ಲವು)

**ತಾ॥** ಮಂಗನು ಹುವ್ವಿನ ಸರವನ್ನು ಪರಚಿಡುವಂತೆ ದುಷ್ಟನು ದೂಷಿಸುತ್ತಾನೆ. ಆ ಮಂಗನು ದಂಡೆಯನ್ನು ಕಟ್ಟಲಾರದು. ದುಷ್ಟನು ಕಾವ್ಯವನ್ನು ಹೇಳಲಾರನು. ಕೆಡಿಸುವುದು ಎಲ್ಲರಿಂದಲೂ ಆಗುತ್ತೆ. ಒಳ್ಳೆ ಕೆಲಸವನ್ನು ಮಾಡಿ ರಸಿಕರನ್ನು ಮೆಚ್ಚಿಸುವುದು – ಪ್ರಯಾಸವೆಂದು ಭಾವವು ದೃಷ್ಟಾಂತಾಲಂಕಾರವು ॥ ೧೫ ॥

ಕಂ॥ ಪಿರಿದಾಯಾಸದೆಗುಣಮಂ ।
ದೊರಕೊಳಸಿದೊಡಂ ಖಲಂಗೆ ಗುಣಮವಶ್ಚಾ
ತ್ಕರಿಸಿಗುಣಿಯಂನಿಭೇದಿಪ ।
ಪರಿತೀಕ್ಷ್ಣ ಮುಖಂಗೆ ಸೂಚಿಯಂತಿರೆ ಸಹಜಂ ॥

**ಟೀಕ॥** ತೀಕ್ಷ್ಣಮುಖಂಗೆ – ಕ್ರೂರವಾದ ಮೋರೆಯುಳ್ಳ – ಖಲಂಗೆ –ದುಷ್ಟನಿಗೆ – ಪಿರಿದಾಯಾಸದೆ – ಮಹಾಪ್ರಯಾಸದಿಂದ ಗುಣಮಂ – ಸುಬುದ್ಧಿಲಕ್ಷಣವನ್ನು – ದೊರಕೊಳಿಸಿದಡಂ – ಉಂಟುಮಾಡಿದರು. ಗುಣಮಂ – ಅಸುಬುದ್ಧಿ ಲಕ್ಷಣವನ್ನು – ಪಶ್ಚಾತ್ಕರಿಸಿ – ಹಿಂದಕ್ಕೆ ಹಾಕಿ – ಗುಣಿಯಂ – ಗುಣವಂತನನ್ನು – ವಿಭೇದಿಪ – ಪೀಡಿಸುವ ಪರಿ ಬಗೆಯು – ಸೂಚಿಯಂತೆ – ಸೂಚಿಯ ಹಾಗೆ – ಇರೆ ಇರಲು – ಸಹಜಂ– ಸ್ವಭಾವವು – ಅರ್ಥಾಂತರವು – ತೀಕ್ಷ್ಣಮುಖಂಗೆ – ಸಂಣಗೆ ಹರಿತವಾಗಿರುವ ಕೊನೆಯುಳ್ಳ – ಖಲಂಗೆ – ದುಷ್ಟವಾಗಿರುವ ಸೂಜಿಗೆ – ಪಿರಿದಾಯಾಸದೆ – ಬಹುಶ್ರಮದಿಂದ ಗುಣಮಂ – ಎಳೆಯನ್ನು ದೊರಕಿಸಿದೊಡಂ – ಬೆಜ್ಜಕ್ಕೆ ಪೋಣಿಸಿದರು ಗುಣಮಂ ಆನೂಲನ್ನು ಪಶ್ಚಾತ್ಕರಿಸಿ – ತಿಕದ ಕೆಳಗೆ ಹಾಕಿಕೊಂಡು – ಗುಣಿಯಂ – ಎಳೆಗಳುಳ್ಳ ವಸ್ತ್ರವನ್ನು – ವಿಭೇದಿಪ ಚುಚ್ಚಿ ಹೊಕ್ಕು – ಹೊಲೆಯುವ ಪರಿ – ಬಗೆಯು – ಸಹಜಂ – ಸ್ವಭಾವವು.

**ತಾ॥** ಸಣ್ಣ ಸೂಜಿಗೆ ದಾರವನ್ನು ಪೋಣಿಸುವ ಹಾಗೆ ದುಷ್ಟನಿಗೆ ಆ ಮಾತ್ಸರ್ಯಾದಿ ಗುಣವನ್ನು ಇತರರು ಪ್ರಯಾಸಪಟ್ಟು ಉಂಟುಮಾಡಿದರು. ಆ ದುಷ್ಟನು ಕ್ರೂರಮುಖನಾದ್ದರಿಂದ ಆ ಗುಣವನ್ನು ಪುರಸ್ಕರಿಸದೆ ಗುಣವಂತರನ್ನೇ ಸೂಜಿಯ ಹಾಗೆ ಆಕ್ಷೇಪಿಸಿ ಚುಚ್ಚಿ ಪೀಡಿಸುವನು, ಈ ದುರ್ಲಕ್ಷಣವು ದುಷ್ಟನಿಗೆ ಸಹಜವಾಗಿರುವುದು ಗುಣ ತೀಕ್ಷ್ಣಮುಖ ಈ ಶಬ್ದಗಳಿಗೆ ಅರ್ಥಶ್ಲೇಷವಿರುವದರಿಂದ ಸೂಜಿಯೆಂಬ ಉಪಮಾನದಲ್ಲಿ ಗುಣ ಪಶ್ಚಾತ್ಕರಣವು ಗುಣವಿಭೇದನವು, ತೀಕ್ಷ್ಣಮುಖತ್ವವು, ಎಂಬ ಸಾಧಾರಣ ಧರ್ಮಗಳು ಸಲ್ಲುವದರಿಂದ ಶ್ಲೇಷಮೂಲ ಕೋಪಮಾಲಂಕಾರವು ॥ ೧೬ ॥

□

ವೀರಶೈವ ಅಪ್ರಕಟಿತ ಕೃತಿಮಾಲಿಕೆ

# ಬಸವಾದಿ ಪ್ರಮಥರ ಪಾರಾಯಣ ಸ್ತೋತ್ರ

ಡಾ. ವೈ.ಸಿ. ಭಾನುಮತಿ

ಭಗವಂತನ ಸ್ತುತಿ, ನಾಮಸ್ಮರಣೆ, ಪಾರಾಯಣ ಮಾಡುವ ಸಂಪ್ರದಾಯ ಬಹುತೇಕ ಎಲ್ಲ ಧರ್ಮಗಳಲ್ಲಿ ಕಂಡುಬರುತ್ತದೆ. ವೈದಿಕ ಧರ್ಮದಲ್ಲಿ ಸ್ತೋತ್ರಸಾಹಿತ್ಯ ವಿಪುಲವಾಗಿ ಬೆಳೆದುಬಂದಿದೆ. ವೀರಶೈವಧರ್ಮ ಕೂಡ ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ ಸ್ತೋತ್ರ ಸಾಹಿತ್ಯ ರಚನೆಗೆ ಇಂಬು ನೀಡಿದೆ. ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಶರಣರ ಚರಿತ್ರೆ ಕಾಲಾನಂತರದಲ್ಲಿ ಸಾಹಿತ್ಯರಚನೆಗೆ ವಸ್ತುವಾಗುವುದರ ಜೊತೆಗೆ ಶರಣರು ಪೂಜನೀಯವಾಗಿ ದೈವತ್ವದ ಸ್ಥಾನ ಪಡೆಯುತ್ತಾರೆ. ವೀರಶೈವ ಧರ್ಮವನ್ನು ಕಟ್ಟಿ ಬೆಳೆಸುವುದರೊಂದಿಗೆ ಅವರು ಶಿವಭಕ್ತಿಯನ್ನೂ ಪ್ರಚುರಪಡಿಸಿದರು. ತಾವು ನಂಬಿದ, ನೆಚ್ಚಿದ ಧರ್ಮವು ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದರು. ಮುಂದಿನ ಪೀಳಿಗೆಯವರಿಗೂ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಸಂದೇಶವನ್ನು ರವಾನಿಸಿದರು. ನಿತ್ಯಪೂಜೆಯಲ್ಲಿ ಸ್ತೋತ್ರದ ಮೂಲಕ ಅಂದಿನ ಶಿವಶರಣರ ಚರಿತ್ರೆಯನ್ನು ಸ್ಮರಣೀಯಗೊಳಿಸಿದರು. ವೀರಶೈವ ಸ್ತೋತ್ರಸಾಹಿತ್ಯದಲ್ಲಿ 'ಬಸವಾದಿ ಪ್ರಮಥರ ಪಾರಾಯಣ ಸ್ತೋತ್ರ'ವೂ ಒಂದು. ಈ ಸ್ತೋತ್ರದ ವೈಶಿಷ್ಟ್ಯವೆಂದರೆ ಇಲ್ಲಿ ಅನೇಕ ಶರಣರನ್ನು ಒಂದೇ ಸ್ತೋತ್ರದಲ್ಲಿ ಜೋಡಿಸಿರುವುದು.

'ಪ್ರಮಥ' ಶಬ್ದವು ಭಕ್ತ, ಅದರಲ್ಲಿಯೂ 'ಲಿಂಗಧಾರಿ ಶಿವಭಕ್ತ' ಎಂಬ ಅರ್ಥದಲ್ಲಿ ಚಾಲ್ತಿಯಲ್ಲಿದೆ. ಪ್ರಮಥರು ಎಂದಾಗ ಶಿವಗಣಗಳು ಎಂದು ಅರ್ಥೈಸಲಾಗಿದೆ. ಬಸವ ಪುರಾಣದಲ್ಲಿ ಪ್ರಮಥರ ಮಹಿಮೆ ಎಂದು ವಿವರಿಸುವ ಒಂದು ಪ್ರಸಂಗ ಹೀಗಿದೆ – ರಜತಾಚಲವಾಸಿಯಾದ ಪಾರ್ವತಿಯು ಶಿವಪೂಜೆಗೆಂದು ಹೋದಾಗ ಅಲ್ಲಿದ್ದ ಪ್ರಮಥರೆಲ್ಲ ಶಿವಸಾರೂಪ್ಯರಾಗಿರುವುದನ್ನು ಕಂಡು ಸ್ತಬ್ಧಳಾಗುತ್ತಾಳೆ. ಆಗ ಪ್ರಮಥರು ತಮ್ಮ ಸ್ವರೂಪವನ್ನು ತೋರಿಸುತ್ತಾರೆ. ಪಾರ್ವತಿ ಸಂತಸಗೊಂಡು ಅವರಿಗೆಲ್ಲ ಆರೋಗಣೆ ಸಿದ್ಧಮಾಡುತ್ತಾಳೆ. ಆಗ ಶಿವ ಒಬ್ಬ ಪ್ರಮಥನನ್ನು ಕರೆದು ಆರೋಗಣೆ ಸಿದ್ಧವಾಗಿದೆಯೆ, ತಿಳಿದುಕೊಂಡು ಬಾ ಎಂದು ಕಳಿಸುತ್ತಾನೆ. ಆ ಪ್ರಮಥ 'ನನಗೆ ಹಸಿವಾಗಿದೆ' ಎಂದು ಪಾರ್ವತಿಗೆ ಹೇಳಲು ಆಕೆ ಆರೋಗಣೆ ಮಾಡಿಸುತ್ತಾಳೆ. ಆತ ಬೆಟ್ಟದಷ್ಟು ದೊಡ್ಡದಾದ ತುತ್ತುಗಳನ್ನು ಹಾಕಿಕೊಳ್ಳುತ್ತ ಮಾಡಿದ್ದ ಅಡುಗೆಯನ್ನೆಲ್ಲ ತಿಂದರೂ ಅರ್ಧ ಹೊಟ್ಟೆ ಮಾತ್ರ ತುಂಬಿತೆಂದು ಹೇಳುತ್ತಾನೆ. ಆಗ ಪಾರ್ವತಿಯೇ ಶಿವನಿಗೆ ಮೊರೆಯಿಟ್ಟು ಸಂದರ್ಭವನ್ನು ನಿರ್ವಹಿಸುವ ಪ್ರಸಂಗ ಬರುತ್ತದೆ.

ತ.ಸು. ಶಾಮರಾಯರು ತಮ್ಮ 'ಶಿವಶರಣ ಕಥಾರತ್ನ ಕೋಶ'ದಲ್ಲಿ ಶ್ರೀನಂದಿ ಶಿವಶರಣ ಮೊದಲಾದ ಪ್ರಮಥಗಣಗಳ ದೊಡ್ಡ ಯಾದಿಯನ್ನೇ ಕೊಟ್ಟಿದ್ದಾರೆ. ಈ ಯಾದಿಯಲ್ಲಿ ಪ್ರಮಥಗಣರು, ಯೋಗಾಚಾರ್ಯರು, ತ್ರಿಷಷ್ಟಿಗಣರು, ಷೋಡಶಗಣರು, ರುದ್ರಗಣರು ಎಂದು ವಿಂಗಡಿಸಲಾಗಿದೆ.

ಪ್ರಸ್ತುತ 'ಬಸವಾದಿ ಪ್ರಮಥರ ಪಾರಾಯಣ ಸ್ತೋತ್ರ' ಎಂಬ ಕಿರುಕೃತಿಯ ಕವಿ ಕಾಲ ವಿಚಾರಗಳೇನೂ ತಿಳಿದುಬಂದಿಲ್ಲ. ಹಸ್ತಪ್ರತಿಯ ಸ್ಥಿತಿ ಮತ್ತು ಇಲ್ಲಿನ ಬರಹವನ್ನು ಗಮನಿಸಿದರೆ ಒಂದು ಶತಮಾನದಷ್ಟು ಹಿಂದೆ ಅಂದರೆ 1900ರಿಂದ 1920ರ ಅವಧಿಯಲ್ಲಿ ರಚಿತವಾಗಿದೆ ಎಂದು ಹೇಳಬಹುದು. ಕವಿ 'ಸ್ತುತಿಸಿ ಬಾಳ್ವೆನು ಪ್ರಮಥರೆಲ್ಲರ ಪೃಥ್ವಿಯೊಳಗತಿ ಮೆರೆದರ' ಎಂದು ಹೇಳಿದ್ದು ಈ ರಚನೆಗಳ ಹಿಂದಿರುವ ಉದ್ದೇಶ ಸ್ಪಷ್ಟವಾಗುತ್ತದೆ. ಇದರಲ್ಲಿ 9 ಹಾಡುಗಳಿವೆ. ಅಂತ್ಯದಲ್ಲಿ ಒಂದು ಮಂಗಳಾರತಿ ಪದವಿದೆ. ಹಾಡುಗಳಲ್ಲಿ ಪ್ರಾಸ ಇದ್ದರೂ ಇತರ ಛಂದೋನಿಯಮಗಳಾಗಲಿ, ವ್ಯಾಕರಣ ನಿಯಮಗಳಾಗಲಿ ಕಂಡು ಬರುವುದಿಲ್ಲ. ಬಸವಣ್ಣ, ಅಲ್ಲಮಪ್ರಭು, ಕಲ್ಲಿಶೆಟ್ಟಿ, ಮಲ್ಲಿನಾಥ, ಚೆಂಗಳೆ, ಕಳಚೆಂಗ, ಮಲ್ಲಣಾರ್ಯ, ಮುಸುಟಿ ಚೌಡಯ್ಯ, ಅಜಗಣ್ಣ, ನಿಂಬವ್ವೆ, ಮಲುಹಣಿ ಹೀಗೆ ಹಲವಾರು ಶರಣರ ಹೆಸರುಗಳು ಇಲ್ಲಿ ಕಂಡುಬರುತ್ತವೆ. ಕೆಲವು ಹೆಸರುಗಳು ನೂತನವಾಗಿವೆ. ಅವುಗಳ ಕುರಿತು ಅಧ್ಯಯನ ಮಾಡಬೇಕಾಗಿದೆ. ಕವಿಗೆ ಇಲ್ಲಿ ಉಕ್ತರಾದ ಶರಣರ ಬಗ್ಗೆ ಅಪಾರ ಭಕ್ತಿ. ನನ್ನನ್ನು ಅನವರತ ರಕ್ಷಿಸಿ ಎಂದು ಅವರಲ್ಲಿ ಪ್ರಾರ್ಥಿಸಿದ್ದಾನೆ. ಈ ಶಿವಶರಣರ ವಿವರವಾದ ಕಥೆಗಳು ವೀರಶೈವ ಕಾವ್ಯಗಳಲ್ಲಿ ದೊರೆಯುತ್ತವೆ.

ಇಲ್ಲಿನ ಪ್ರಮಥರು ತಮ್ಮ ಅತಿಶಯವಾದ ಭಕ್ತಿಯಿಂದ ವೀರಶೈವ ಧರ್ಮವನ್ನು, ಸಂಸ್ಕೃತಿಯನ್ನು ಉದ್ಧರಿಸಿದರು. ಇಂಥವರು ಯಾವ ಕಾಲಕ್ಕೂ ಸ್ಮೃತಿಯಲ್ಲಿ ಇರಬೇಕೆಂಬ ಆಶಯ ಇಂಥ ಸ್ತೋತ್ರಗಳದ್ದು. ಇಲ್ಲಿ ಕೆಲವು ಶರಣರ ಸಂಗತಿಗಳು ಸಂಕ್ಷಿಪ್ತವಾಗಿ ಬಂದಿವೆ. ಮತ್ತೆ ಕೆಲವರು ನಾಮಮಾತ್ರವಾಗಿ ಕಂಡುಬರುತ್ತಾರೆ. ಭಕ್ತರು ಈ ಸ್ತೋತ್ರಗಳಿಗೆ ರಾಗ ಹಾಕಿ ಹಾಡುತ್ತಿದ್ದರೆಂದು ತೋರುತ್ತದೆ. ಸ್ತೋತ್ರಪಠಣದ ಫಲವನ್ನೂ ಇಲ್ಲಿ ಹೇಳಲಾಗಿದೆ.

ಇಲ್ಲಿನ ಪಠ್ಯವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕೆ.ಬಿ.694 ಕ್ರಮಸಂಖ್ಯೆಯ ಕಾಗದ ಪ್ರತಿಯ ಪುಟ 173–181ರಿಂದ ಸಂಪಾದಿಸಲಾಗಿದೆ. ಮೊದಲ ಹಾಡು 'ಬಸವಾದಿ ಪ್ರಮಥರ' ಎಂಬುದು ಸರ್ಪಭೂಷಣ ಶಿವಯೋಗಿಗಳ ರಚನೆಯಾಗಿರುವುದರಿಂದ ಆ ಹಾಡನ್ನು ಇಲ್ಲಿ ಕೈಬಿಡಲಾಗಿದೆ. ಇತರ ಹಾಡುಗಳೂ ಏಕಕವಿಕೃತವೆ ಎಂಬ ಬಗ್ಗೆ ಸಂಶಯ ತೋರುತ್ತದೆ. ಕೃತಿಯ ಪಾಠಗಳಲ್ಲಿ ತೊಡಕುಗಳಿವೆ. ಸಂಪಾದಕರ ತಿದ್ದುಪಡಿ ಯನ್ನು ಕಂಸದಲ್ಲಿ ಸೂಚಿಸಿದೆ. ಕೆಲವು ಪಾಠಗಳು ಕ್ಲಿಷ್ಟವಾಗಿವೆ.

## ಬಸವಾದಿ ಪ್ರಮಥರ ಪಾರಾಯಣ ಸ್ತೋತ್ರ

**ರಾಗ ॥ ನಾದ ನಾಮಕ್ರಿಯೆ ॥ ಆದಿತಾಳ ॥**

ಸ್ತುತಿಸಿ ಬಾಳ್ವೆನು ಪ್ರಮಥರೆಲ್ಲರ ಪೃಥ್ವಿಯೊಳಗತಿ ಮೆರೆದರಂ
ಅತಿಶಯದಿ ಶ್ರೀ ಸಾಂಬಲೋಕವನಾಳ್ದರಂ ಸಲೆ ಬಾಳ್ದರಂ ॥ ಪ ॥

ಬಲ್ಲಿದರು ಬಸವಾದಿ ಪ್ರಮಥರು ಅಲ್ಲಮೇಶನ ರೂಪನು
ಕೊಲ್ಲಪುರದೊಳು ಖುಲ್ಲ ಸಿದ್ಧರ ಗೆದ್ದ ರೇಣುಕಸಿದ್ಧನು
ಕಲ್ಲಶೆಟ್ಟಿಯು ಮಲ್ಲಿನಾಥನು ಚೆಲ್ವ ಚೆಂಗಳೆದೇವಿಯು
ಮೊಲ್ಲೆ ಜಗದೇವಯ್ಯ ಕಲಿಗಣ ಸಲ್ಲಲಿತ ಶಿವಶರಣರು ॥ 1 ॥

ಅಲ್ಲಮಪ್ರಭು ಅಮೃತನಾಥನುಮೇಶನಂ ಪಂಡಿತೇಶನಂ
ಮಲ್ಲಿಕಾರ್ಜುನ ಮರುಳದೇವ ಸಿದ್ಧೇಶನಂ ಅಘನಾಶನಂ
ಸಲ್ಲಲಿತ ಸೌರಾಷ್ಟ್ರ ಸೋಮ ಸುಜ್ಞಾನಿಯಂ ತಿರುಜ್ಞಾನಿಯಂ
ಬಲ್ಲ ಮನುಜರ ದೇವ ಬಸವ ದಂಡೇಶನಂ ಚಂಡೇಶನಂ ॥ 2 ॥

ಮಳೆಯರಾಜ ಏಣಾದಿನಾಥನ ಮೂರ್ತಿಯಂ ಪೊಸ ಕೀರ್ತಿಯಂ
ಹೊಳೆಯ ದಾಂಟಿಪ ಶರಣ ಸಿಂಧು ಮರಾಳನಂ ಸಿರಿಯಾಳನಂ
ಪೊಳಲಸಹಿತವೆ ಪಾಲಗುರ್ಜರ ದೇಶನಂ ತೆಲುಗೇಶನಂ
[1][ಕಳ][1]ಚಂಗ ಕುಲಶ್ವರೆಯರ ಕಲಿಕಾಮನಂ ಚಿಕ್ಕಸೋಮನಂ ॥ 3 ॥

ಮಲುಹಣಾರ್ಯನು ಶಿವ ಬಳ್ಳ ಪೂಜಿಪ ಕಳೆಯ ಚೆಂಗಳೆ ಪೆರುಮಳೆ
ಎಳೆಯ ನಲ್ಲಳೆ ವೈಜಕವ್ವೆಯು ಪೊಳೆವ ಸೂಳೆ ನಿಂಬವ್ವೆಯಂ
ಮೋಳಿಗೆಯ ಮಾರಯ್ಯ ಮನೋಹರ ಮಲುಹಣನು ಚೋಳರಾಯನಂ
ಮಲುಹಣಿಯು ಸುಳಿನಾಭಿ ಮಲ್ಲಳೆ ಬಳೆಯಗಾರ ಬಾಚಯ್ಯನಂ ॥ 4 ॥

ಪಲ್ಲಿಮಾರನು ಪರಮಹಂಸನು ಗೊಲ್ಲಾಳನು ಗುರುಭಕ್ತನು
ಎಲ್ಲಗೊಂಡಲದೇವಿಯಂ ಬಿಲ್ಲದೇವಿಯಂ ಚೀಲಾಳನಂ
ಸಲ್ಲಲಿತವೀಬಾಲಬ್ರಹ್ಮಿಯು ಕೋಲಶಾಂತ ವಿಶಾಲನಂ
ಎಲ್ಲ ಕಾಲದ ಹಿರಿಯ ಬಲ್ಲಿದರಾಯನಂ ಉಲ್ಲಾಸಿಯಂ ॥ 5 ॥

ಚನ್ನಬಸವಣ್ಣನಪ್ಪಣ್ಣ ಮೋಳಿಗೆ ಮಾರನಂ ಪಡಿಹಾರನಂ
ಹೊನ್ನಕಂದರಂ ಹಲಾಯುಧನು ಕಿನ್ನರೇಶನಂ ಸಕಲೇಶನಂ
ಕನ್ನಪ್ಪ ಕರಿಕಾಲಚೋಳ ಸತ್ಯೇಂದ್ರನಂ ಮುಕ್ತೇಂದ್ರನಂ
ಮನ್ನಣೆಯ ಮಹದೇವ ಮರಟದ ಬಂಕನಂ ಶಿವಲೆಂಕನಂ ॥ 6 ॥

---

1 ಕಾಳೆ (ಕ)

ಮಾನಕಂಜರ ಮಲುಹಣನು ಮಧುವರಸನಂ ಚಂದಿ[1][ಮ][1]ರಸನಂ
ಸ್ವಾನುಭಾವ ಸತ್ಯಣ್ಣ ಸಂಗನಬಸವನಂ [ಉ]ರಿಲಿಂಗನಂ
ಜ್ಞಾನ ಏಕೋದೇವ ಬಲ್ಲಾಳನಂ ಗೊಲ್ಲಾಳನಂ
ಭಾನುನಯನವನಿತ್ತ ಶಬರ ಎನ್ನಯ್ಯನಂ ಕನ್ನಯ್ಯನಂ ॥ 7 ॥

ಕಿನ್ನರಿಯ ಬ್ರಹ್ಮಯ್ಯ ಕನ್ನದ ಬ್ರಹ್ಮಯ್ಯ [2][ನಕ್ಕಿನೈನಾರನಂ][2]
ಉನ್ನತದ ಕಕ್ಕಯ್ಯ ಶೂಲದ ಬೊಮ್ಮಿಯಂ ಹೊನ್ನಯ್ಯನಂ
ಮನ್ನಣೆಯನಪ್ಪಣ್ಣ ಅನುಮಿಷರಾಯನಂ ಚೆನ್ನಚೋಳನಂ
ಘನ್ನಘಾತಕ ಜೈನ ಕುಲಹಾರನಂ ಮಡಿವಾಳನಂ ॥ 8 ॥

ಮಾರಗೌಡನು ಮರುಳುಶಂಕರ ಹರಳ ಮಧುವರಸಯ್ಯನು
ಪೊರೆವ ನಾಚಿಯ ಕರಿಯ ಚೋಳನು ವೀರ ಪೆರ್ಮಡಿದೇವನಂ
[3][ಚೇ][3]ರಮರು ಶ್ರೀ ಪಾರ್ವತೀಶ್ವರ ನಾರಿ ಸುಗ್ಗಲದೇವಿಯಂ
ಉರಿಯಲಿಂಗನು ಪರಮಭಕ್ತನು ಕರುಣಮೂರ್ತಿ ಸತ್ಯೇಂದ್ರರುಂ ॥ 9 ॥

ನಾರಿ ಶಿವನಿ ಮಳೆಯ ಸುರಿಸಿದ ಚಂಡಿಯ ಮಹಭಕ್ತೆಯಂ
ಮಾರಹರನಿಗೆ ಮಾನಸ ಪೂಜೆಗೊಂಡ ಧೀರಾಚಾರ್ಯ ತೋಂ[ಟಾ]ರ್ಯನಂ
ತರುಣಿ ನರವನು ಕೊರೆದ ಕಲಿಕಂಭರಾಯನಂ ನಿರಾಳನಂ
ಕೆರೆಯ ಪದ್ಮರಸಯ್ಯ ಕಾ[4][ಳಿಮ][4]ರಸನಂ ಸಿರಿಸರಸನಂ ॥ 10 ॥

ಹಿರಿಯ ಪೆರ್ಮಡಿ ಇರ್ಪ ಕಲಿ ನಮಿತ್ತಾಂಡಿಯಂ ತೊಣೆಯಾಂ[1][ಡನಂ][1]
ದೊರೆ ದೇಶ ಶಿವಯ್ಯ ಶಂಕರದಾಸಯ್ಯನಂ ಧವಳೇಶನಂ ।
ಪರಶಿವಗೆ ಮಹಪೂಜೆ ಮಾಡಿದ ಚೆನ್ನನಂ ಸಂಪನ್ನನಂ ।
ಮೂರುಪುರದಧೀಶನೋಹಿಲ ಭಕ್ತನಂ ಗುರುಭಕ್ತನಂ ॥ 11 ॥

ಮುಸುಟಿ ಚೌಡ[ಯ್ಯ]ಜಗಣ್ಣ ಮುನಿವರ ಸೋಮನಂ ।
ದಸರಿದೇವ ನಿರಾಳ ಇಂಡೆಯ ಶಾಂತನಂ ಏಕಾಂತನಂ ।
ದಾಸಿಮಯ್ಯನು ಅಸಿಯ ಮಸ್ತಕ ಮಾಚಿದೇವನು ಕುಶಲನಂ। * ॥ 12 ॥

---

1. ಸ(ಕ) 2. ನನ್ನೈನಾರಿಯಂ(ಕ) 3. ಚಾ(ಕ) 4. ವಲ ಹೆ(ಕ)
* ಹಸ್ತಪ್ರತಿಯಲ್ಲಿ ಇದರ ಒಂದು ಪಾದ ಬಿಟ್ಟುಹೋಗಿದೆ

ಗುಂಡಬ್ರಹ್ಮಯ್ಯಗಳು ನಿಡುಗುಡಿಯ ಮಾರನಂ ಮೆರೆಮಿಂಡನಂ ।
ಮಂಡಿಗೆಯ ಮಾದರಸ ನಿಡುಮಾರಯ್ಯನಂ ಸೊಡ್ಡಳನಂ
ಮಡದಿ ಉಡುಪತಿ ಧರಣಿಗಿತ್ತವ ನೆರದಿಹಃಪಗೆಯಾಂಡನಂ
ಬಿಡದೆ ಚೊಲ್ಲಡಿ ನಾಸಿಕಾಗ್ರವ ಕೊರೆದ ತೋಣೆಯಾಂಡಾರ್ಯನಂ ॥ 13 ॥

ಸಿದ್ಧರಾಮೇಶ್ವರನು ಶಿವಗಣ ಮುದ್ದು ಸಂಗಮದೇವನಂ
ಮುದ್ರೆದೇವ ಮಕಾರ ಪ್ರಣವದೇವನಂ ಉದ್ಧಾರನಂ ವೃದ್ಧಭಕ್ತ
ಸಿಂಧುಬಲ್ಲಳ ಮಂದಗಮನೆಯು ಚಂದದಿಂ ಸಿಂಧುಮರಾಳನಂ
ಮುಂದುಗೊಳಿಸುವದೀಯ್ಯೆದ ಕಲಿ ತಂದೆ ಗೂರ್ಜರಾಯನಂ ॥ 14 ॥

ರುದ್ರ ಪಶುಪತಿ ನೀಲಕಂಠ ಕಕ್ಕಯ್ಯನಂ ಚಿಕ್ಕಯ್ಯನಂ
ಕದ್ದವಿಯ ಕಲ್ಲಿದೇವ ನಿಜಗುಣ ಶಾಂತನಂ ಏಕಾಂತನಂ
ಮುಗ್ಧ ಯೋಗಿ ಮುದ್ದಯ್ಯ ಮೊರಡಿಗೆ ಗೌಡನಂ ಸುಗ್ಗವ್ವೆಯಂ
ವಿದ್ಯಾಗುರುವಿಗೆ ನಮಿಸುತಿಹ ಕಲಿಖ್ಯಾತನಂ ಗಣನಾಥನಂ ॥ 15 ॥

ನಂಬಿ ಚೇರಮ ಚೋರ [1][ಸೌಂ][1]ದರ ನಾಚನಂ ಬಿಬ್ಬಿ ಬಾಚನಂ
ಕಂಬಳಿಯ ಭೋಗಣ್ಣ ವೀರ ಮಡಿವಾಳನಂ ಮಹಧೀರನಂ
ಶಂಭುವಿಗೆ ತನುಮನವನಿತ್ತ ಗುರುಭಕ್ತನಂ ಮುಕ್ತೇಶನಂ
ಕುಂಭಕುಚೆಯರಿಗಿತ್ತ ವರ ವಾಗೀಶನಂ ಬಳ್ಳೇಶನಂ ॥ 16 ॥

ಮುಕ್ಕಣ್ಣೇಶನು ಢಕ್ಕೆ ಮಾರನು ಒಕ್ಕಲಿಗ ಮುದ್ದಯ್ಯನಂ
ನಕ್ಕನೈನಾರೆಂಬ ಭಕ್ತನು ಚಿಕ್ಕಸೋಮೇದೇವನಂ
ತರ್ಕಿಸುವ ಖ್ಯಾತ ಬ್ರಹ್ಮನು ಸೌಖ್ಯ ಕೊಂಡೆಮಂಚಣ್ಣನಂ
ಸುಂಕದ ಬಂಕಯ್ಯ ಶೀಲದ ನಾರಿಯಂ ಸುಕುಮಾರನಂ ॥ 17 ॥

ಕಾಶ್ಮೀರ ರಾಜನು ಭಾಷೆ ಪಾಲಿಪ ದೋಷರಹಿತ ವಿಶೇಷನ
ಮೀಸಲೊಳು ಹಸಿಹಾಲು ಕುಡಿಸಿದ ಶಶಿಮುಖಿಯ ಕೊಡಗೂಸಳಂ
ಕಾಶಿಪುರದೊಳು ಈಶನೊಳು ವಿಶ್ವಾಸಿಯಾಗಿಹ ವ್ಯಾಸನಂ
ಉಸುರಲಿಕಳವಲ್ಲ ಶಿವಗಣಸ್ತೋಮವಂ ಈ ನಾ[ಮ]ವಂ ॥ 18 ॥

---

1. ಡಿಯಂ(ಕ)

ಈ ಗಣಸ್ತುತಿ ಮನದೊಳತಿ ಸಂತೋಷದಿಂ ಸುವಿಲಾಸದಿಂ
ರಾಗರಚನೆಗಳಿಂದ ಪಾಡಲು ಭೋಗಮಂ ಶಿವಯೋಗಮಂ
ಬೇಗದಿಂದಲಿ ಸ್ತೋತ್ರಭಕ್ತಿಲಿ ಈಗ ಪಠಿಸಭೀಷ್ಟೆಯಂ ಸಂತುಷ್ಟಿಯಂ
ಯೋಗಿಹೃದಯನಿವಾಸ ರೇಣು ಸಿದ್ಧೇಶನಂ ಭೀಮೇಶನಂ

**ಬಸವಸ್ತುತಿ**

ಇದು ಬಸವಾದಿ ಪ್ರಮಥರ ಮಹಿಮಾಸ್ತುತಿಯು
ಇದು ಜೀವನ್ಮುಕ್ತಿಯ ಕಡಲು
ಇದು ದಿಟವೆಂಬುದು ಇದ ಬರದೋದಿ ಕೇಳ್ದರಿಗಂ
ಆದರಿಸಿ ಮುಕ್ತಿಯನೀವನು ಶ್ರೀ ಮಹಬಸವೇಶ್ವರಂ ॥ 1 ॥

ಇದು ಸತ್ಯವು ಇದು ನಿತ್ಯವು
ಇದು ಸಾದಾಖ್ಯವೆಂಬ ಶ್ರುತಿಪದ್ಧತಿಯು
ಇದ ಪಾರಾಯಣ ಮಾಡಿದವರಿಗೆ ಬೇಗಂ
ಮೋದದಿ ಇಷ್ಟಾರ್ಥವೀವನು ಶ್ರೀಗುರುಬಸವೇಶ್ವರಂ ॥ 2 ॥

ಸತತವು ಈ ಸ್ತುತಿಯಂ ಘನವ್ರತಬದ್ಧರು ಪಠಿಸೆ
ಸತತ ಸಕಲ ಸಂಪದವಿಯನೊದಗಿಸಿ
ಎರೆಯ ಶ್ರೀಗುರು ಚೆನ್ನಬಸವೇಶ್ವರನು
ಅತಿಶಯದಿ ಒಲಿದು ಪೊರೆವನು ಬಹುಹಿತದೊಳು ॥ 3 ॥

**ಮಂಗಳಾರತಿ ॥ ಆದಿತಾಳ ॥**

ಮಂಗಳಂ ಮಂಗಳಂ ಪ್ರಮಥರಿಗೆ ಮಂಗಳಂ
ಮಂಗಳಂ ಮಂಗಳಂ ಮಹನೀಯ ಲಿಂಗಸಂಗಿಗಳಿಗೆ
ಅಂಗಜಂಗುಲಿಭೃಂಗರಿಗೆ ಹಿಂಗದೆ ಮಂಗಳ
ಲಿಂಗದೊಳ್ ಬೆರೆದಂತೆ ಶೃಂಗಾರ ಶರಣ ಗಣಂಗಳಿಗೆ ಬೇಗ ॥ ಪಲ್ಲವಿ ॥

ಆದಿ ಅನಾದಿ ಆ ನಾದಸ್ವರೂಪಗೆ
ವೇದಪಾದಗಳಿಂದ ಮೆರೆವಾತಗೆ
ಮೇದಿನಿಯೊಳು ಮಹಮಹಿಮೆಯ ತೋರಿದಗೆ
ಸಾಧುಸಜ್ಜನರನ್ನು ಪೊರೆದ ವೃಷಭೇಂದ್ರಗೆ ॥ 1 ॥

---

1. ಸುಂ(ಕ)

ಅಲ್ಲಮಪ್ರಭುವಿಗೆ ಮಲ್ಲೇಶ್ವರನಿಗೆ
ಮಲ್ಲಿಕಾರ್ಜುನಲಿಂಗ ಮಹದೇವಗೆ
ಕಲ್ಲೇಶ್ವರನಿಗೆ ಪಲ್ಲಿಯ ಮಾರಗೆ
ಗೊಲ್ಲಾಳ ಗುರುಭಕ್ತ ಚಿಲ್ಲಾಳದೇವಗೆ ॥ 2 ॥

ಚನ್ನಬಸವೇಶಗೆ ಕಿನ್ನರಿಬ್ರಹ್ಮಯ್ಗೆ
ಉನ್ನತ ಮಡಿವಾಳ ಕಕ್ಕಯ್ಯಗೆ
ಮನ್ನಣೆಯಪ್ಪಣ್ಗೆ ಚಿನ್ನದ ಚೋಳಯ್ಯಗೆ
ಸನ್ನುತ ಸಿದ್ಧರಾಮೇಶ ಹೊನ್ನಯ್ಗೆ ॥ 3 ॥

ಕೆರೆಯೂರ ಬಂಕೈಗೆ ಕೇಶಿರಾಜಯ್ಯಗೆ
ಮರುಳಶಂಕರ ವೀರನಾಚಯ್ಯಗೆ
ಗುರುಭಕ್ತ ಸೊಡ್ಡಳ್ಗೆ ಮುದ್ದು ಸಂಗಯ್ಯಗೆ
ಹರಳಯ್ಗೆ ವೀರ ಕೇತಾರ ಬಾಚಯ್ಗೆ ॥ 4 ॥

ಮುಕ್ಕಣ್ಣಚೋಳಗೆ ಅಕ್ಕನಾಗಮ್ಮಗೆ
ಒಕ್ಕಲಿಗರ ಮುದ್ದಯ್ಯನಿಗೆ
ನಕ್ಕವಯನಾರರ್ಗೆ ಚಿಕ್ಕ ಸೋಮೆದೇವಗೆ
ಮುಕ್ತಾಯಿ ಮಲುಹಣ ಢಕ್ಕೆ ಮಾರಯ್ಯಗೆ ॥ 5 ॥

ಹಿಂಡೆಯ ಶಾಂತೈಗೆ ಪಂಡಿತಾರಾಧ್ಯಗೆ
ಕೊಂಡಗುಳಿಯ ಗುಂಡಬ್ರಹ್ಮಯ್ಯಗೆ
ಗಂಡುಗತ್ತರಿ ನಾಚುವೇಡು ಸೋಮಯ್ಯಗೆ
ಮಂಡಿಗೆಯರಸನುದ್ದಂಡ ಚಂಡೇಶಗೆ ॥ 6 ॥

ಮುಸುಟಿಯ ಚೌಡಗೆ ಅಜಗಣ್ಣದೇವಗೆ
ಎಸೆವ [1][ವೇ][1]ಮನಾರಾಧ್ಯ ಘಟ್ಟಿವಾಳನಿಗೆ
ದಸ[2][ರಿ][2]ಯ ದೇವಗೆ ಸೂಳೆ ನಿಂಬವ್ವಗೆ
ಅಸಮಸಾಹಸನಾದ ರುದ್ರಪಶುಪತಿಗೆ ॥ 7 ॥

---

1. ಹೇ(ಕ) 2. ಳಿ(ಕ)

ಆಯ್ದಕ್ಕಿಮಾರೈಗೆ ಮೇದರ ಕೇತಯ್ಗೆ
ಮಾದರ ಧೂಳೈಗೆ ಮಧುವಯ್ಯ[ನಿ]ಗೆ
ಸೌಂದರ ನಾಚೈಗೆ ಲದ್ದೆ ಸೋಮಯ್ಯಗೆ
ಮುದ್ದು ರೇಣುಕದೇವಿ ಮಹದೇವಿಗೆ ॥ 8 ॥

ಅತ್ಯಂತ ರುದ್ರಮುನೀಶ್ವರ ದೇವಗೆ
ಪ್ರತ್ಯಕ್ಷ ರೇಣುಕಸಿದ್ಧೇಶಗೆ
ನಿತ್ಯದಾಸೋಹ ಗುರುಲಿಂಗರಾಜೇಂದ್ರಗೆ
ಕರ್ತ ಶ್ರೀ ಪಾರ್ವತೀ ಪರಮೇಶಗೆ ॥ 9 ॥

**ಮಂಗಳಾರತಿ ಹಾಡು**

ಮಂಗಳಾರತಿ ಎತ್ತೀರಂಗನೆಯರೆಲ್ಲ
ಸಂಗನ ಬಸವಯ್ಯನಿಗೆ ಜಂಗಮರಿಗೆ ॥ ಪಲ್ಲವಿ ॥

ಮಾಡುವೆ ಶರಣ್ಮಾಡುವೆ ಕೂಡಲಸಂಗಮ ಶರಣರ ಪಾದಕ್ಕೆ ॥
ಮಾಡುವೆ ಶರಣ್ಮಾಡುವೆ ॥ ॥ ಅ.ಪ. ॥

**ರಾಗ ನಾಟಿ ॥ ಭಾಮಿನಿ ॥**

ವರ ಷಡಕ್ಷರ ಮಂತ್ರಮಾಲಾಧರ ಮಹಾಸಂಕಲ್ಪ ಗಮ್ಯನು
ಚರಿತ ಲೋಕಾರ್ಚಿತ ಯಶೋ ವಿಸ್ತಾರ ಕಲಿದೂರ
ಸರಸ ಕವಿಜನ ಹೃತ್ಕುಮುದ ಚಂದಿರ ಮಹಾದುರ್ದೋಷ
ಪರಿಭವ ಹರ ಬಸವಾದಿ ಪ್ರಮಥರ ರಕ್ಷಿಸಿ ಅನವರತ ನೀವು ॥ 1 ॥

ಅರುಣ ಜೀವೋದ್ಧರಣ ಪ್ರಣವಾದ್ವರಣ ವಿಬುಧಾಭರಣ ಮಹಿಮಾ ।
ವರಣ ಫಣಿಪತಿ ಭರಣ ಜಯ ಮಹಾಘನ ಕರುಣ ॥
ವರುಣ ವಿನಮಿತ ಚರಣ ಹಿಮಕರ ಕಿರಣಧರ ಜಿತಮರಣ ಕಲಿಮಲ
ಹರಣ ಬಸವಾದಿ ಪ್ರಮಥರೇ ರಕ್ಷಿಸಿ ಅನವರತ ನೀವು ॥ 2 ॥

ಪಾರುಗಾಣಿಸುತಿಹರು ಬೇರಿನ್ನಾರೆನಗೆ ನೀವಲ್ಲದಲೆ ಮೈ
ದೋರಿ ಪಾವನಚರಿತರೆ ನಿಮ್ಮ ನಂಬಿಹೆ ನಾನು
ಗಾರುಗತ್ತಲೆಯಿಡೆ ನಿಮ್ಮ ಕುಮಾರನಾಗಿಹೆ ಯೆನಗೆ ಸುಖವನು
ತೋರಿ ಬಸವಾದಿ ಪ್ರಮಥರೇ ರಕ್ಷಿಸಿ ಅನವರತ ನೀವು ॥ 3 ॥

□

ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಲಿಕೆ

# ಮಿರ್ಲೆ ಗ್ರಾಮದ ದೇವಾಲಯಗಳ ಚಾರಿತ್ರಿಕ ಅಧ್ಯಯನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಮಿರ್ಲೆ ಮೈಸೂರು ಜಿಲ್ಲೆಯ ಕೃಷ್ಣರಾಜನಗರ (ಕೆ.ಆರ್. ನಗರ) ತಾಲ್ಲೂಕಿಗೆ ಸೇರಿದ ಗ್ರಾಮ ಮತ್ತು ಹೋಬಳಿ ಕೇಂದ್ರವಾಗಿದೆ. ಗ್ರಾಮವು ತಾಲ್ಲೂಕು ಕೇಂದ್ರದಿಂದ 18 ಕಿ.ಮೀ. ಮೈಸೂರಿನಿಂದ 58 ಕಿ.ಮೀ. ದೂರದಲ್ಲಿದೆ. ಗ್ರಾಮದ ಉತ್ತರಕ್ಕೆ ಹುಣಸೂರು, ಪಿರಿಯಾಪಟ್ಟಣ, ಪೂರ್ವಕ್ಕೆ ಹುಣಸೂರು, ಪಶ್ಚಿಮಕ್ಕೆ ಅರಕಲಗೂಡು, ದಕ್ಷಿಣಕ್ಕೆ ಹೊಳೆನರಸೀಪುರ ತಾಲ್ಲೂಕುಗಳಿಂದ ಸುತ್ತುವರಿದಿದೆ.

ಗ್ರಾಮವು ಕಾವೇರಿ ನದಿಯ ಎಡ ದಂಡೆಯಲ್ಲಿದ್ದು ಗ್ರಾಮದಿಂದ 1½ ಕಿ.ಮೀ. ದೂರದಲ್ಲಿ ಹರಿಯುತ್ತದೆ. ಗ್ರಾಮದ ಭೂಭಾಗ ಕಣ್ವ ಮುನಿಗಳು ಯಜ್ಞ ಮಾಡಿದ ಪ್ರದೇಶವೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಹಿಂದೆ ಇದ್ದ ಹಳೆ ಮಿರ್ಲೆ ಗ್ರಾಮ ಚಿಕ್ಕದಾಗಿದ್ದು ಈ ಗ್ರಾಮದ ಭೂಭಾಗದಲ್ಲಿ ಸೀತೆ ಹುಟ್ಟಿದ ನಂತರ ಮಿಥಿಲಾ ನಗರವಾಗಿ ರೂಪುಗೊಂಡಿತು ಎಂದು ಸ್ಥಳಿಯರ ನಂಬಿಕೆ.

ಗ್ರಾಮದ ಸುತ್ತ ಎತ್ತರದ ಬೆಟ್ಟಗಳಾಗಲಿ, ಕಾಡುಗಳಾಗಲಿ ಇಲ್ಲ. ಎತ್ತರದ ಪ್ರದೇಶಗಳಲ್ಲಿ ಕಿರಿ ಪೊದೆಗಳು, ತಗ್ಗಿನಲ್ಲಿ ಮುಳ್ಳಿನ ಗಿಡಗಳು ಇಲ್ಲಿನ ಸ್ವಾಭಾವಿಕ ಸಸ್ಯಗಳು. ಮರಳು ಮಿಶ್ರಿತ ಕೆಂಪು, ಕಂದು ಜೇಡಿ ಮಣ್ಣಿನಿಂದ ಕೂಡಿದ ಭೂಮಿಯಾಗಿದ್ದು, ಭತ್ತದ ಬೆಳೆಗೆ ಪ್ರಸಿದ್ಧಿಯಾಗಿದೆ. ಗ್ರಾಮದ ಸುತ್ತಮುತ್ತ ಅತ್ಯಂತ ಪ್ರಾಚೀನವಾದ ಧಾರವಾಡದ ಪದರ ಶಿಲೆಗಳಿವೆ. ಉಳಿದ ಭಾಗಗಳು ಪರ್ಯಾಯ ದ್ವೀಪದ ನುಣುಪಾದ ಶಿಲೆಗಳಿಂದ ಕೂಡಿವೆ. ಈ ಶಿಲೆಯ ಕಾಲಮಾನ 260–300 ಕೋಟಿ ವರ್ಷಗಳೆಂದು ಗುರುತಿಸಲಾಗಿದೆ. ಈ ಅವಧಿಯಲ್ಲಿ ವಿಶೇಷವಾಗಿ ಗ್ರಾನೈಟ್ ಜಾತಿಯ ಶಿಲೆಗಳು ರೂಪುಗೊಂಡವು. ಈ ಶಿಲೆಗಳನ್ನು ಇಂದು ಗ್ರಾಮದ ಭೂಭಾಗದಲ್ಲಿ ನೋಡಬಹುದಾಗಿದೆ. ವಾರ್ಷಿಕ ಮಳೆಯ ಪ್ರಮಾಣ ಸರಾಸರಿ 953 ಮಿ.ಮೀ. ಬಿದ್ದರೆ; 1889ರಿಂದ 1973ರವರೆಗಿನ ಅಂಕಿ–ಅಂಶಗಳ ಪ್ರಕಾರ (75 ವರ್ಷಗಳಲ್ಲಿ) ತಾಲ್ಲೂಕಿನ ಭೂಭಾಗದಲ್ಲಿ 32 ಬರಗಳು ಸಂಭವಿಸಿವೆ. ಭೀಕರ ಬರಗಾಲಗಳು 1899, 1913, 1918, 1920 ಮತ್ತು 1965ರಲ್ಲಿ ಸಂಭವಿಸಿದ ಬಗ್ಗೆ ವರದಿಯಾಗಿದೆ. 1872 ಮೇ 2, 1874 ಮೇ 4, 1880 ನವೆಂಬರ್, 1916 ಅಕ್ಟೋಬರ್ 16 ಮತ್ತು 23 ರಂದು ಬಂಗಾಳ ಕೊಲ್ಲಿಯ ಬಿರುಗಾಳಿ ಈ ಭೂಭಾಗದ ಮೇಲೆ ಹಾಯ್ದು ಭಾರಿ ಮಳೆ ಬಿರುಗಾಳಿಗೆ ಕಾರಣವಾದರೆ,

1972 ಡಿಸೆಂಬರ್ 7 ರಂದು ಭೀಕರ ಬಿರುಗಾಳಿ ಮತ್ತು ಭಾರಿ ಮಳೆ ಬಿದ್ದ ಬಗ್ಗೆ ವರದಿಯಾಗಿದೆ.

ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶಗಳು ಶಿಲಾಯುಗ ಮಾನವನ ಕಾಲಮಾನದಿಂದ ಇಂದಿನವರೆಗೂ ಜನವಸತಿ ಪ್ರದೇಶವಾಗಿತ್ತೆಂದು ಅವಶೇಷಗಳು, ಐತಿಹಾಸಿಕ ದಾಖಲೆಗಳು ಮಾಹಿತಿ ನೀಡುತ್ತವೆ. ಗ್ರಾಮದ ಸುತ್ತ ಸುಮಾರು 4000 ವರ್ಷಗಳ ಕಾಲಮಾನದ ನವಶಿಲಾಯುಗ ಸಂಸ್ಕೃತಿಯ, 3000 ವರ್ಷಗಳ ಕಾಲಮಾನದ ಬೃಹತ್ ಶಿಲಾಯುಗ ಸಂಸ್ಕೃತಿಯ ಮಾನವನ ಮಹತ್ವವಾದ ಅವಶೇಷಗಳು ನನ್ನ ಕ್ಷೇತ್ರಕಾರ್ಯದಲ್ಲಿ ದೊರಕಿವೆ. ನಂತರ ಗಂಗರು, ಹೊಯ್ಸಳರು, ಚಂಗಾಳ್ವರು, ವಿಜಯನಗರ, ಕೊಂಗಾಳ್ವರು, ಮೈಸೂರಿನ ಒಡೆಯರು ಈ ಭೂಭಾಗದಲ್ಲಿ ಆಳ್ವಿಕೆ ಮಾಡುತ್ತಿದ್ದರೆಂಬುದಕ್ಕೆ ಶಾಸನಗಳು ಮಾಹಿತಿ ನೀಡುತ್ತವೆ. ಈ ಅಂಶಗಳ ಆಧಾರದ ಮೇಲೆ ಈ ಗ್ರಾಮವನ್ನು ಪ್ರಾಗೈತಿಹಾಸಿಕ ಗ್ರಾಮ ಎಂದು ಹೇಳಬಹುದು.

ಗ್ರಾಮದಲ್ಲಿ ಹಲವಾರು ಅವಶೇಷಗಳ ಜೊತೆಗೆ ಶಾಸನಗಳು; ದೇವಾಲಯಗಳು ವೀರಗಲ್ಲುಗಳು, ಮಾಸ್ತಿಕಲ್ಲುಗಳು ಪ್ರಮುಖವಾಗಿವೆ. ದೇವಾಲಯಗಳಲ್ಲಿ ವಿರೂಪಾಕ್ಷೇಶ್ವರ, ಅಮೃತೇಶ್ವರ, ಯೋಗನರಸಿಂಹ, ಚನ್ನಿಗರಾಯ, ಆಂಜನೇಯ ಹಾಗೂ ಹಿರಿಯಣ್ಣ, ಹುಣಸಮ್ಮ, ಗಣಪತಿ, ಮಾರಮ್ಮನ ದೇವಾಲಯಗಳಿವೆ.

ಗ್ರಾಮದ ಶ್ರೀ ವಿರೂಪಾಕ್ಷಪ್ಪನವರು ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿ ದೇವಾಲಯಗಳ ಪ್ರಧಾನ ಅರ್ಚಕರಾಗಿದ್ದು, ಇವರು ಗ್ರಾಮದಲ್ಲಿ ಗುಡಿಯನ್ನು ಕಟ್ಟಿಸಿ ಹಂಪಿಯಿಂದ ಶ್ರೀ ವಿರೂಪಾಕ್ಷೇಶ್ವರ ಲಿಂಗವನ್ನು ತಂದು ಪ್ರತಿಷ್ಠಾಪಿಸಿದ್ದಾರೆ. ಹಾಗೂ ತಾವರೆಕೆರೆ ಅಥವಾ ಮಾಚನಾಯಕನ ಕೆರೆಯೆಂದು ಕರೆಯುವ ಈ ಕೆರೆಯನ್ನು ಗ್ರಾಮದ ಮಾಚನಾಯಕ ಎಂಬುವರು ನಿರ್ಮಾಣ ಮಾಡಿಸಿದರು. ಈ ಕೆರೆ ಇಂದಿಗೂ ಸುಸ್ಥಿತಿಯಲ್ಲಿದ್ದು, ಗ್ರಾಮದ ಮುಂಭಾಗದಲ್ಲಿದೆ. ಇದೇ ಕೆರೆಯನ್ನು ಗ್ರಾಮದ ಚಂದ್ರಪ್ಪನವರ ಸುಬ್ಬರಾಯರು ಜೀರ್ಣೋದ್ಧಾರ ಮಾಡಿಸಿದರು.

ಮೈಸೂರಿನ ಜಯಚಾಮರಾಜ ಒಡೆಯರು ಗ್ರಾಮಕ್ಕೆ ಕಾವೇರಿ ನದಿಯಿಂದ ಎಡದಂಡೆ, ಬಲದಂಡೆ ನಾಲೆಗಳನ್ನು ನಿರ್ಮಾಣ ಮಾಡಿಸಿದರು ಎಂದು ಗ್ರಾಮದ ಮುಖಂಡರು ಮಾಹಿತಿ ನೀಡಿದರು. ಗ್ರಾಮದ ಜನರಿಗಾಗಿ ಸಾವುಕಾರ್ ಕೋಟೆಗೌಡ ಸಾರ್ವಜನಿಕ ಆಸ್ಪತ್ರೆಯಿದೆ.

**ಶಾಸನಗಳಲ್ಲಿ ಮಿರ್ಲೆ ಗ್ರಾಮ :** ಮೈಸೂರು ಜಿಲ್ಲೆ ಎಪಿಗ್ರಾಫಿಯ ಸಂಪುಟ–5ರ (ಕೃಷ್ಣರಾಜನಗರ ತಾ॥) ಶಾಸನ 105 ಗಳಿಗೇ ಕೆರೆ ತಾಮ್ರ ಶಾಸನ **ಕ್ರಿ.ಶ. 890ರ ಕಾಲಮಾನದಾಗಿದ್ದು ಗ್ರಾಮವನ್ನು "ಮಿರಿದೆ"ಯೆಂದು ಉಲ್ಲೇಖಿಸಿದೆ. ಇದು ಗ್ರಾಮದ ಬಗ್ಗೆ ಉಲ್ಲೇಖವಿರುವ ಪ್ರಾಚೀನ ಶಾಸನವಾಗಿದೆ.** ನಂತರ ಮಿರ್ಲೆ ಗ್ರಾಮದ

ಯೋಗನರಸಿಂಹ ದೇವಾಲಯದಲ್ಲಿರುವ ಶಾಸನವು ಎಪಿಗ್ರಾಫಿಯ ಕರ್ನಾಟಕ ಶಾಸನ ಸಂಖ್ಯೆ 89ರಲ್ಲಿ **"ಮಿರಿಲೆ"** ಎಂದು ಉಲ್ಲೇಖಿಸಿದ್ದು, ಕಾಲಮಾನ 1299 ಆಗಸ್ಟ್ 19ರ ಶಾಸನವಾಗಿದೆ. ಮಿರ್ಲೆ ಗ್ರಾಮದ ಚನ್ನಿಗರಾಯ ದೇವಾಲಯದಲ್ಲಿರುವ 15 ನೇ ಶತಮಾನದ ಶಾಸನದಲ್ಲಿ "ಮಿರಲೆ" (ಶಾಸನ 93) ಎಂದಿದೆ. ಹಾಗೂ ಇದೇ ಗ್ರಾಮದ ರಾಮದೇವರ ಗುಡಿಯ 15ನೇ ಶತಮಾನದ ಶಾಸನದಲ್ಲಿ (ಶಾಸನ 92) "ಮಿರ್ಲೆ" ಎಂದಿದೆ. ಇದೇ ಗ್ರಾಮದ ಶ್ರೀ ಯೋಗನರಸಿಂಹ ದೇವಾಲಯದ 16ನೇ ಶತಮಾನದ (1543, ಜೂನ್ 17, ಭಾನುವಾರ) ಶಾಸನದಲ್ಲಿ (ಶಾಸನ 88) **"ಮಿರಿಲೆ"** ಎಂದಿದ್ದರೆ, ಗ್ರಾಮದ ಅಮೃತೇಶ್ವರ ದೇವಾಲಯದ 17ನೇ ಶತಮಾನದ (93 ನೇ ಶಾಸನ) ಶಾಸನದಲ್ಲಿ **"ಮಿರಲೆ"** ಎಂದೂ, ಕಾವೇರಿ ನದಿ ದಡದ ಸಂಧ್ಯಾವಂದನ ಮಂಟಪದ ಬಳಿಯಿರುವ (94ನೇ ಶಾಸನ) 17ನೇ ಶತಮಾನದ ಶಾಸನದಲ್ಲಿ "ಮಿರಿಲೆ" ಎಂದಿದೆ.

ಚುಂಚನಕಟ್ಟೆಯ ಶ್ರೀರಾಮ ದೇವಸ್ಥಾನದ (ಶಾಸನ–ಸಂಖ್ಯೆ 100) 18 ನೇ ಶತಮಾನದ ಶಾಸನದಲ್ಲಿ "ಮಿರಳೆ" ಎಂದೂ, ಮಾಚನಹಳ್ಳಿಯ ತಾಮ್ರಪಟ (ಶಾಸನ–117) ದ 18ನೇ ಶತಮಾನದ (1741 ಆಗಸ್ಟ್–22) ಶಾಸನದಲ್ಲಿ "ಮಿರ್ಲೇ" ಎಂದು ಉಲ್ಲೇಖಿತವಾಗಿದೆ.

ಗ್ರಾಮಕ್ಕೆ 9ನೇ ಶತಮಾನದಲ್ಲಿ **"ಮಿರಿದೆ"ಯೆಂದು,** 13ನೇ ಶತಮಾನದಲ್ಲಿ ಮಿರಿಲೆ, 15 ನೇ ಶತಮಾನದಲ್ಲಿ ಮಿರಲೆ, ಮಿರ್ಲೆ, 16 ನೇ ಶತಮಾನದಲ್ಲಿ ಮಿರಿಲೆ, 17ನೇ ಶತಮಾನದಲ್ಲಿ ಮಿರಲೆ, ಮಿರಿಲೆ, 18ನೇ ಶತಮಾನದಲ್ಲಿ ಮಿರಳೆ, ಮಿರ್ಲೇ ಎಂದು ಶಾಸನಗಳಲ್ಲಿ ಉಲ್ಲೇಖಿತವಾಗಿದ್ದು ಈಗ ರೂಢಿನಾಮವಾಗಿ "ಮಿರ್ಲೆ" ಎಂದೆ ಸಂಬೋಧಿಸುತ್ತಿದ್ದಾರೆ,

**ವಿರೂಪಾಕ್ಷೇಶ್ವರ ದೇವಾಲಯ**

ಮಿರ್ಲೆ ಗ್ರಾಮದ ಮಧ್ಯದಲ್ಲಿ ಪೂರ್ವಾಭಿಮುಖವಾಗಿರುವ ಶ್ರೀ ವಿರೂಪಾಕ್ಷೇಶ್ವರ ದೇವಾಲಯವು ಗರ್ಭಗುಡಿ, ಸುಕನಾಸಿ, ನವರಂಗದಿಂದ ನಿರ್ಮಾಣಗೊಂಡಿದೆ. ದೇವಾಲಯದ ಕಟ್ಟಡ ನೋಡಲು ಸುಸ್ಥಿತಿಯಲ್ಲಿದೆ.

**ಗರ್ಭಗುಡಿ:** ದೇವಾಲಯದ ಗರ್ಭಗುಡಿಯ ಒಳಭಾಗ ದಕ್ಷಿಣೋತ್ತರವಾಗಿ 2 ಮೀಟರ್, ಪೂರ್ವ–ಪಶ್ಚಿಮವಾಗಿ 2.1 ಮೀಟರ್ ವಿಸ್ತೀರ್ಣವಿದೆ. ವಿರೂಪಾಕ್ಷೇಶ್ವರ ಎಂದು ಕರೆಯುವ ಲಿಂಗವು ಬೋದಿಗೆಯಿಂದ 14 ಸೆಂ.ಮೀ. ಎತ್ತರ, 14 ಸೆಂ.ಮೀ. ಅಗಲವಿದೆ. ಬೋದಿಗೆ 1 ಮೀಟರ್ ಉದ್ದ, ಅಗಲ 24 ಸೆಂ.ಮೀ. ಎತ್ತರ 13 ಸೆಂ.ಮೀ ಇದೆ. ಗರ್ಭಗುಡಿಯ ಬಾಗಿಲಿನ ಅಗಲ 26 ಇಂಚು, ಎತ್ತರ 54 ಇಂಚುಯಿದೆ. ಗರ್ಭಗುಡಿಯ ಮೇಲ್ಛಾವಣಿಯ ಕೆಳಭಾಗದಲ್ಲಿ ಸರಳವಾದ ಭುವನೇಶ್ವರಿ ಇದೆ. ಇದು ಅಷ್ಟಕೋನಾಕೃತಿಯಲ್ಲಿದೆ.

**ಸುಕನಾಸಿ :** ಗರ್ಭಗುಡಿಗೆ ಹೊಂದಿಕೊಂಡಂತೆ ಸರಳವಾದ ಸುಕನಾಸಿ ಇದ್ದು ಅಗಲ ಉತ್ತರ ದಕ್ಷಿಣವಾಗಿ 6.7 ಅಡಿ, ಪೂರ್ವಪಶ್ಚಿಮವಾಗಿ 6.6. ಅಡಿ ಇದೆ. ಬಾಗಿಲು 2.2 ಅಡಿ ಅಗಲ, ಎತ್ತರ 4.6 ಅಡಿಯಿದೆ. ಸುಕನಾಸಿಯ ಮೇಲ್ಛಾವಣಿಯ ಕೆಳಗೆ ಭುವನೇಶ್ವರಿಯಿದೆ.

**ನವರಂಗ :** ಸುಕನಾಸಿಗೆ ಹೊಂದಿಕೊಂಡಂತೆ ಇದೆ. ಪೂರ್ವಪಶ್ಚಿಮವಾಗಿ 6 ಮೀಟರ್, ಉತ್ತರ–ದಕ್ಷಿಣವಾಗಿ 6 ಮೀಟರ್ ಇದೆ. ನವರಂಗದಲ್ಲಿ 4 ಪೂರ್ಣ ಕಂಬಗಳು, 12 ಅರೆಕಂಬಗಳು ಇವೆ. ಪ್ರತಿ ಕಂಬದ ಎತ್ತರ 6.2 ಅಡಿ. ಸುತ್ತಳತೆ 49 ಇಂಚುಯಿದೆ. ಕಂಬಗಳು ಗ್ರಾನೈಟ್ ಕಲ್ಲಿನಲ್ಲಿದ್ದು ದುಂಡಾಗಿ ಸರಳವಾಗಿವೆ. ನವರಂಗದ 4 ಕಂಬಗಳ ಮಧ್ಯೆ ಭುವನೇಶ್ವರಿಯಿದ್ದು ಅಷ್ಟಕೋನಾಕೃತಿಯಲ್ಲಿದೆ.

**ಬಸವ :** ಗರ್ಭಗುಡಿಗೆ ಎದುರಾಗಿ ನವರಂಗದಲ್ಲಿ ನಂದಿ ಶಿಲ್ಪ ಇದೆ. ಬಸವ ಪಶ್ಚಿಮಕ್ಕೆ ಮುಖ ಮಾಡಿಕೊಂಡು ಮಲಗಿದೆ. ಬಸವನ ಉದ್ದ 43 ಇಂಚು, ಅಗಲ 22 ½ ಇಂಚು, ಎತ್ತರ 40 ಸೆಂ.ಮೀ.(ಹಿಂದೆ) 65 ಸೆಂ.ಮೀ. ಮುಂದಿನ ಭಾಗವಿದೆ. ನಂದಿಯ ಕುತ್ತಿಗೆ ಗೆಜ್ಜೆಗಳಿಂದ ಅಲಂಕಾರಗೊಂಡಿದೆ.

**ಗಣೇಶ :** ನವರಂಗದಲ್ಲಿ ಪೂರ್ವಾಭಿಮುಖವಾಗಿರುವ ಗಣೇಶಮೂರ್ತಿ ಶಿಲ್ಪವಿದೆ. ಶಿಲ್ಪವು 72 ಸೆಂ.ಮೀ. ಎತ್ತರ, 62 ಸೆಂ.ಮೀ ಅಗಲವಿದೆ. ಅಲಂಕಾರ ಭೂಷಿತವಾದ ಗಣೇಶಮೂರ್ತಿಯಾಗಿದೆ.

**ಪಾರ್ವತಿಗುಡಿ :** ನವರಂಗದಲ್ಲಿ ಪೂರ್ವಾಭಿಮುಖವಾಗಿರುವ ಗರ್ಭಗುಡಿಯಿದೆ. ಗರ್ಭಗುಡಿಯು ಉತ್ತರ ದಕ್ಷಿಣವಾಗಿ 66 ಇಂಚು, ಪೂರ್ವಪಶ್ಚಿಮವಾಗಿ 79 ಇಂಚುಯಿದೆ. ನಿಂತಿರುವ ಪಾರ್ವತಿಮೂರ್ತಿಯಿದ್ದು ಪೂರ್ವಾಭಿಮುಖವಾಗಿದೆ. ಮೂರ್ತಿಶಿಲ್ಪದ ಎತ್ತರ 76 ಇಂಚು, ಅಗಲ 16 ಇಂಚು ಇದ್ದು ಅಭಯಹಸ್ತ, ದಂಡಗಳನ್ನು ಕೈಯಲ್ಲಿ ಹಿಡಿದು ಅಲಂಕಾರಭೂಷಿತಳಾಗಿದ್ದಾಳೆ.

**ಗರ್ಭಗುಡಿಯಲ್ಲಿರುವ ಉತ್ಸವ ಮೂರ್ತಿಗಳು :** ಗರ್ಭಗುಡಿಯಲ್ಲಿ ಈಶ್ವರ, ಪಾರ್ವತಿ ಮತ್ತು ಗಣೇಶನ ಉತ್ಸವ ಮೂರ್ತಿಶಿಲ್ಪಗಳಿವೆ. ಈ ಶಿಲ್ಪಗಳನ್ನು ಪಂಚಲೋಹಗಳಲ್ಲಿ ತಯಾರಿಸಲಾಗಿದೆ.

**ಪಂಚಲೋಹಗಳಲ್ಲಿ ತಯಾಸಿರುವ ಶಿಲ್ಪಗಳು**

**ಈಶ್ವರ :** 50 ಸೆಂ.ಮೀ. ಎತ್ತರ, 20 ಸೆಂ.ಮೀ ಅಗಲ ಇದೆ. ಆಯುಧಗಳನ್ನು ಹಿಡಿದು ಅಲಂಕಾರಭೂಷಿತರಾಗಿದ್ದಾರೆ.

**ಪಾರ್ವತಿ :** 46 ಸೆಂ.ಮೀ. ಎತ್ತರ, 14 ಸೆಂ.ಮೀ ಅಗಲವಿದ್ದು ಆಯುಧಗಳನ್ನು ಹಿಡಿದು ಅಲಂಕಾರಭೂಷಿತಳಾಗಿದ್ದಾಳೆ.

**ಗಣೇಶ :** 45 ಸೆಂ.ಮೀ. ಎತ್ತರ, 19 ಸೆಂ.ಮೀ. ಅಗಲವಿದ್ದು, ಆಯುಧಗಳನ್ನು ಹಿಡಿದು ಅಲಂಕಾರಭೂಷಿತ ಶಿಲ್ಪವಾಗಿದೆ.

ದೇವಾಲಯದ ಹೊರಭಾಗದಲ್ಲಿ ಗರ್ಭಗುಡಿ ಹಿಂಭಾಗ ಉತ್ತರದಕ್ಷಿಣವಾಗಿ 3 ½ ಮೀಟರ್, ಪೂರ್ವಪಶ್ಚಿಮವಾಗಿ 4.8 ಮೀಟರ್ ಇದೆ. ನವರಂಗದಲ್ಲಿ (ಹಿಂಭಾಗ) 3 ½ ಮೀಟರ್, ಉತ್ತರದಕ್ಷಿಣವಾಗಿ 4.8 ಮೀಟರ್ ಪೂರ್ವಪಶ್ಚಿಮವಾಗಿದೆ.

ದೇವಾಲಯದ ಹೊರಗಡೆ ದೇವಾಲಯದ ಭೂಪ್ರದೇಶದ ಒಟ್ಟು ವಿಸ್ತೀರ್ಣ (ಕಾಂಪೌಂಡ್, ದೇವಾಲಯ ಸೇರಿ) ಉತ್ತರ ದಕ್ಷಿಣವಾಗಿ 55 ಅಡಿ, ಪೂರ್ವ ಪಶ್ಚಿಮವಾಗಿ 110 ಅಡಿ. ಸುತ್ತಲೂ ಪ್ರದಕ್ಷಿಣಾಪಥವಿದೆ. ದೇವಾಲಯದ ಹೊರಭಾಗದಲ್ಲಿ ಗರ್ಭಗುಡಿಗೆ ಎದುರಾಗಿ ನಂದಿ ಕಂಬ, ಮಲಗಿರುವ ನಂದಿ ಶಿಲ್ಪವಿದೆ.

**ಅಪ್ರಕಟಿತ ಶಾಸನ :** ದೇವಾಲಯದ ನವರಂಗದಲ್ಲಿ ದೊಡ್ಡ ತಾಮ್ರದ ಘಂಟೆಯಿದ್ದು, ಘಂಟೆಯ ಮೇಲೆ **"ಶ್ರೀ ವೀರೂಪಾಕ್ಷೇಶ್ವರ ವೆಂಕಟಗೌಡನೇ ಹೆಂಡತಿ (ಹೆಮ್ಮೆಂಡತಿ) ಕೆಂಪಮ್ಮ ಕೊಟ್ಟ ಗಂಟೆ"** ಎಂದಿದೆ. ಈ ಶಾಸನ ದಾನಶಾಸನವಾಗಿದ್ದು, ದೇವಾಲಯಕ್ಕೆ ದಾನಕೊಟ್ಟ ಬಗ್ಗೆ ಮಾಹಿತಿಯಿದೆ. ಲಿಪಿಯ ಆಧಾರದ ಮೇಲೆ 19ನೇ ಶತಮಾನದ ಶಾಸನವಾಗಿದೆ.

ದೇವಾಲಯದಲ್ಲಿ ದಿನ ನಿತ್ಯಪೂಜೆ ನಡೆಯುತ್ತಿದ್ದು, ಮಹಾಶಿವರಾತ್ರಿ ಹಬ್ಬದ ದಿನದಂದು ದೇವರಿಗೆ ವಿಶೇಷ ಪೂಜೆ ನಡೆಯುತ್ತದೆ. ಶಿವರಾತ್ರಿ ಆದ ಮಾರನೇ ದಿನ **"ಸೂರ್ಯನ ಕಿರಣಗಳು ಲಿಂಗದ ಮೇಲೆ ಬೀಳುತ್ತವೆ"** ಅಂದು ಗ್ರಾಮದ ಜನತೆ ವಿಶೇಷವಾಗಿ ಭಕ್ತಿಭಾವದಿಂದ ಪೂಜೆಯಲ್ಲಿ ತೊಡಗಿರುತ್ತಾರೆ ಎಂದು ದೇವಾಲಯದ ಅರ್ಚಕ ಶ್ರೀ ಎಂ.ಆರ್. ಶಂಕರ ಅವರು ಅಭಿಪ್ರಾಯಪಟ್ಟರು.

ದೇವಾಲಯದ ಗರ್ಭಗುಡಿಯಲ್ಲಿರುವ ಶ್ರೀ ವಿರೂಪಾಕ್ಷೇಶ್ವರ ಮೂರ್ತಿಶಿಲ್ಪವನ್ನು ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿ ದೇವಾಲಯಗಳ ಪ್ರಧಾನ ಅರ್ಚಕರಾಗಿದ್ದ ವಿರೂಪಾಕ್ಷಪ್ಪ ಮಿರ್ಲೆ ಇದೇ ಗ್ರಾಮದವರಾಗಿದ್ದು ದೇವಾಲಯ ವನ್ನು ನಿರ್ಮಿಸಿ ಹಂಪಿಯಿಂದಲೇ ಮೂರ್ತಿಶಿಲ್ಪ ತಂದು ಪ್ರತಿಷ್ಠಾಪಿಸಿದರೆಂದು, ಗ್ರಾಮದ ಅದೇ ವಂಶದ ಮಿರ್ಲೆ ಸುಬ್ಬಣ್ಣ (ಸ್ನೇಕ್ ಶಾಮ್ ಅವರ ತಂದೆ) ಅವರು ಅಭಿಪ್ರಾಯಪಟ್ಟರು. ಈ ದೇವಾಲಯ 16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ತಿಳಿಸಿದರು. ವಾಸ್ತುಶಿಲ್ಪದ ಆಧಾರದ ಮೇಲೆ ಇದೇ ಕಾಲಮಾನವನ್ನು ಒಪ್ಪಬಹುದಾಗಿದೆ ಹಾಗೂ ದೇವಾಲಯದ ಗರ್ಭಗುಡಿಯಲ್ಲಿರುವ ಗಣೇಶ, ಶಿವ, ಪಾರ್ವತಿಯ ಪಂಚಲೋಹಗಳ ಉತ್ಸವ ಮೂರ್ತಿಗಳನ್ನು ವಿರೂಪಾಕ್ಷಪ್ಪನ ಮಗನಾದ ಚಂದ್ರಪ್ಪನವರು ಮಾಡಿಸಿಕೊಟ್ಟರೆಂದು ಹಾಗೂ ದೇವಾಲಯಕ್ಕೆ 10 ಎಕರೆ ಜಮೀನನ್ನು ದತ್ತಿ ಕೊಟ್ಟರೆಂದು ಮಾಹಿತಿ ನೀಡಿದರು.

ಇಂತಹ ವಿಶೇಷವಾದ ದೇವಾಲಯ ಇಂದು ಕಟ್ಟಡದ ಮೇಲೆ ಗಿಡಗಂಟಿ ಬೆಳೆದು, ಕಾಂಪೌಂಡ್ ಬಿದ್ದುಹೋಗಿ ರಕ್ಷಣೆಯಿಲ್ಲದೆ ಅವನತಿ ಅಂಚಿನಲ್ಲಿದೆ. ಜೊತೆಗೆ ದೇವಾಲಯದ ಪಕ್ಕದಲ್ಲೇ ಗ್ರಾಮದ ಕೆಲವರು ತಿಪ್ಪೆಗುಂಡಿ ಹಾಕಿಕೊಂಡು ಪರಿಸರವನ್ನು ಮಲಿನ ಗೊಳಿಸಿದ್ದಾರೆ. ಈ ನಿಟ್ಟಿನಲ್ಲಿ ಗ್ರಾಮಸ್ಥರು, ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಪವಿತ್ರವಾದ ದೇವಾಲಯವನ್ನು ಉಳಿಸಬೇಕಾಗಿದೆ.

**ಯೋಗನರಸಿಂಹ ದೇವಾಲಯ:** ಗ್ರಾಮದ ಹೊರಗೆ ಈಶಾನ್ಯ ದಿಕ್ಕಿಗೆ ಪೂರ್ವಾಭಿಮುಖವಾಗಿರುವ ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದೆ. ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮಹಾಮಂಟಪವನ್ನು ಹೊಂದಿದೆ.

ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಾಣ ಮಾಡಿದ್ದು ಗರ್ಭಗುಡಿಯಲ್ಲಿ ಎರಡು ಅಡಿ ಎತ್ತರದ ಕಲ್ಲಿನ ಪೀಠದ ಮೇಲೆ ಐದು ಅಡಿ ಎತ್ತರದ ಯೋಗ ಮುದ್ರೆಯಲ್ಲಿ ಕುಳಿತಿರುವ ಶ್ರೀ ಯೋಗನರಸಿಂಹನ ಶಿಲ್ಪ ಚತುರ್ಭುಜಗಳಿಂದ ಕೂಡಿದೆ. ಮುಂದಿನ ಎರಡು ಕೈಗಳನ್ನು ಕೆಳಗೆ ಇಳಿಬಿಟ್ಟಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ ಹಿಡಿದಿದ್ದಾನೆ. ಶಿಲ್ಪ ಅಲಂಕಾರಭೂಷಿತವಾಗಿದೆ. ಶಿಲ್ಪದ ಪಕ್ಕಗಳಲ್ಲಿ ಗಂಗ, ಯಮುನೆಯ ಉಬ್ಬುಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಎರಡು ಆಳ್ವಾರರುಗಳ ಶಿಲ್ಪಗಳನ್ನು ಪಕ್ಕದಲ್ಲಿ ಇಡಲಾಗಿದೆ.

ಸುಕನಾಸಿ ಸರಳವಾಗಿದ್ದು ಮೇಲ್ಛಾವಣಿಯ ಕೆಳಭಾಗದಲ್ಲಿ ಭುವನೇಶ್ವರಿ ಇದೆ. ಇದು ಅರಳಿದ ಕಮಲದಂತೆ ಮಧ್ಯೆ ಬಾಳೆಗೊನೆಯ ಮೋತೆಯಂತೆ ಸುಂದರವಾಗಿದೆ. ನವರಂಗದ ದ್ವಾರದ ಮೇಲ್ಭಾಗದಲ್ಲಿ, ಇಕ್ಕೆಲಗಳಲ್ಲಿ ಉಬ್ಬುಶಿಲ್ಪಗಳಿವೆ. ದಕ್ಷಿಣಕ್ಕೆ ವಿಷ್ಣುಶಿಲ್ಪ, ಉತ್ತರಕ್ಕೆ ವೇಣುಗೋಪಾಲರ ಉಬ್ಬುಶಿಲ್ಪಗಳಿವೆ. ಎರಡು ದಿಕ್ಕುಗಳಲ್ಲಿ ಎರಡೆರಡು ನೆಗೆಯುತ್ತಿರುವ ಸಿಂಹಗಳ ಶಿಲ್ಪಗಳಿವೆ. 16 ಕಂಬಗಳು, 4 ಅರೆಗಂಬಗಳು ಇಲ್ಲಿವೆ. ದೇವಾಲಯ ಹೊಯ್ಸಳರ, ಚೋಳರ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಾಣಗೊಂಡಿದೆ.

ದೇವಾಲಯಕ್ಕೆ ಸಮೀಪದಲ್ಲೇ ಇರುವ **ಕೃಷ್ಣರಾಜ ನಗರ** (ಮಿರ್ಲೆ) 89 ಮತ್ತು 88 ನೇ ಶಾಸನಗಳು ಕ್ರಮವಾಗಿ 13 ನೇ ಶತಮಾನ ಮತ್ತು 16 ನೇ ಶತಮಾನದಲ್ಲಿ ದತ್ತಿ ನೀಡಿದ ಬಗ್ಗೆ ಉಲ್ಲೇಖವಿದೆ: (ನೋಡಿ. ಗ್ರಾಮದ ಶಾಸನಗಳು)

**ಚೆನ್ನಿಗರಾಯ ದೇವಾಲಯ :** ದೇವಾಲಯವು ಊರಿನ ಹೊರಭಾಗದಲ್ಲಿ ವಾಯವ್ಯ ದಿಕ್ಕಿನಲ್ಲಿದ್ದು ಉತ್ತರಾಭಿಮುಖವಾಗಿದೆ. ಗರ್ಭಗೃಹ, ಸುಕನಾಸಿ, ನವರಂಗವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಒಂದು ಅಡಿ ಎತ್ತರದ ಶಿಲಾಪೀಠದ ಮೇಲೆ 5 ಅಡಿ ಎತ್ತರದ ಸುಂದರವಾದ, ಚತುರ್ಭುಜದ ಮೂರ್ತಿಶಿಲ್ಪವಿದೆ. ಆಯುಧ, ಆಭರಣಗಳಿಂದ ಕೂಡಿದ್ದು, ಇಕ್ಕೆಲಗಳಲ್ಲಿ ಗಂಗೆ, ಯಮುನೆಯರ ಉಬ್ಬು ಶಿಲ್ಪಗಳಿವೆ. ಸುಕನಾಸಿ ಸರಳವಾಗಿದೆ. ನವರಂಗವು 12 ಕಂಬಗಳು, ಅರೆಗಂಬಗಳಿಂದ ನಿರ್ಮಾಣಗೊಂಡಿದೆ. ವಾಸ್ತುಶಿಲ್ಪದ

ದೃಷ್ಟಿಕೋನದಲ್ಲಿ ಗಮನಿಸಿದರೆ ಹೊಯ್ಸಳ ಶೈಲಿಯಂತಿದೆ. ಮಿರ್ಲೆಯ 93ರ ಶಾಸನ (ಕೃಷ್ಣರಾಜನಗರ–93) 15ನೇ ಶತಮಾನದಲ್ಲಿ, ಚೆಂಗಾಳ್ವರು ಭೂಮಿ ದಾನ ನೀಡಿದ ಬಗ್ಗೆ ಉಲ್ಲೇಖಿಸಿದೆ.

**ಅಮೃತೇಶ್ವರ ದೇವಾಲಯ** : ದೇವಾಲಯ ಹಿಂದೆ ಮೂಲತಃ ಗ್ರಾಮದ 20 ಗದ್ದೆಯ ಮಧ್ಯದಲ್ಲಿತ್ತು. ಪ್ರಾಚ್ಯವಸ್ತು ಇಲಾಖೆಯವರು ಊರಿನ ಮಧ್ಯಭಾಗಕ್ಕೆ ಸ್ಥಳಾಂತರಿಸಿ ದೇವಾಲಯವನ್ನು ನಿರ್ಮಾಣ ಮಾಡಿದ್ದಾರೆ. ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿ, ಸುಕನಾಸಿ, ನವರಂಗ ಹೊಂದಿದೆ.

ಗರ್ಭಗುಡಿಯಲ್ಲಿ ಎತ್ತರವಾದ ಬೋದಿಗೆಯ ಮೇಲೆ ಮಹಾಶಿವಲಿಂಗವಿದೆ. ಸುಕನಾಸಿಯಲ್ಲಿ ಭುವನೇಶ್ವರಿ ಮತ್ತು ನಂದಿಶಿಲ್ಪವಿದೆ. ಹೊಯ್ಸಳ ವಾಸ್ತುಶಿಲ್ಪದ ಲಕ್ಷಣಗಳಿವೆ. ದೇವಾಲಯದ ಬಾಗಿಲಿನ ಒಳಗೆ ತೊಲೆಯ ಮೇಲೆ 17 ನೇ ಶತಮಾನದ ಶಾಸನವಿದ್ದು ದೇವರ ನಂದಾದೀವಿಗೆಗೆ ಹಣವನ್ನು ಕೊಟ್ಟ ಬಗ್ಗೆ ಉಲ್ಲೇಖವಿದೆ. ಜಯಚಾಮರಾಜ ಒಡೆಯರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದರೆಂದು ಮಿರ್ಲೆ ಸುಬ್ಬಣ್ಣ ಮಾಹಿತಿ ನೀಡಿದರು.

**ಶ್ರೀರಾಮದೇವಾಲಯ** : ದೇವಾಲಯುವು ಊರಿನ ಮಧ್ಯಭಾಗದಲ್ಲಿ ಪೂರ್ವಾಭಿಮುಖವಾಗಿ ಗ್ರಾನೈಟ್ ಕಲ್ಲಿನಲ್ಲಿ ನಿರ್ಮಿತವಾಗಿದೆ. ಗರ್ಭಗುಡಿ, ಸುಕನಾಸಿ ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ರಾಮ, ಲಕ್ಷ್ಮಣ, ಸೀತೆಯ ಶಿಲ್ಪಗಳಿವೆ. ಸುಕನಾಸಿ ಸರಳವಾಗಿದೆ, ನವರಂಗದಲ್ಲಿ ನಾಲ್ಕು ಕಂಬಗಳು. ಮುಖಮಂಟಪದಲ್ಲಿ ನಾಲ್ಕು ಕಂಬಗಳು ಇವೆ.

ಈ ದೇವಾಲಯದ ಜೊತೆಗೆ ಗ್ರಾಮದಲ್ಲಿ ಈಶ್ವರ ದೇವಾಲಯ, ಆಂಜನೇಯ ದೇವಾಲಯ, ಗಣಪತಿ, ದೇವಿಹುಣಸಮ್ಮ, ಮಾರಮ್ಮ ದೇವಾಲಯಗಳಿವೆ. ಈ ಎಲ್ಲ ದೇವಾಲಯಗಳು ಇಂದು ಪೂಜೆಗೊಳ್ಳುತ್ತಿದ್ದು ಗ್ರಾಮದ ಎಲ್ಲಾ ಜನರೂ ಭಕ್ತಿಭಾವದಿಂದ ಆರಾಧಿಸಿ ದೇವರ ಕೃಪೆಗೆ ಪಾತ್ರರಾಗುತ್ತಿದ್ದಾರೆ.

**ಮಿರ್ಲೆ ಗ್ರಾಮದ ಶಾಸನಗಳು :** ಗ್ರಾಮದಲ್ಲಿ 13ನೇ ಶತಮಾನದ ಶಾಸನ ಪ್ರಾಚೀನ ಶಾಸನವಾಗಿದ್ದು, 18ನೇ ಶತಮಾನದವರೆಗೆ ಒಟ್ಟು 8 ಶಾಸನಗಳು ಪ್ರಕಟವಾಗಿವೆ.

ಮಿರ್ಲೆ 88 (IV ಯೆ 47) ಶಾಸನ ಯೋಗನರಸಿಂಹ ದೇವಾಲಯದ ದ್ವಾರಪಾಲಕರ ಬಾಗಿಲ ಬಳಿ ಉತ್ತರ ಕಡೆಯ ಕಂಬದ ಮೇಲಿದೆ. 1543 ಜೂನ್ 17ರ ಕಾಲಮಾನದಲ್ಲಿ ದಕ್ಷಿಣ ಅಯ್ಯಹೊಳೆಯ ಮಿರ್ಲೆಯ ಶ್ರೀ ನರಸಿಂಗದೇವರಿಗೆ ಶ್ರೀಹೆಬೊಳಲ ಶ್ರೀ ವೈಷ್ಣವದಾಸರ ಪುತ್ರರು ತಿರುವಾನಂದ ಪುರದಾಸರು ಎಂಟು ಕೊಳಗ ಮಣ್ಣು, ಎರಡು ಕೊಳಗ ಗೋಡು ಮಣ್ಣು ಅಂದರೆ ಒಟ್ಟು 10 ಕೊಳಗ (ಮಣ್ಣನ್ನು) ಭೂಮಿಯನ್ನು ಮತ್ತು ಪಾದಪೂಜೆಗೆ ಹತ್ತು ಗದ್ಯಾಣ ಹಾಗೂ 10 ಕೊಳಗ ಭೂಮಿಗೆ ತೆರಿಗೆ ರಹಿತವಾಗಿ ಕೊಟ್ಟ ಬಗ್ಗೆ ಉಲ್ಲೇಖಿಸಿದ್ದು ದಾನಶಾಸನವಾಗಿದೆ.

ಮಿರ್ಲೆ 89 ((IVಯೆ 48) ಶಾಸನ ಯೋಗನರಸಿಂಹ ದೇವಾಲಯದ ದಕ್ಷಿಣ ಕಡೆ ಕಂಬದ ಮೇಲಿದೆ (1299 ಆಗಸ್ಟ್ 19ರ ಕಾಲಮಾನ). ಶಾಸನದಲ್ಲಿ ದಕ್ಷಿಣ ಅಯ್ಯಹೊಳೆಯ ಮಿರಿಲೆಯ ಶ್ರೀನರಸಿಂಹದೇವರಿಗೆ ಶ್ರೀಮಾನ್ಮಹಾಪ್ರಧಾನ ಸತ್ರಾಧಿಕಾರಿ ಬಲ್ಲೇಯ ದಂಡನಾಯಕನ ಬಲಮಾನಿಸ (strong man) ಪ್ರಮಾಂದನು ವಿಕಾರಿ ಸಂವತ್ಸರದ ಸಿಂಹಮಾಸ. ಬ. 7 ಆದಿವಾರ ನಂದಾದೀವಿಗೆಗೆ ಐದು ಹೊನ್ನು ಕೊಟ್ಟ ಬಗ್ಗೆ ಉಲ್ಲೇಖಿಸಿದ್ದು ದಾನಶಾಸನವಾಗಿದೆ.

ಮಿರ್ಲೆ 90 (IV ಯೆ 50) ಶಾಸನ ರಾಮದೇವರ ದೇವಾಲಯದ ಬಾಗಿಲ ಬಳಿ ಪೂರ್ವದ ಕಡೆ ಕಂಬದ ಮೇಲೆ ಇದೆ. 12ನೇ ಶತಮಾನದ ಶಾಸನ. ಪೆರ್ಮಡಿಯ ಪೆರ್ಗ್ಗಡೆ ಬೀರಯ್ಯ ಸನ್ಯಾಸಿಯಾಗಿ ಐದು ನೋನ್ತು (Five vows) ಅನ್ನು ನೋಡಿಕೊಳ್ಳುವವರಿಗೆ ಮುಡುಪಿಟ್ಟ ಬಗ್ಗೆ ಉಲ್ಲೇಖವಿದೆ.

ಮಿರ್ಲೆ 91 (IVಯೆ51) ಶಾಸನ ರಾಮದೇವರ ನವರಂಗ ಮಂಟಪದ ಮೇಲ್ಛಾವಣಿ ಕಲ್ಲಿನಲ್ಲಿದೆ. 1219–20ರ ಕಾಲಮಾನ ಶಾಸನವಾಗಿದ್ದು ತ್ರುಟಿತವಾಗಿದೆ. ನರಸಿಂಹದೇವ ಎಂದಿದೆ.

ಮಿರ್ಲೆ 92 (ರಿ.1935–32) ಶಾಸನ ರಾಮದೇವರ ಗುಡಿಯಲ್ಲಿರುವ ಶಾಸನ. 15ನೇ ಶತಮಾನದ ಶಾಸನ. ಶಾಸನದಲ್ಲಿ ಕುತೂಹಲಕರವಾದ ವ್ಯವಹಾರದ ಉಲ್ಲೇಖವಿದೆ, ಉದ್ಭವಸರ್ವಜ್ಞಪುರವಾದ ಹಂಪಾಪುರದ ಮಹಾಜನಗಳು ಮತ್ತು ಹಳ್ಳಿಹಿರಿಯೂರಿನ ಗೌಡ ಪ್ರಜೆಗಳು, ಹತ್ತೆಂಟು ಕಡೆ ಒಡೆದಿದ್ದ ಮೊದಲ ಕಾಲುವೆಯನ್ನು ಸರಿಪಡಿಸಲೂ, ತೆರಿಗೆ ಕೊಡಲು ತಮಗೆ ಸಾಧ್ಯವಿಲ್ಲದುದನ್ನು ಮನಗಂಡು ಮನೆ, ಗದ್ದೆ, ಬೆದ್ದಲುಗಳನ್ನು 140 ಹೊನ್ನಿಗೆ ಕ್ರಯದಾನವಾಗಿ ಶೃಂಗೇರಿಯ ನರಸಿಂಹ ಭಾರತಿವೊಡೆಯರ ಶಿಷ್ಯ ಭಾರತೀಪುರದ ಚಿಕ್ಕ ದೀಕ್ಷಿತರಿಗೆ ಕೊಟ್ಟರು. ಈ ಹಣವನ್ನು ಮಹಾಜನಗಳು ಕಟ್ಟೆ ಕಾಲುವೆಗಳ ಜೀರ್ಣೋದ್ಧಾರಕ್ಕಾಗಿ ಉಪಯೋಗಿಸಿದರು. ಸಾಲುಗಾವೆ (ಸಾಲಿಗ್ರಾಮ) ಮತ್ತು ಮಿರ್ಲೆಯ ಮಹಾಜನಗಳೂ **ಮಬ್ಬ್ಬುಳೇಶ್ವರ ದೇವರ ಬೆಟ್ಟದ** ಗಣಚಾರಿ ಚಾಮಯದೇವ ಮೊದಲಾದವರೂ ಈ ಧರ್ಮವೂ ತಪ್ಪದಂತೆ ನೋಡಿಕೊಳ್ಳಲು ಹೊಣೆಗಾರರಾಗಿಸಿರುವುದು ವಿಶೇಷ.

ಮಿರ್ಲೆ 93 (IVಯೆ49) ಶಾಸನ ಚನ್ನಿಗರಾಯ ದೇವಾಲಯದ ಸುಖನಾಸಿ ಗೋಡೆ ಮೇಲಿದೆ. 15ನೇ ಶತಮಾನದ ಶಾಸನವಾಗಿದ್ದು ಚೆಂಗಾಳ್ವ ದೇವರು ಮಿರ್ಲೆಯ ಕೇಶವ ದೇವರಿಗೆ ವಾರ್ಷಿಕ ಭತ್ತ ಬೆಳೆಯುವ ಭೂಮಿ ಕೊಡುಗೆ ಕೊಟ್ಟ ಬಗ್ಗೆ ಉಲ್ಲೇಖವಿದೆ. ಶಾಸನ ತ್ರುಟಿತವಾಗಿದೆ.

ಮಿರ್ಲೆ 94 ಶಾಸನ ಕಾವೇರಿ ನದೀ ತೀರದಲ್ಲಿರುವ ಸಂಧ್ಯಾವಂದನ ಮಂಟಪದ ಬಳಿಯಿದೆ. 17ನೇ ಶತಮಾನದ್ದಾಗಿದ್ದು, ಕೀಲಕ ಸಂವತ್ಸರದ ಕಾರ್ತಿಕ ಶುದ್ಧ 5 ರಂದು

ಭಾರದ್ವಾಜ ಗೋತ್ರದ ಮಿರ್ಲೆಯ ನಾಗಣ್ಣನ ಮಕ್ಕಳು ಲಕ್ಕಣ್ಣ ಮಾಡಿಸಿದ ಕಲ್ಲಿನ ಕಂಬ ಎಂದಿದೆ. ಮಿರ್ಲೆ 95 (IV ಯೆ52) ಶಾಸನ ಅಮೃತೇಶ್ವರ ದೇವಾಲಯದ ಬಾಗಿಲಿನ ಒಳಗೆ ತೊಲೆಯ ಮೇಲಿದೆ. 17ನೇ ಶತಮಾನದ ಶಾಸನವಾಗಿದ್ದು, ಮಿರ್ಲೆಯ ಅಮೃತೇಶ್ವರ ದೇವರಿಗೆ ಸುಂಕದ ಹಸಾಡಯ್ಯನವರ ಸೊಸೆ ಬನ್ನಾವಾಲೆಯವರು ಒಂದು ಗದ್ಯಾಣವನ್ನು ದೇವರಿಗೆ ನಂದಾದೀವಿಗೆಗೆ ಕೊಟ್ಟ ಬಗ್ಗೆ ಉಲ್ಲೇಖವಿದೆ.

**ವೀರ ಮಾಸ್ತಿಕಲ್ಲುಗಳು :** ಗ್ರಾಮದ ಪಶ್ಚಿಮಕ್ಕೆ, ಮುಂಭಾಗದಲ್ಲಿ ಮಾಚನಾಯಕನ ಕೆರೆಯಿದ್ದು, ಕಟ್ಟೆಯ ಮೇಲೆ ಪೂರ್ವಾಭಿಮುಖವಾಗಿ ವೀರ ಮಾಸ್ತಿಕಲ್ಲು ಇದೆ. 4 ಅಡಿ ಎತ್ತರ 2½ ಅಡಿ ಅಗಲವಿದೆ. ಎರಡು ಹಂತದಲ್ಲಿದ್ದು ಗ್ರಾನೈಟ್ ಕಲ್ಲಿನಲ್ಲಿದೆ.

ಮೊದಲನೆ ಹಂತದಲ್ಲಿ ವೀರ ಮಾಸ್ತಿಕಲ್ಲಿನ ಬಲಭಾಗದಲ್ಲಿ ವೀರ ಅಲಂಕಾರ ಭೂಷಣನಾಗಿ ನಿಂತಿದ್ದು, ಎಡಕೈಯನ್ನು ಕೆಳಗಡೆ ಇಳಿಬಿಟ್ಟಿದ್ದಾನೆ. ಬಲಗೈಯನ್ನು ಮಡಚಿ ತನ್ನ ಎದೆಯ ಮೇಲೆ ಇಟ್ಟುಕೊಂಡಿದ್ದಾನೆ. ವೀರನ ಮೊಣಕೈ ಕೆಳಗೆ ಸ್ತ್ರೀ ಶಿಲ್ಪವಿದೆ. ಈ ಶಿಲ್ಪ ಮಗಳದೋ, ಹೆಂಡತಿಯದೋ? ಶಿಲ್ಪದ ಎಡಭಾಗದಲ್ಲಿ ಮಾಸ್ತಿ ನಿಂತಿದ್ದು ತಲೆಗೆ ಕೇದಿಗೆ ಹೂವುಗಳನ್ನು ತುರುಬಿಗೆ ಸಿಕ್ಕಿಸಿಕೊಂಡು ಅಲಂಕಾರ ಮಾಡಿಕೊಂಡಿದ್ದಾಳೆ. ಎರಡೂ ತೋಳುಗಳಿಗೆ ತೋಳ್ಬಂದಿಗಳನ್ನು ತೊಟ್ಟಿದ್ದಾಳೆ. ಕೈಗೆ ಬಳೆಗಳು, ಕೊರಳಿಗೆ ಕಂಠಾಹಾರಗಳು ಎದೆಯವರೆಗೆ ಧರಿಸಿದ್ದಾಳೆ. ಬಲಗೈಯನ್ನು ಮೇಲಕ್ಕೆತ್ತಿದ್ದು ಹೆಬ್ಬೆರಳಿನ ಮಧ್ಯೆ ದೊಡ್ಡ ನಿಂಬೆಹಣ್ಣು ಹಿಡಿದಿರುವುದು ಸ್ಪಷ್ಟವಾಗಿದೆ. ಎಡಕೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ಶಿಲ್ಪ ಆಕರ್ಷಕವಾಗಿದೆ.

ಎರಡನೇ ಹಂತದಲ್ಲಿ ಸೂರ್ಯ, ಚಂದ್ರ ಮಧ್ಯೆ ಯಾಳಿಯ ಮುಖವಿದೆ. ಶಾಸನರಹಿತ ವೀರ ಮಾಸ್ತಿಕಲ್ಲಾಗಿದ್ದು, ಯಾವ ಉದ್ದೇಶಕ್ಕಾಗಿ ಇದು ಇಲ್ಲಿ ನಿರ್ಮಾಣ ಗೊಂಡಿದೆ ಎನ್ನುವುದು ಸ್ಪಷ್ಟವಿಲ್ಲ.

**ಒಕ್ಕೈ ಶಿಲ್ಪ :** ಗ್ರಾಮದ ಮುಂಭಾಗದಲ್ಲಿ ರಸ್ತೆಯ ಪಕ್ಕದಲ್ಲಿ ಅವನತಿಯ ಅಂಚಿನಲ್ಲಿರುವ ಒಂದು ಆಕರ್ಷಕ ಒಕ್ಕೈ ಶಿಲ್ಪವಿದೆ. ಶಿಲ್ಪ 4 ಅಡಿ ಎತ್ತರ, 2 ಅಡಿ ಅಗಲವಿದ್ದು ಬಿಳಿ ಗ್ರಾನೈಟ್ ಕಲ್ಲಿನಲ್ಲಿದೆ. ಶಿಲ್ಪದಲ್ಲಿ ಬಲಗೈಯನ್ನು ಮೇಲಕ್ಕೆತ್ತಿದ್ದು ಅಲಂಕಾರಿಕವಾದ ಒಕ್ಕೈ ಶಿಲ್ಪವಾಗಿದೆ; ಇದನ್ನು ಉಳಿಸುವ ಅಗತ್ಯತೆಯಿದೆ.

ಒಟ್ಟಿನಲ್ಲಿ ಮಿರ್ಲೆ ಗ್ರಾಮವು ರಾಮಾಯಣದ ಕಾಲಮಾನದಿಂದ ಹಿಡಿದು ಇಲ್ಲಿಯವರೆಗೂ ಜನವಸತಿಯ ನೆಲೆಯಾಗಿದ್ದು, ಇಲ್ಲಿನ ಶಾಸನಗಳು, ದೇವಾಲಯಗಳು, ವೀರಮಾಸ್ತಿಗಲ್ಲು ಗಳು ಕರ್ನಾಟಕದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಇವೆಲ್ಲವನ್ನೂ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಗ್ರಾಮದ ಗತ ಇತಿಹಾಸವನ್ನು ಸಾರಬೇಕಾಗಿದೆ.

□

# ಎನ್ನ ಜೀವಾತ್ಮ ಜಂಗಮಾತ್ಮದಲ್ಲೊಂದಾದಾಗ...

**ವೆಂಕಟೇಶ ಕೆ. ಜನಾದ್ರಿ**

ಪ್ರತಿಯೊಂದು ಜೀವಿಗಳಲ್ಲಿರುವ ಜೀವಾತ್ಮ ಒಂದು ಚೇತನ ಶಕ್ತಿಯಾಗಿರುತ್ತದೆ. ಈ ಚೇತನ ಶಕ್ತಿಗೆ ಕಾರಣವಾದ ಶಕ್ತಿ ಯಾವುದು? ಕಾಣದ ಈ ಶಕ್ತಿ ಎಲ್ಲಿಂದ ಸೃಜಿಸಲ್ಪಟ್ಟಿತ್ತು? ಇದಕ್ಕೆ ಸಮರ್ಪಕವಾದ ಉತ್ತರ ಅಲಭ್ಯ. ಒಂದೊಂದು ಚಿಂತನೆಗಳ ನೆಲೆಯಲ್ಲಿ ಒಬ್ಬೊಬ್ಬರು, ಒಂದೊಂದು ಬಗೆಯಲ್ಲಿ ಚಿಂತಿಸಬಹುದಷ್ಟೇ. ಒಟ್ಟಾರೆ ಒಂದು ಅಗಮ್ಯ, ಅಗೋಚರ ಚೇತನ ಶಕ್ತಿ ಸರ್ವಾಂತರ್ಯಾಮಿಯಾಗಿ ಇದ್ದೇ ಇದೆ ಎಂಬುದಂತೂ ಸರ್ವರಿಗೆ ಒಪ್ಪಿತವಾದ ವಿಚಾರ. ಈ ಒಟ್ಟು ಚೇತನ ಶಕ್ತಿಯ ಮೂಲಕ್ಕೆ ದೇವಕಣ ಅಥವಾ ದೇವ ಎಂಬರ್ಥದಲ್ಲಿ ಸ್ವೀಕರಿಸಬಹುದು. ಈ ದೇವನನ್ನೇ ಬಗೆಬಗೆಯ ಧಾರ್ಮಿಕ ನೆಲೆಯಲ್ಲಿ ಒಂದೊಂದು ಬಗೆಯಲ್ಲಿ ಬಿಂಬಿಸಿಕೊಳ್ಳುತ್ತಾರೆ. ಶಿವ, ಅಲ್ಲಾ, ಏಸು, ಬುದ್ಧ, ಮಹಾವೀರ, ರಾಮ, ಕೃಷ್ಣ ... ಹೀಗೆ ಅದು ಅವರವರ ಭಾವಭಕ್ತಿಗೆ ತೆರೆದುಕೊಳ್ಳುವ ವಿಚಾರವದು.

ಹಲವು ಸಲ ವ್ಯಕ್ತಿಯನ್ನು ದೈವಕ್ಕೇರಿಸಿಕೊಂಡಿರುವ ಉದಾಹರಣೆಗಳು ಇವೆ. ಆದರೆ ವ್ಯಕ್ತಿ ಬೇರೆ, ಸಮಷ್ಠಿಯೇ ಬೇರೆ. ಯಾವುದೇ ಕಾರಣಕ್ಕೆ ವ್ಯಕ್ತಿ ಸಮಷ್ಟಿಯಾಗಲು, ವ್ಯಕ್ತಿ ಪರಮ ದೇವಶಕ್ತಿಯಾಗಲು ಅಸಾಧ್ಯ. ದೇವ ಅಥವಾ ಮಹಾ ಚೇತನಶಕ್ತಿಗೆ ಸಾವಿಲ್ಲ. ಆದರೆ ಕೆಲವರು ನಂಬಿಕೊಂಡಂತ ಬುದ್ಧ, ಮಹಾವೀರ, ರಾಮ, ಕೃಷ್ಣ ಇವರುಗಳಿಗೆಲ್ಲ ಸಾವಿದೆ. ಹೀಗಾಗಿ ಇಂಥ ವ್ಯಕ್ತಿಗಳನ್ನು ನಾವು ದೇವ, ದೇವರು ಎನ್ನಲಾಗದು. ದೇವ ಮಾನವ ಎಂದೋ ದೇವರ ಸ್ವರೂಪಿ ಎಂದೋ ಕರೆದುಕೊಳ್ಳಬಹುದು. ನಿಜದ ದೇವ ಅದು ಜಂಗಮ ಸ್ವರೂಪದಲ್ಲಿ ಒಂದು ಒಟ್ಟು ಶಕ್ತಿ ಅಥವಾ ಒಂದು ಒಟ್ಟು ವ್ಯವಸ್ಥೆ ಆಗಿರುತ್ತದೆ. ಹೀಗೆ ಒಟ್ಟಾರೆ ಎಲ್ಲಾ ನೆಲೆಯಲ್ಲಿಯೂ ಯೋಚಿಸಿದಾಗ ಒಂದು ಪರಮ ಚೇತನ ಶಕ್ತಿ ಇದೆ ಎಂಬುದಂತೂ ಒಪ್ಪಲೇಬೇಕು. ಈ ಒಟ್ಟು ಚೇತನ ಶಕ್ತಿಯನ್ನು ನಾನಿಲ್ಲಿ ಶರಣರ ಪರಿಭಾಷೆಯ ಶಬ್ದವನ್ನು ಬಳಸಿಕೊಂಡು ಜಂಗಮ ಅಥವಾ "ಜಂಗಮಾತ್ಮ" ಎಂದು ಗುರುತಿಸಿಕೊಂಡು ಬಳಸಿಕೊಂಡಿರುವೆ.

ಒಂದು ವ್ಯಕ್ತಿಯಾಗಿ ತಮ್ಮೊಳಗಿರುವ ಚೇತನ ಶಕ್ತಿಗೆ ಜೀವಾತ್ಮ ಎಂದು ಗುರುತಿಸಿ ಕೊಂಡವರು ತಮ್ಮಲ್ಲಿರುವ ಜೀವಾತ್ಮದ ಮೂಲ ದೇವನದ್ದು ಎಂದರಿತಿರಬೇಕಾಗುತ್ತದೆ. ಆ ಮಹಾ ಶಕ್ತಿಯ ಒಂದಂಶ ತಮ್ಮಲ್ಲಿಳಿದು ಅದುವೇ ಜೀವವಾಗಿ ಮತ್ತು ಆತ್ಮವಾಗಿ ಒಟ್ಟು ಜೀವಾತ್ಮವಾಗಿ ಆ ದೇವನನ್ನು ನಮ್ಮೊಳಗಿದ್ದೇ ಪ್ರತಿನಿಧಿಸುತ್ತಿರುತ್ತದೆ. ಆ ದೇವ

ಶಕ್ತಿಯ ಪ್ರತಿನಿಧಿಯಾದ ಪ್ರತಿ ಜೀವಾತ್ಮನು ಒಟ್ಟು ಜೀವ ಸಂಕುಲದ ಜಂಗಮಾತ್ಮದಲ್ಲಿ ತಾನೂ ಒಂದೆಂದು ಅರಿತುಕೊಂಡಿರಬೇಕು. ಜೀವಾತ್ಮವಾಗಿ ನನ್ನ ಚಿಂತನೆ, ನನ್ನ ಕಾಯಕ, ನನ್ನ ಪ್ರಯತ್ನ, ನನ್ನ ಸಾಧನೆ, ನನ್ನ ಅರಿವು ಎಲ್ಲವೂ ಆ ಸಕಲ ಜೀವಿಗಳಿರುವ ಜಂಗಮಕ್ಕಾಗಿ ಎಂಬ ನೆಲೆಯಲ್ಲಿರಬೇಕು.

ಈ ಸಕಲ ಜೀವಿಗಳಲ್ಲಿರುವ ಜಂಗಮದಲ್ಲಿ ಇರುವುದಾದರೂ ಯಾರು? ಆ ದೇವನೇ ತಾನೇ? ಅದೇ ದೇವನೇ ನನ್ನೊಳಗೂ ಇದ್ದಾನೆ ಹೀಗಿದ್ದಾಗ ನನ್ನೊಳಗಿರುವಾತನಿಗೆ ಉಳಿದ ಜೀವಿಗಳಲ್ಲಿರುವವನ ಕುರಿತು ಬೇಧವಿರದು. ನನ್ನೊಳಗಿರುವಾತನಿಗೇ ಉಳಿದ ಜೀವಿಗಳಲ್ಲಿ ಬೇಧವಿಲ್ಲದಿದ್ದಾಗ ಕೇವಲ ಕಾಯವಾಗಿರುವ ನನಗೇಕಿರಬೇಕು ಈ ಬೇಧ ಭಾವ? ಈ ಎಲ್ಲ ಬಗೆಯಲ್ಲಿ ವಿಶಾಲವಾಗಿ ಚಿಂತಿಸಿದಾಗ ನಾನು, ನನ್ನದು, ನನ್ನ ಕುಟುಂಬ, ನನ್ನ ಜಾತಿ, ನನ್ನ ಧರ್ಮ, ನನ್ನ ದೇಶ ಎಂಬ ಹಲವು ಬಗೆಯ ಭ್ರಮೆಗಳಲ್ಲಿ ನಾವೆಷ್ಟು ಕುಬ್ಜರಾಗಿದ್ದೇವೆಂಬ ಅರಿವು ನಮ್ಮಲ್ಲಿ ಜಾಗೃತವಾದಾಗ ನಮ್ಮ ಒಳಗಣ್ಣನು ತೆರೆಸುತ್ತದೆ. ಹೀಗೆ ನಮ್ಮ ಒಳಗಣ್ಣು ತೆರೆಯದಿದ್ದರೆ ನಾವೆಷ್ಟೇ ಪ್ರಯತ್ನಶೀಲರಾಗಿದ್ದರೂ ಅದು ವ್ಯರ್ಥ.

ನನ್ನ ಕಾಯಕ, ನನ್ನ ಪೂಜೆ, ನನ್ನ ಸೇವೆಗಳೇನಿದ್ದರೂ ಅದು ಆ ಸಕಲ ಜೀವಾತ್ಮಕ್ಕೆ ಎಂಬ ಭಾವದಲ್ಲಿರಬೇಕು. ಜಂಗಮ ಎಂಬುದು ಒಟ್ಟು ಸಮಾಜ. ಒಟ್ಟು ಜೀವ ಸಂಕುಲ, ಒಟ್ಟು ನಿಸರ್ಗ ಎಂಬ ವಿಶಾಲ ಅರ್ಥದಲ್ಲಿ ಪರಿಭಾವಿಸಿಕೊಂಡಿರಬೇಕು. ನನ್ನ ಒಳಗಿರುವಾತನನ್ನು ಅರಿತುಕೊಳ್ಳಲು, ನನ್ನಲ್ಲಿರುವ ಚೇತನ ಶಕ್ತಿಗೆ ಕಾರಣವಾದಾತನೊಂದಿಗೆ ಸಂವಾದಿಸುತ್ತ ಪೂಜಿಸಿಕೊಳ್ಳುವ ನಾವು ನಮ್ಮನ್ನು ನಾವು ಅರಿತುಕೊಂಡು ನಮ್ಮಷ್ಟಕ್ಕೆ ನಾವು ಲಿಂಗ ಸ್ವರೂಪಿಗಳಾಗಿ ಉಳಿದುಬಿಡುವುದಷ್ಟೇ ಅಲ್ಲ. ನಮ್ಮಂತೆ ಸುತ್ತಲಿನ ಲಿಂಗ ಸ್ವರೂಪಿಗಳ ಒಳಿತನ್ನು ಬಯಸುವ ಮೂಲಕ ಜಂಗಮ ಪ್ರೇಮಿಯಾಗಿ ನಮ್ಮ ಜೀವಾತ್ಮ ಆ ಜಂಗಮಾತ್ಮದಲ್ಲೊಂದಾಗಬೇಕು. ಈ ತತ್ವವನ್ನು ಮಹಾ ಮಾನವತಾವಾದಿ ಬಸವಣ್ಣ ತಮ್ಮದೊಂದು ವಚನದಲ್ಲಿ ನದಿಯೊಳಗೆ ನದಿ ಬೆರೆಸಿದಂತಾಗಬೇಕೆಂಬ ನೆಲೆಯಲ್ಲಿ ಅನುಭಾವಿಸಿದ್ದಾರೆ.

> ಲಿಂಗವ ಪೂಜಿಸಿ ಫಲವೇನಯ್ಯ,
> ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
> ಲಿಂಗವ ಪೂಜಿಸಿ, ಫಲವೇನಯ್ಯಾ,
> ಕೂಡಲಸಂಗಮದೇವರ ಪೂಜಿಸಿ
> ನದಿಯೊಳಗೆ ನದಿ ಬೆರೆಸಿದಂತಾಗದನ್ನಕ್ಕ?

ಬಸವ ತತ್ವದಲ್ಲಿ ನನ್ನ ಭೌತಿಕ ಕಾಯದಲ್ಲಿ ಜೀವಾತ್ಮನಿದ್ದಾನೆಂಬ ಅರಿವು ಜಾಗೃತವಾದ ಕ್ಷಣದಿಂದ ಕೇವಲ ಅಂಗವಾಗಿದ್ದ ನನ್ನ ಅಂಗ "ಅ" ಸ್ಥಳದಲ್ಲಿ "ಲಿ" ಬಂದು ಅಂಗವಳಿದು ಅದುವೇ ಲಿಂಗ ಆಗುತ್ತದೆ. ಅಂಗದಲ್ಲಿ ಜೀವಾತ್ಮನೆಂಬ ದೇವನ ನೆಲೆ ಇರುವುದನ್ನು ಅರಿತುಕೊಳ್ಳುವ ಮೂಲಕ ನಮ್ಮ ಅಂಗವನ್ನೇ ಲಿಂಗವನ್ನಾಗಿಸಿಕೊಳ್ಳಬಹುದಾದ ಅದ್ಭುತ

ಅನುಭಾವಿಕ ಸಾಧನೆ ಶರಣರದ್ದು. ಶರಣರು ಈ ಬಗೆಯಲ್ಲಿ ತಮ್ಮಷ್ಟಕ್ಕೆ ತಾವು ಲಿಂಗಸ್ವರೂಪಿಗಳಾಗಿ ಸುಮ್ಮನೇ ಕೂಡಲಿಲ್ಲ. ಸಕಲರಲ್ಲಿಯೂ ಲಿಂಗವನ್ನು ಕಂಡು ಲೇಸನ್ನು ಬಯಸುವ ಮೂಲಕ ಅವರು ಸಕಲರೊಂದಿಗೆ ಸಮಸುಖವನ್ನರಿತರು. ಆಗ ಅವರಿಗೆ ಲಿಂಗ ಪೂಜಿಸಿದ ಫಲ ಪ್ರಸಾದವಾಗಿತ್ತು. ತಮಗೊಲಿದ ಪ್ರಸಾದವನ್ನು ದಾಸೋಹಿಸಿ ಜಂಗಮ ಪ್ರಸಾದಿಯಾದರು. ಅವರು ಕಲಿಸಿದ ಈ ಪ್ರಸಾದವೇ ಬಸವಪಥಿಕರು ಮಾಡಿಕೊಳ್ಳುತ್ತಿರುವ ಇಷ್ಟಲಿಂಗ ಪೂಜೆ. ಅಥವಾ ಶಿವಯೋಗ.

ಹೀಗೆ ನನ್ನೊಳಗೇ ಆ ದೇವನಿದ್ದಾಗ ನನಗೆ ಮತ್ತೊಂದು ಹೊರಗಿನ ಭೌತಿಕ ದೇವರ ಅಗತ್ಯವಿಲ್ಲ. ಆ ಒಳಗಿರುವ ದೇವನನ್ನೇ ನಾನು ಅರಿತು ಆ ದೇವನನ್ನು ನಾನೇ ಪೂಜಿಸಿಕೊಳ್ಳುವ ಪೂಜೆಯೇ ಶಿವಯೋಗ, ಇಷ್ಟಲಿಗ ಪೂಜೆ ಎಂದೆನಿಸಿಕೊಳ್ಳುತ್ತದೆ. ಇಷ್ಟಲಿಂಗ ಪೂಜೆಯಲ್ಲಿ ಎಡಗೈಯಲ್ಲಿರುವ ಲಿಂಗ ಕೇವಲ ಒಳಗಿರುವ ನಿರಾಕಾರ ದೇವನ ಸಾಕಾರ ಸ್ವರೂಪ ಮಾತ್ರ. ಅದುವೇ ನಿಜದ ದೇವನಲ್ಲ ಅದುವೇ ನಿಜದ ದೇವನೆಂದುಕೊಂಡರೆ ಅದು ಎಲ್ಲ ಗುಡಿಯೊಳಗಿರುವ ಮೂರ್ತಿಗಳಂತೆ ಕೈಯಲ್ಲಿ ಕೇವಲ ಸ್ಥಾವರ ಮೂರ್ತಿಯಾಗಿಯೇ ಉಳಿದು ಬಿಡುತ್ತದೆ.

ಹೀಗೆ ನಮ್ಮೊಳಗಿರುವ ದೇವನನ್ನು ಅರಿತು ಪೂಜಿಸಿಕೊಂಡು ಆತನೊಂದಿಗೆ ಬೆರೆತು ನಮ್ಮ ಅಂಗವನ್ನು ಲಿಂಗವನ್ನಾಗಿಸಿಕೊಂಡು ನಾವು ಲಿಂಗಸ್ವರೂಪಿಗಳೆಂದು ಸುಮ್ಮನಿದ್ದುಬಿಟ್ಟರೆ ಅಲ್ಲಿಗೆ ಮುಗಿಯದು. ನಿಜದ ಲಿಂಗವಂತನ ಕರ್ತವ್ಯವೆಂದರೆ ತಾನು ಲಿಂಗಸ್ವರೂಪಿಯಾಗಿ ಲಿಂಗತತ್ವವನ್ನು ಅಳವಡಿಸಿಕೊಂಡ ನಂತರ ತನ್ನ ಸುತ್ತಲಿರುವ ಸಕಲ ಜೀವಿಗಳಲ್ಲಿಯೂ ಇದೇ ಭಾವವನ್ನು ಕಾಣಬೇಕು. ಅದೇ ಕಾಲಕ್ಕೆ ತನ್ನ ಹಾಗೆಯೇ ಸಕಲ ಜೀವಿಗಳು ಲಿಂಗವಂತರೆಂಬ ಭಾವದಲ್ಲಿ ಸಮ ಗುಣ, ಸಮ ಸುಖವನ್ನು ಅವರೊಡನೆ ಹಂಚಿಕೊಳ್ಳಬೇಕು. ಸಕಲ ಜೀವಿಗಳಿಗೆ ಲೇಸನ್ನು ಬಯಸಬೇಕು.

ಹೀಗಾದಾಗ ನನ್ನ ಅಂಗಮಯವಾದ ಜೀವಾತ್ಮ ಮತ್ತು ಸಕಲರಲ್ಲಿರುವ ಲಿಂಗಮಯವಾದ ಪರಮಾತ್ಮ ಒಂದಾಗುತ್ತದೆ. ಅದು ನಿಜದ ಲಿಂಗಾಂಗ ಸಾಮರಸ್ಯ. ನನ್ನೊಳಗಿರುವ ದೇವನೊಡನೆ ಸಾಮರಸ್ಯ ಸಾಧಿಸಿದರೆ ಅದು ಲಿಂಗಾಂಗ ಸಾಮರಸ್ಯವೇನೋ ಸರಿ. ಆದರೆ ಜಂಗಮಾಂಗ ಸಾಮರಸ್ಯವೂ ಬೇಕು. ಈ ಜಂಗಮಾಂಗ ಸಾಮರಸ್ಯಕ್ಕಾಗಿ ಜಂಗಮಭಾವದಲ್ಲಿ ಸಕಲ ಜೀವಿಗಳೊಡನೆ ನನ್ನ ಸಮಾಗಮವಾಗಬೇಕು. ಅದು ಜಂಗಮಾಂಗ ಸಾಮರಸ್ಯವಾಗುತ್ತದೆ. ಇದು ಜಂಗಮದಲ್ಲಿ ಆಗುವ ಲಿಂಗೈಕ್ಯ. ಈ ಲಿಂಗೈಕ್ಯ ಪ್ರತಿಕ್ಷಣವೂ ಆಗುತ್ತಿರಬೇಕು. ಇದರರ್ಥ ಇಷ್ಟೆ. ನನ್ನ ಪ್ರತಿ ಕಾಯಕದ ಕ್ಷಣ, ನಾನು ನುಡಿಯುವ ಪ್ರತಿ ನುಡಿ, ನಾನು ನಡೆಯುವ ಪ್ರತಿ ನಡೆಯೂ ನಾನಿರುವ ಜಂಗಮದ ಒಳಿತಿಗಾಗಿರಬೇಕು. ಹಾಗಾದಾಗಲೇ ಅದು ಸತ್ಪಾತ್ರಕ್ಕೆ ಸಲ್ಲಿಕೆಯಾಗುತ್ತದೆ. ಇದುವೇ ಬಸವನ ಅಂತಃಕರಣವಾಗಿತ್ತು. ಇಂಥ ಅರಿವನ್ನು ತಿಳಿಸುವ ಮೂಲಕ ಬಸವಣ್ಣ ಒಟ್ಟು ಸಮಾಜ ಕಲ್ಯಾಣದ ಗುರಿಯನ್ನು ಸಾಧಿಸುತ್ತಾರೆ. ಇದುವೇ ಅತನ "ಇವನಮ್ಮವ" ಎಂಬ ಪರಿಕಲ್ಪನೆಯಾಗಿತ್ತು. "ಇವ ನಮ್ಮವ" ಎಂಬ ಆಪ್ತ ಭಾವದಲ್ಲಿ ವಿಶ್ವ ಕುಟುಂಬದ ಮಮತೆ ಇತ್ತು. ಕಲ್ಯಾಣ ನಾಡಿನ ತುಡಿತವಿತ್ತು.

ಈ ರೀತಿಯಲ್ಲಿ ನನ್ನ ಲಿಂಗಯ್ಯನೊಂದಿಗೆ ಒಂದಾಗುತ್ತಲೇ ಜಂಗಮ ಲಿಂಗಯ್ಯನೊಂದಿಗೆ ಒಂದಾಗುವತ್ತ ನನ್ನ ಬದುಕಿನ ಗತಿ ಇದ್ದಾಗ ನನ್ನ ನಡೆಗೆ ನನ್ನೊಳಗಿರುವಾತನೇ ಸ್ವತಃ ಅಹುದಹುದೆನ್ನುವ ಮೂಲಕ ಆತನ ಮೆಚ್ಚುಗೆ ಇರುತ್ತದೆ. ನನ್ನ ಲಿಂಗಯ್ಯನನ್ನು ನಾನು ಪೂಜಿಸಿಕೊಂಡಿದ್ದೂ ಸಹ ಸತ್ಪಾತ್ರಕ್ಕೆ ಸಲ್ಲಿಕೆಯಾಗುತ್ತದೆ. ನನ್ನ ಲಿಂಗಯ್ಯನ ಪೂಜೆಯ ಫಲ ಜಂಗಮಕ್ಕೆ ತಲುಪುತ್ತದೆ. ಆಗ ಮಾತ್ರ ನಾನು ಲಿಂಗ ಪೂಜಿಸಿಕೊಂಡಿದ್ದರ ಫಲ ಜಂಗದಲ್ಲಿರುವ ಕೂಡಲಸಂಗಮದೇವರ ಪೂಜಿಸಿದಂತಾಗಿ ನದಿಯೊಳಗೆ ನದಿ ಬೆರೆಸಿದಂತಾಗುತ್ತದೆ. ಜೀವಾತ್ಮಗಳ ಸಕಲ ಕೂಡುವಿಕೆಯೇ ಪರಮಾತ್ಮವಾಗಿದ್ದಾಗ ಎಲ್ಲ ನದಿಗಳ ಕೂಡುವಿಕೆಯೇ ಮಹಾ ನದಿಯಾದಂತೆ ನನ್ನ ಪೂಜೆ ಸಕಲರ ಪೂಜೆಯಂತಾಗುತ್ತದೆ. ಇದಕ್ಕೆ ನನ್ನ ಭಾವದಲ್ಲಿ ಜಂಗಮಾತ್ಮದ ಭಾವವಿರಬೇಕು.

ಎಲ್ಲರಲ್ಲಿಯೂ ಒಂದೇ ಕಳೆ ಇದ್ದಾಗ, ಎಲ್ಲದರಲ್ಲಿಯೂ ಒಂದೇ ಚೇತನವಿದ್ದಾಗ, ಎಲ್ಲರೊಳಗಿರುವಾತನು ಆತನೇ ಆಗಿದ್ದಾಗ ಅಲ್ಲಿ ವರ್ಣಬೇಧ, ವರ್ಗ ಬೇಧ, ಜಾತಿ ಬೇಧ, ಬಡವ ಶ್ರೀಮಂತ, ಸ್ಪೃಶ್ಯ ಅಸ್ಪೃಶ್ಯ ಭಾವಗಳಿರಬಾರದು. ಅಲ್ಲಿ ಸರ್ವರ ಹಿತ ಸುಖ ಮಾತ್ರ ಮುಖ್ಯ. ಇದುವೇ ಸಮಸುಖ ಭಾವ. ಸಕಲ ಜೀವಾತ್ಮರಲ್ಲಿ ಭಾವೈಕ್ಯ ಸಾಧಿಸಲು ಬಸವನ ಈ ಭಾವ ಬೆರೆಸಿದ ಪೂಜೆಯಿಂದ ನನ್ನೊಂದಿಗಿರುವಾತ ನೊಂದಿಗೆ ಲಿಂಗಾಂಗ ಸಾಮರಸ್ಯ ಸಾಧಿಸಿದಂತೆಯೇ ನನ್ನೊರಗಿರುವ ಸಕಲರೊಡನೆಯೂ ಜಂಗಮಾಂಗ ಸಾಮರಸ್ಯ ಸಾಧಿಸುವ ಭಕ್ತಿ ಭಾವ ನನ್ನದಾಗುತ್ತದೆ.

ಇಂಥ ಬಸವಾದಿ ಪ್ರಮಥರ ಶರಣ ಪಥದಲ್ಲಿ ಸಾಮರಸ್ಯದ ನಡಿಗೆಯಿಂದ ಪರಮಾನಂದದೊಂದಿಗೆ ಈ ಜಂಗಮವೆಂಬ ಲೋಕದಲ್ಲಿ ಬದುಕಿದ್ದೇ ಆದರೆ ನಾನು ನನ್ನ ಇಷ್ಟಲಿಂಗದಿಂದ ನನ್ನೊಳಗಿರುವಾತನನ್ನು ಪೂಜಿಸಿದ್ದಕ್ಕೂ ಸಾರ್ಥಕವಾಗುತ್ತದೆ. ಇಲ್ಲವಾದರೆ ಜಂಗಮವನ್ನು ಯೋಚಿಸದೇ ನನ್ನ ಲಿಂಗಯ್ಯನನ್ನು ಮಾತ್ರ ಪೂಜಿಸಿಕೊಂಡರೆ ನಾನು ಕೂಡಬೇಕಾದ ಕೂಡಲಸಂಗಯ್ಯನನ್ನು ಕೂಡಲಾಗದು.

ಹಾಗಾಗಿ ನನ್ನೊಳಗಿರುವಾತನೊಡನೆ ಸಾಮರಸ್ಯದ ಸಂಗಾತತನ ಬೆಳೆಸಿಕೊಂಡು ನಾನು ಲಿಂಗ ಸ್ವರೂಪಿಯಾಗಿ ಲಿಂಗವಂತನಾಗಿ ಲಿಂಗ ತತ್ವವನ್ನರಿತು ಬಹಿರಂಗದಲ್ಲಿ ನನ್ನಂತೆಯೇ ಇರುವ ಸಕಲ ಜೀವಿಗಳಲ್ಲಿ ಆ ದೇವನಿರುವ ಲಿಂಗತತ್ವದ ಅರಿವಿನಿಂದ ಅವರೆಲ್ಲರಿಗೂ ಒಳಿತಾಗುವಂತೆ ನಾನು ಮಾಡುವ ಪೂಜೆಯಲ್ಲಿ ಆ ಭಾವವನ್ನಿರಿಸಿಕೊಂಡಾಗ ನಾನು ಲಿಂಗ ಪೂಜಿಸಿದ ಫಲ ನನಗಷ್ಟೇ ಅಲ್ಲ ಸಕಲ ಲಿಂಗಗಳಿಗೂ ಸ್ಪರ್ಷಿಸುತ್ತದೆ. ಆಗ ನನ್ನ ಲಿಂಗಯ್ಯನೊಡನೆ ಸಕಲ ಲಿಂಗಗಳನ್ನು ಕೂಡಿಕೊಂಡ ನನ್ನ ಭಾವ ಕೂಡಲಸಂಗಮನನ್ನು ಪೂಜಿಸಿದಂತಾಗಿ ನದಿಯೊಳಗೆ ನದಿ ಬೆರೆತಂತಾಗುತ್ತದೆ. ನದಿಯೊಳಗೆ ನದಿ ಬೆರೆತಾಗಲೇ ಅಗಮ್ಯ ಸಾಧ್ಯ. ಇಷ್ಟಕ್ಕೆಲ್ಲ ನನ್ನ ಭಕ್ತಿಭಾವ ಎನ್ನ ಜೀವಾತ್ಮ ಜಂಗಮಾತ್ಮದಲ್ಲೊಂದಾಗಿ ಕೂಡಿದಾಗಿನ ಅನುಭಾವದ ಕೂಡಲಸಂಗಮವಾದಾಗಲೇ ಸಾಧ್ಯವೆಂಬುದನ್ನು ಬಸವ ಪ್ರಜ್ಞೆ ನನಗೆ ಅನುಭಾವಿಸಿದೆ.

□

# ಹುಲ್ಲಹಳ್ಳಿ ಶಾಂತವೀರ ದೇಶಿಕ ವಿರಚಿತ "ಶಿವಲಿಂಗ ಚಾರಿತ್ರ" : ಒಂದು ಪರಿಚಯ

ಡಾ. ಬಿ. ನಂಜುಂಡಸ್ವಾಮಿ

ನಮ್ಮ ನಾಡಿನ ಮೂಲೆಮೂಲೆಗಳಲ್ಲಿ ರಚಿತವಾದ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ಅವುಗಳ ಪ್ರಕಟಣೆಗೆ ಅನೇಕ ಹಿರಿಯರು ದುಡಿದ ನೂರಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇದೆ. ಯುವ ವಿದ್ವಾಂಸರು ಆ ಕೃತಿಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿ ಅವುಗಳಲ್ಲಿರುವ ಸೂಕ್ಷ್ಮ ವಿಷಯವನ್ನು ಗ್ರಹಿಸಬೇಕು. ಶಾಂತವೀರ ದೇಶಿಕ ವಿರಚಿತ "ಶಿವಲಿಂಗ ಚಾರಿತ್ರ" ಲಘುಕೃತಿಯನ್ನು ಲಿಂ. ಆಸ್ಥಾನ ವಿದ್ವಾನ್ ಶ್ರೀ ಎಂ.ಜಿ. ನಂಜುಂಡಾರಾಧ್ಯರು ಸಂಪಾದಿಸಿದರು. ಕನ್ನಡ ಸಾಹಿತ್ಯಕ್ಕೆ ತಮ್ಮ ದೇಹವನ್ನು ಗಂಧದಂತೆ ತೇಯ್ದ ಡಾ. ಜ.ಚ.ನಿ. ಸನ್ನಿಧಿಯವರು ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥಭಂಡಾರದಿಂದ 1966ರಲ್ಲಿ ಪ್ರಕಟ ಮಾಡಿದ್ದಾರೆ.

ವೀರಶೈವ ಸಾಹಿತ್ಯ ಸಂಸ್ಕೃತಿಯನ್ನು ಬೇರುಮಟ್ಟದಲ್ಲಿ ಅಧ್ಯಯನ ಮಾಡಿದವರಿಗೆ ಅದರ ಸ್ವರೂಪದ ಬಗ್ಗೆ ಸ್ಪಷ್ಟವಾದ ಮಾಹಿತಿ ಇರುತ್ತದೆ. ಈ ಧರ್ಮದಲ್ಲಿ ಮಠಕ್ಕೆ, ಮಠಸ್ಥರಿಗೆ ವಿಶೇಷವಾದ ಗೌರವ. ಪ್ರತಿಯೊಂದು ಆಚರಣೆಯಲ್ಲೂ "ಜಂಗಮಾರಾಧನೆ"ಗೆ ವಿಶೇಷವಾದ ಸ್ಥಾನ. ವೀರಶೈವ ಧರ್ಮದಲ್ಲಿ ಗುರುವರ್ಗದ ಮಠಗಳು, ವಿರಕ್ತವರ್ಗದ ಮಠಗಳು, ಪುತ್ರವರ್ಗದ ಮಠಗಳು ಬಹಳ ಮುಖ್ಯವಾದವು. ನಾನಾ ಕಾರಣಗಳಿಂದ ಅನೇಕ ಮಠಗಳು ಕಾಲಗರ್ಭದಲ್ಲಿ ಅಡಗಿಹೋಗಿವೆ. ಪುತ್ರವರ್ಗದ ಮಠಗಳು ಅಲ್ಲಲ್ಲಿ ಒಂದೊಂದು ಉಳಿದುಕೊಂಡಿದೆ. ಉದಾಹರಣೆಗೆ ಬಳ್ಳಾರಿ ಮರಿಸ್ವಾಮಿಗಳ ಮಠ, ಕಾನಾಮಡುವಿನ ದಾಸೋಹ ಮಠ. ಪುತ್ರವರ್ಗದ ಪರಂಪರೆಯ ಅದ್ಭುತ ಇತಿಹಾಸವನ್ನು ತುಂಬಿಕೊಂಡಿರುವ 'ಶಿವಲಿಂಗ ಚಾರಿತ್ರ' ಕೃತಿಯನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಆರಾಧ್ಯರು ಮೂವತ್ತು ಪುಟದ ಮೂಲ ಗ್ರಂಥಕ್ಕೆ, ಇಪ್ಪತ್ತೈದು ಪುಟದ ಪೀಠಿಕೆಯನ್ನು, ಹದಿನೇಳು ಪುಟದ 'ಕವಿ ಕಾವ್ಯ ಭಾವವನ್ನು ಶ್ರೀ ಜ.ಚ.ನಿ. ಸನ್ನಿಧಿಯವರು ಬರೆದಿದ್ದಾರೆ. ನಂಜುಂಡಾರಾಧ್ಯರು ಈ ಕೃತಿಯನ್ನು ಸಂಪಾದಿಸಿದ್ದು ತಮ್ಮ ಪೂರ್ವಿಕರು ನೆಲೆಸಿದ್ದ ಮೂಲ ನೆಲದವನು ಕವಿ 'ಶಾಂತವೀರ ದೇಶಿಕ' ಎಂದು. ಧಾರವಾಡದ 'ಸಾಹಿತ್ಯ ಸಮಿತಿ ಪತ್ರಿಕೆ'ಯಲ್ಲಿ ಕೃತಿ ಕುರಿತು 29.6.1941ರಲ್ಲಿ ಒಂದು ಲೇಖನವನ್ನು ಆರಾಧ್ಯರು ಬರೆದಿದ್ದಾರೆ.

ಕವಿಚರಿತೆಗಾರರು ಶಾಂತವೀರ ದೇಶೀಕನ ಕಾಲವನ್ನು ಸುಮಾರು ಕ್ರಿ.ಶ. 1650 ಎಂದು ನಿರ್ಧರಿಸಿದ್ದಾರೆ. ಕವಿಯು ಈ ಕೆಳಕಂಡ ಕೃತಿಗಳನ್ನು ಬರೆದಿರುವುದನ್ನು

ಹಸ್ತಪ್ರತಿಗಳನ್ನು ಅವಲೋಕಿಸಿ ಸಿದ್ಧ ಮಾಡಿದರು. 1. ಶಿವಲಿಂಗಚಾರಿತ್ರ, 2. ಶಿವಗಣಚಾರಿತ್ರ, 3. ಸೌಂದರೇಶ್ವರನ ಯಕ್ಷಗಾನ, 4. ಶಿವಮಹತ್ವಸಾರಶಿಖಾಮಣಿಸಂಗ್ರಹಶತಕ, 5. ಗಿರಿಜಾದೇವಿ ಸಂಕೀರ್ತನ. ಇವನ ಸ್ಥಳ ಕೆಣಿಯನೂರು. ವರಕವಿ ಗಜೇಂದ್ರ ಕಂಠೀರವ, ಶಿವಕವಿಭೃತ್ಯ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ತಂದೆ ಚೆನ್ನಾರ್ಯನನ್ನು "ಸರಸಕವಿ ಕರ್ನಾಟ ಚಕ್ರೇಶ್ವರ" ಎಂದಿರುವುದರಿಂದ ಆತನೂ ಕವಿಯಾಗಿದ್ದಂತೆ ತೋರುತ್ತದೆ. ಆದರೆ ಈತನು ಯಾವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಕವಿಯ ಸೌಂದರೇಶ್ವರನ ಯಕ್ಷಗಾನ ಒಂದು ಓಲೆಯ ಪ್ರತಿಯ ಕೊನೆಯಲ್ಲಿ "ಇದನ್ನು ಶಾಂತವೀರ ದೇಶಿಕನು ನಿರ್ಮಿಸಿ ಕಾಳಯುಕ್ತ ಸಂವತ್ಸರದಲ್ಲಿ ಬಸವಕೋಟೆಯ ಪರಮೇಶ್ವರಯ್ಯನಿಗೆ ಲೇಖನಂಗೈದುದು" ಎಂದಿದೆ. ಈ ಕಾಳಾಯುಕ್ತ ವರ್ಷವು 1678 ಆಗಿರಬೇಕು. ಇವನು ವೀರಶೈವ ಕವಿ; ತನ್ನ ಪರಂಪರೆಯನ್ನು ಹೀಗೆ ಹೇಳಿದ್ದಾನೆ. "ಶಿವಲಿಂಗಾರ್ಯ, ಮಗ ವೀರೇಶಾರ್ಯ, ಮಗ ಚೆನ್ನವೀರೇಶ್ವರ, ಮಗ ಕವಿ ಶಾಂತವೀರದೇಶಿಕ, ಪೂರ್ವಕವಿಗಳಲ್ಲಿ ಗುಬ್ಬಿಯ ಮಲ್ಲಣಾರ್ಯನನ್ನು (ಕ್ರಿ.ಶ. 1530) ಸ್ಮರಿಸುವುದರಿಂದ ಕವಿ ಆತನ ಕಾಲಕ್ಕೆ ಈಚೆಯವನೆಂಬುದು ವ್ಯಕ್ತವಾಗಿದೆ. ತನ್ನ ತಂದೆ ಚಾಮರಾಜೇಂದ್ರನ ಸಭೆಯಲ್ಲಿ ರಾಮದೀಕ್ಷಿತನನ್ನು ವಾದದಲ್ಲಿ ಜಯಿಸಿದಂತೆ:

> ಚಾಮರಾಜೇಂದ್ರನ ಸಭೆಯೊಳು ತರ್ಕಿಸುವ
> ರಾಮದೀಕ್ಷಿತನ ಭಂಜಿಸಿದ
> ಶ್ರೀಮದ್ವೀರಣಾರಾಧ್ಯ ತನುಜ ಗುಣ
> ಧಾಮ ಚೆನ್ನಾರ್ಯ

ಎಂಬ ಪದ್ಯದಲ್ಲಿ ಹೇಳುತ್ತಾನೆ. ಈ ದೊರೆ 1617ರಿಂದ 1637ರವರೆಗೆ ಆಳಿದ ಮೈಸೂರು ಚಾಮರಾಜನಾಗಿರಬೇಕು. ಆದುದರಿಂದ ಕವಿಯ ಕಾಲವು ಸುಮಾರು 1650 ಆಗಬಹುದು. ಕವಿ "ಆನಂದಾಗಮ ವೇದ ಶಂಕರ ಪುರಾಣಾರ್ಥಜ್ಞ ಸತ್ಶ್ಲೋಕವಿದಂ," ನಾನಾ ಕಾವ್ಯ ವಿಚಾರ ಪೂರಕವಿತಾರ್ಣಾಟಕಚಕ್ರೇಶ್ವರಂ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

**ಶಿವಗಣ ಚಾರಿತ್ರ :** ಇದು ಸಾಂಗತ್ಯದಲ್ಲಿ ರಚಿತವಾಗಿದೆ; 42 ಸಂಧಿ 2740 ಪದ್ಯಗಳಿವೆ. ಇದರಲ್ಲಿ ಶಿವಗಣ ಮಹಿಮೆ ವರ್ಣಿತವಾಗಿದೆ. ಈ ಬೃಹತ್ ಕೃತಿಯ ಪರಿಚಯ ಮದ್ರಾಸ್ G.O.M.L. Vol. IV. 1946 ಪುಟ (1128–31) ದಲ್ಲಿ ಪ್ರಕಟವಾಗಿದೆ.

**ಶಾರ್ದೂಲ ವೃತ್ತ**

> ಶ್ರೀ ಸದ್ಭಕ್ತ ಮನೋನಿವಾಸ ಶರಣಾನಂ xxxx ಯಂ ।
> ದೋಷಾರಣ್ಯಕೃಶಾನು ಕೋಮಲಶರೀರಂ ಕೋಟಿಸೂರ್ಯಪ್ರಭಂ ॥
> ಐಶ್ವರ್ಯಾಸ್ಪದ ಪನ್ನಗೇಂದ್ರ xxx ಚೇಷು ಭಸ್ಮಾಂಕಿತೋ
> ಲ್ಲಾಸಂ ಪ್ರೇಮದೊಳೆನ್ನನೊಲ್ದು ಸಲಿಹೈ ಶ್ರೀಶಾಂತವೀರೇಶ್ವರಾ ॥

ಕವಿಯ ಕೃತಿಯ ಅಧ್ಯಯನದಿಂದ ಶಾಂತವೀರದೇಶಿಕನ ಮಠದ ಕರ್ತೃ ಶ್ರೀ ಶಾಂತವೀರೇಶ್ವರನಾದ್ದರಿಂದ ತನ್ನ ಎಲ್ಲಾ ಕೃತಿಗಳ ಆದಿಯಲ್ಲಿ ಕವಿಾತನನ್ನು ಸ್ತೋತ್ರ ಮಾಡಿದ್ದಾನೆ. ಕವಿಯು ಷಣ್ಮುಖ, ಗಣೇಶ, ಭೃಂಗೀಶ್ವರ, ನಂದೀಶ್ವರ, ವೀರೇಶ, ತೋಂಟದ ಸಿದ್ಧಲಿಂಗ, ಹೋಳಿನ ಹಂಪೆಯಾಖ್ಯ, ಕಟ್ಟಿಗೆ ಸಂಗಯ್ಯ, ಕೊಟ್ಟೂರು ಬಸವೇಶನನ್ನು ಸ್ತೋತ್ರ ಮಾಡಿದ್ದಾನೆ. ತನ್ನ ತಾತ ಮತ್ತು ತಂದೆಯನ್ನು ತನ್ನ ತಂದೆ ಚಾಮರಾಜೇಂದ್ರನ ಸಭೆಯಲ್ಲಿ ರಾಮದೀಕ್ಷಿತನ ಭಂಗಿಸಿದ ವಿಷಯವನ್ನು ಪ್ರಸ್ತಾಪಿಸಿದ್ದಾನೆ.

ಓಂಕಾರಾತ್ಥವನೊಲಿದು ನಿರೂಪಿಸಿ ।
ಪಂಕಜೋದ್ಭವನ ತಿಳುಪಿದಾ ॥

ಶಂಕರಾರ್ಭಕ ಷಣ್ಮುಖನೀಕೃತಿಯನ ।
ಲಂಕಾರಗೆಯ್ದುನಡಸುಗೆ ॥

....................................

ಅರ್ಧೇಂದುಮೌಳಿಯ ಸಮರೂಪ ತೋಂಟದ ।
ಸಿದ್ಧಲಿಂಗಾರ್ಯಮಾಂ ಪಾಹಿ ॥

ಸೃಷ್ಟಿಯೊಳ್ ಜಂಗಮಾರ್ಚನೆಯಿಂದ ಮೆರೆದ ಬ ।
ಲ್ದಿಟ್ಟ ಹೋಳಿನ ಹಂಪೆವಾಖ್ಯ ॥

ಕಟ್ಟಿಗೆ ಸಂಗಯ್ಯ ಕೊಟ್ಟೂರ ಬಸವೇಶ ।
ನಿಷ್ಟಸಿದ್ಧಿಯ ನೀವುದೆಮಗೆ ॥

ಚಾಮರಾಜೇಂದ್ರನ ಸಭೆಯೊಳು ತರ್ಕಿಪ ।
ರಾಮದೀಕ್ಷಿತನ ಭಂಗಿಸಿದ ॥

ಶ್ರೀಮದ್ವೀರಣಾರಾಧ್ಯ ತನುಜ ಗುಣ ।
ಧಾಮ ಚೆನ್ನಾರ್ಯ ರಕ್ಷಿಪುದು ॥

ಕೃತಿಯ ಕಡೆಯಲ್ಲಿ –

**ಮತ್ತೇಭ** ॥

ಗುರುವಾರಾಧ್ಯ ಚರಿತ್ರ ಶ್ರೀ ಬಸವಪೌರಾಣಂ ಗಣಾಡಂಬರಂ ॥
ಹರಿದೇವೂ xxx ಭೈರವೇಶ್ವರ ಕಥಾಚಿಂತಾಮಣಿ ಪೂರ್ವಸ ॥
ತ್ವರಮಾರಾಧ್ಯ ಪ್ರಸಾದ ವಾಕ್ಯಮುಳಿದಾ ವೃದ್ಧಾನುಪತ್ತಿಕ್ರಮಾ ॥
ಚರಣಾ xxx ನೋಡಿ ಪೇಳ್ದೆನೊಲವಿಂದೀ ಭಕ್ತಸತ್ಕಾವ್ಯಮಂ ॥

**ಸಾಂಗತ್ಯ** ॥

ಶಿವಕವಿ ಶಾಂತವೀರಾಹ್ವಯ ಪೇಳಿದ ।
ಶಿವಗಣಚಾರಿತ್ರವನು ॥
ಭವಭರ್ಗವಣುಗರು ಕೇಳಿ ಸುಳಿಪುದು ।
ತ್ಸವದೊಳ್ ಚತ್ವಾರಿಂಶ ಸಂಧಿ ॥

'ಹಿಂದಣ ಕವಿಗಳ ಕೃತಿಯಿರಲು ಈ ಕೃತಿಯೇಕೆ?' ಎಂದು ತಾನಾಗಿ ಪ್ರಶ್ನೆಯನ್ನು ಹಾಕಿಕೊಂಡು "ಹಿಂದಣ ದೇವಾಲಯಗಳಿದ್ದರೂ ಹೊಸ ಹೊಸ ದೇವಾಲಯಗಳನ್ನು ಅಲ್ಲಲ್ಲಿ ಕಟ್ಟಿ ಶಿವಲಿಂಗ ಪ್ರತಿಷ್ಠೆಯನ್ನು ಮಾಡುವಂತೆ, ಹಿಂದಣ ಕಾವ್ಯಗಳಿದ್ದರೂ ನಾನು ಕಾವ್ಯವನ್ನು ಹೇಳುವೆನು' ಎಂದು ಕವಿಯು ಸಮಾಧಾನವನ್ನಿತ್ತಿದ್ದಾನೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕುರಿತು ಕವಿಯು

ಕನ್ನಡಿಯಂತೆ ಕಲ್ಪದ್ರುಮದಂತೆ ಬಾ
ವನ್ನದ ಪರಿಮಳದಂತೆ ॥
ಚೆನ್ನಾದುದೀ ಕಾವ್ಯವೆಂದು ರಸಿಕರಭಿ
ವರ್ಣಿಸುವರು ತಮತಮಗೆ ॥

ಒಡಲಾಸೆಗೋಸ್ಕರ ನಲಿಸಿ ಮಾನವರ ಬೆಂ ।
ಬಿಡದೆ ಬಣ್ಣಿಸಿ ಭವಾಂಬುಧಿಗೆ ॥
ಕೆಡೆದು ಕೆಟ್ಟವರಂತಲ್ಲತೀ ಕೃತಿ ।
ಮೃಡಶರಣರ ಚಾರಿತ್ರೆ ॥

ಎಂಬುದರಲ್ಲಿ ಶಿವಗಣಗಳನ್ನು ವರ್ಣಿಸಿ ತಾನು ಗ್ರಂಥವನ್ನು ಬರೆದವನಲ್ಲದೆ ಒಡಲಾಸೆಗೋಸ್ಕರ ಬರೆದ ಗ್ರಂಥವಲ್ಲವೆಂದಿರುವನು. ಇದರಿಂದ ಶಿವಭಕ್ತಿಯ ಪ್ರಸಾರವೇ ಈ ಗ್ರಂಥದ ಮುಖ್ಯೋದ್ದೇಶವಾಗಿದ್ದಂತೆ ಕಾಣುತ್ತದೆ.

**ಸೌಂದರೇಶ್ವರನ ಯಕ್ಷಗಾನ**

ಇದಕ್ಕೆ 'ಜನವಶ್ಯತಿಲಕ' ಎಂಬ ಹೆಸರೂ ಉಂಟು. ಸಂಧಿ 13, ಪದ 1610. ಇದರಲ್ಲಿ ಶಿವಭಕ್ತರಲ್ಲಿ ಒಬ್ಬನಾದ ಸೌಂದರೇಶ್ವರ ಅಥವಾ ನಂಬಿಯಣ್ಣ ಎಂಬುವನ ಕಥೆ ಹೇಳಿದೆ. ಕವಿಚರಿತೆಗಾರರಿಗೆ ನೋಡಲು ಸಿಕ್ಕ ಹಸ್ತಪ್ರತಿ, ಕಾಲಗರ್ಭದಲ್ಲಿ ಅಡಗಿದೆ. ಈ ಹಸ್ತಪ್ರತಿಯನ್ನು ಸಂಶೋಧನೆ ಮಾಡುವ ಜವಾಬ್ದಾರಿ ಯುವ ವಿದ್ವಾಂಸರದು.

ಮೈಸೂರಿನ ಪಿ.ಎಂ. ಗಿರಿರಾಜುರವರ ಸಂಗ್ರಹದಲ್ಲಿ ಈ ಕೃತಿ ಇದ್ದ ವಿಷಯವನ್ನು ಡಾ. ಎಸ್. ವಿದ್ಯಾಶಂಕರ 1985 'ನಂಬಿಯಣ್ಣ ಒಂದು ಅಧ್ಯಯನ" ಪ್ರಕಟಿತ ಪುಸ್ತಕ ಪುಟ 230ರಲ್ಲಿ ದಾಖಲಿಸಿದ್ದಾರೆ. ಶ್ರೀ ಪಿ.ಎಂ. ಗಿರಿರಾಜುರವರು ಸಂಗ್ರಹಿಸಿದ ಹಸ್ತಪ್ರತಿಗಳು ಚಿತ್ರದುರ್ಗ ಮಠದಲ್ಲಿ ಇವೆ.

**ಶಿವಮಹತ್ವಸಾರಶಿಖಾಮಣಿ ಸಂಗ್ರಹ ಶತಕ**

ಇದರಲ್ಲಿ ಶಾರ್ದೂಲವಿಕ್ರೀಡಿತ ವೃತ್ತಗಳು 100 ಇವೆ. ಒಂದೊಂದು ವೃತ್ತವು "ಶ್ರೀ ಶಾಂತವೀರೇಶ್ವರ" ಎಂದು ಮುಗಿಯುತ್ತದೆ. ಪ್ರತಿ ವೃತ್ತಕ್ಕೂ ವ್ಯಾಖ್ಯಾನರೂಪವಾಗಿ ಸಂಸ್ಕೃತ ಗ್ರಂಥಗಳಿಂದ ಶ್ಲೋಕಗಳು ಅನುವಾದ ಮಾಡಲ್ಪಟ್ಟಿವೆ. ಪ್ರಕರಣ 11, ವೃತ್ತ ಗ್ರಂಥ ಸಹ 640. ಗ್ರಂಥದ ಉದ್ದೇಶ ಶಿವಮಹತ್ವ ನಿರೂಪಣ. ವೀರಶೈವ ಅಪ್ರಕಟಿತ ಗ್ರಂಥಸೂಚಿ (1982) ಶ್ರೀ ಎಸ್. ಶಿವಣ್ಣನವರು ಕೆ.ಬಿ. 1154 ಹಸ್ತಪ್ರತಿ ಸಂಖ್ಯೆ ನೀಡಿದ್ದಾರೆ. ಕೃತಿ ಅಪ್ರಕಟಿತ.

ಸುರಭೂಜಾತಕೆ ಕಾಡ ಕಗ್ಗಲಿಯುಮಂ ಪಂಕೇಜಮಿತ್ರಂಗೆ ದುಃಖ
ಕರಖದ್ಯೋತಮಧರ್ಮಿಗಂ ಕೃಪಣನಜ್ಞಾನಂಗೆ ಸುಜ್ಞಾನಿಯಂ ॥
ನೆರೆ ಸಾದೃಶ್ಯಮ ಮಾಟಿsವೋಲ್ ಸುರಪಕಂಸಾರಾತಿದೇವಾದ್ಯರಂ ।
ಗಿರಿಜಾಕಾಂತಗೆ ಸಾಟಿಯೆಂಬರಧಮರ್ ಶ್ರೀಶಾಂತವೀರೇಶ್ವರಾ ॥
(ಗಿರಿಜಾದೇವಿಯ ಸಂಕೀರ್ತನ)

ಇದರಲ್ಲಿ ಪಾರ್ವತೀಸ್ತುತಿರೂಪದ 131 ಪದಗಳಿವೆ. ಕೊನೆಯಲ್ಲಿ ಈ ಗದ್ಯವಿದೆ.

ಇತಿ ಶ್ರೀಮದ್ಗುರು ಶಾಂತವೀರೇಶ ಪದಪಂಕಜಪರಾಗಸೇವಿತ ಶಿಳೀಮುಖತರಕವಿ ಗಜೇಂದ್ರ ಕಂಠೀರವ ಶಿವಕವಿಭೃತ್ಯ ಚೆನ್ನವೀರಾಖ್ಯ ತನೂಭವ ಶಾಂತವೀರದೇಶಿಕ ವಿರಚಿತಮತ್ವ ಗಿರಿಜಾದೇವಿಯ ಸಂಕೀರ್ತನಂ ಸಂಪೂರ್ಣಂ. ಈ ಕೃತಿಯ ಹಸ್ತಪ್ರತಿಯು ಕಾಲಗರ್ಭದಲ್ಲಿ ಅಡಗಿದೆ. ಮೂಲ ಕೃತಿಯನ್ನು ಸಂಶೋಧಿಸಬೇಕಾಗಿದೆ.

**ಶಿವಲಿಂಗ ಚಾರಿತ್ರ**

**ಶಾ॥**

ಶ್ರೀಮತ್ ಶಂಕರಕಾರಣಾತ್ಮಕ ಕವೀಶನಂದಕಾಮ್ಯಪ್ರದಂ
ಸೋಮಪ್ರೇಮ ಸಮಸ್ತ ದೇವಜನಕಂ ಶೈಲೇಂದ್ರಜಾವಲ್ಲಭಂ ।
ಆಮರ್ತ್ಯಾಧಿಪನಾತ್ಮಜಸ್ತುತಿಯುತಂ ಸದ್ವಂಶಮುಕ್ತಾಫಲಂ
ನೀ ಮಾಡೀ ಕೃತಿಗಿಷ್ಟ ಸಿದ್ಧಿಯ ನಿಜಂ ಶ್ರೀ ಶಾಂತವೀರೇಶ್ವರಾ ॥ 10 ॥

**ಮುಕ್ತಪದಗ್ರಸ್ತ**

ಹರಿವಂದ್ಯಕ್ರಮಕಾಮಸಂಹರಹರಂ ಹಾರೈಸದ್ಭಕ್ತ ಮಂ
ದಿರ ಮಂದಾರ ಗವೀಶವಾಸವಹಿತಂ ಹತ್ಯಂಧಹಸ್ತ್ಯಾ ಸುರಾ ।
ಸುರಜ್ಯೇಷ್ಠಾನನ ಖಂಡ ಖಂಡೆಯಧರಂ ದಾರಿದ್ರ್ಯತದ್ಧೀಕರಾ
ಕರಿಚರ್ಮಾಂಬರಭಾರ ಪಾಲಿಪುದು ನೀಂ ಶ್ರೀ ಶಾಂತವೀರೇಶ್ವರಾ ॥ 2 ॥

ಈ ಎರಡು ಪದ್ಯಗಳಲ್ಲಿ ಶಾಂತವೀರೇಶ್ವರನ ಸ್ತುತಿ ಇದೆ. ಪುತ್ರವರ್ಗ ಮಠದ ಕರ್ತೃ ಶಿವಲಿಂಗವನ್ನು ಶಾಂತವೀರೇಶ್ವರಾ ಎಂದು ಕರೆದಿದ್ದು ಆತನ ಸ್ತೋತ್ರ ಮಾಡಿದ್ದಾನೆ. ಕರ್ತೃ ಮೂರ್ತಿಗವಿಯಲ್ಲಿ ಇದ್ದು ಕವಿ ಸ್ಪಷ್ಟವಾಗಿ “ಗವೀಶವಾಸವಹಿತಂ” ಎಂದು ಹೇಳಿದ್ದಾನೆ. ಕ್ಷೇತ್ರಕಾರ್ಯದಲ್ಲಿ ಈ ವಿಷಯವನ್ನು ಸ್ಪಷ್ಟ ಮಾಡಬೇಕಾಗಿದೆ. ಕೃತಿಯ ಕಡೆಯಲ್ಲಿ (3–28) ಶಾಂತವೀರೇಶಲಿಂಗದ ಸ್ತೋತ್ರವಿದೆ.

॥ **ಕಂದ** ॥

ಸಂಧಿಸಮಾಸ ಮೃದುಪದ
ಬಂಧಾಲಂಕಾರ ಲಿಂಗನಿರ್ಣಯಮಂ ಬ ।
ಲ್ಲಿಂಧುದರ ಕವಿಗಳಿದರೊಳ
ಗಿಂದೇನೆಡರಿರಲು ತಿದ್ದುತೋದುಗೆ ಕೃಪೆಯೊಳ್ ॥ 4 ॥

ನಾನು ಬರೆದ ಕಾವ್ಯದಲ್ಲಿ ಸಂಧಿ ಸಮಾಸ ಮೃದುಪದ ಅಲಂಕಾರ ಲಿಂಗನಿರ್ಣಯ

ಗಳು ತಪ್ಪಾಗಿದ್ದರೆ ದಯಮಾಡಿ ತಿದ್ದಿ ಅಧ್ಯಯನ ಮಾಡಬೇಕು ಎಂದು ಕವಿ ವಿನಂತಿಸಿಕೊಂಡಿದ್ದಾನೆ.

॥ **ಮ** ॥

ವರವೀರೇಶ ಗಣೇಶ ಷಣ್ಮುಖ ಸದಾ ನಂದೀಶ ಭೃಂಗೀಶ ಸು
ಸ್ಥಿರ ಮಾಚಯ್ಯ ಮಹಾತ್ಮ ಶ್ರೀಬಸವರಾಜಂ ಭಕ್ತಿಸಂಪನ್ನ ಕಿ ।
ನ್ನರಬೊಮ್ಮಯ್ಯ ಶಿವೈಕ್ಯ ಚೆನ್ನಬಸವಂ ಮುಂತಾದರ ಕೀರ್ತಿಸು
ತ್ತಿರದಾಂ ಪೇಳುವೆನೀಪ್ರಬಂಧೂಮನಿದಂ ಸದ್ಭಕ್ತರಾಕರ್ಣಿಸಲ್ ॥ 5 ॥

ಕವಿ ವೀರಭದ್ರ ಗಣೇಶ, ಷಣ್ಮುಖ, ನಂದೀಶ, ಭೃಂಗೀಶ, ಮಾಚಯ್ಯ, ಮಹಾತ್ಮ ಶ್ರೀ ಬಸವರಾಜಂ, ಭಕ್ತಿಸಂಪನ್ನ ಕಿನ್ನರ ಬೊಮ್ಮಯ್ಯ, ಶಿವೈಕ್ಯ ಚೆನ್ನಬಸವರ ಸ್ತೋತ್ರ ಮಾಡಿದ್ದಾನೆ.

**ದೋಧಕ ವೃತ್ತ**

ರಾಘವ ಹಂಪೆಯ ಶ್ರೀಹರಿದೇವಂ
ಆ ಗುರು ಗುಬ್ಬಿಯ ಮಲ್ಲಮಹೇಶಂ
ಬೀಗುತ ಮಲ್ಹಣ ಮುಖ್ಯ ಕವೀಂದ್ರ
ರೀಗೆಮಗೀವುದು ಮಂಗಳಮತಿಯಂ ॥ 6 ॥

ರಾಘವಾಂಕ, ಹಂಪೆಯ ಹರಿಹರದೇವ, ಗುರು ಗುಬ್ಬಿಯ ಮಲ್ಲಣ್ಣ ಮಹೇಶಂ, (ಗುಬ್ಬಿಯ) ಮಲ್ಲಣಾರ್ಯರು, ನಮಗೆ ಮಂಗಳವನ್ನು ನೀಡಲಿ ಎಂದು ಕೋರಿದ್ದಾನೆ. ಇಲ್ಲಿ ಕವಿ ತಾತ ಗುಬ್ಬಿ ಮಲ್ಲಣ್ಣ ಮತ್ತು ಮೊಮ್ಮಗ ವೀರಶೈವಾಮೃತ ಪುರಾಣದ ಮಲ್ಲಣಾರ್ಯನನ್ನು ಉಲ್ಲೇಖಿಸಿದ್ದಾನೆ. ಮಹೇಶಂ ಎನ್ನುವ ಪದ ಮೊದಲ ಮಲ್ಲಣ್ಣನ ಗೌರವಸೂಚ್ಯವಾಗಿ ಉಲ್ಲೇಖಿಸಿರುವುದೆ ಗೊತ್ತಿಲ್ಲ.

**ಶಾ** ॥

ಆನಂದಾಗಮವೇದಶಂಕರ ಪುರಾಣಾರ್ಥಜ್ಞ ಸತ್ಕೋವಿದಂ
ನಾನಾಕಾವ್ಯ ವಿಚಾರ ಪೂರಕವಿತಾಕರ್ಣಾಟಚಕ್ರೇಶ್ವರಂ ।
ಗಾನಸ್ತ್ರೀಯಗಭೀರವಾರ್ಧಿಗುರುವಂಶೋದ್ಧಾರ ಚನ್ನಾರ್ಯಕಂ
ನಾನೀ ಕಾವ್ಯವನಳ್ತಿಯೊಂದೊರೆನೆ ಕೇಳ್ ನಿಮ್ಮಂಘ್ರಿಕಾರುಣ್ಯದೊಳ್ ॥ 7 ॥

ಈತನು ಆಗಮ, ವೇದ, ಶಂಕರ ಪುರಾಣ = ಶಿವಪುರಾಣವನ್ನು ಅರ್ಥೈಸುವ ಕೋವಿದ. ನಾನಾ ಕಾವ್ಯವನ್ನು ವಿಚಾರಪೂರ್ಣವಾಗಿ ಅಧ್ಯಯನ ಮಾಡಿದವನು. ಅಂದಿನ ದಿನಮಾನದಲ್ಲಿ ಕಾವ್ಯವನ್ನು ರಚಿಸುವಲ್ಲಿ “ಕವಿತಾಕರ್ಣಾಟ ಚಕ್ರೇಶ್ವರಂ” ಎಂಬ ಬಿರುದನ್ನು ಪಡೆದುಕೊಂಡಿದ್ದ. ಗಾನಪ್ರಿಯ, ಗಭೀರವಾರ್ಧಿ, ಗುರುವಂಶೋದ್ಧಾರ ಚನ್ನಾರ್ಯಕಂ. ಈ ಶಿವಲಿಂಗ ಚಾರಿತ್ರವನ್ನು ನಿಮ್ಮ ಪಾದಕಾರುಣ್ಯದಿಂದ ಹೇಳುವಂತಾಗಿದ್ದೇನೆ.

ಮ॥
ಕೃತಿನಾಮಂ ಶಿವಲಿಂಗದೇವರ ಮಹಾಸತ್ಪುಣ್ಯಚಾರಿತ್ರಮಿೂ
ಕೃತಿಕರ್ತಂ ಕುಜನಾಪಹಾರಮಹಿಮಾ ಶ್ರೀ ಶಾಂತವೀರೇಶನೀ
ಕೃತಿಯಾಕರ್ಣಿಸುತುತ್ಸವಂಬಡೆವರೊಲ್ದೀಶಾರ್ಚಕರ್ಮತ್ತಮಿೂ
ಕೃತಿಯಂ ಪೇಳಿದ ಶಾಂತವೀರಕವಿತಾಕರುಣ್ಯರತ್ನಾಕರಂ ॥ 10 ॥

ಕೃತಿನಾಮ "ಶಿವಲಿಂಗ ಚಾರಿತ್ರ", ಕೃತಿಕರ್ತೃ ಶಾಂತಿವೀರ ದೇಶಿಕ. ಕವಿ ತನ್ನನ್ನು "ಕವಿತಾ ಕಾರುಣ್ಯ ರತ್ನಾಕರ" ಎಂದು ಕರೆದುಕೊಂಡಿದ್ದಾನೆ.

ಶಾಂತವೀರದೇಶಿಕ ಎಂಬ ಕವಿ ತನ್ನ ಪಿತಾಮಹ "ಶಿವಲಿಂಗಾರ್ಯ", ಪುತ್ರ "ವೀರಣಾರ್ಯ" ಮತ್ತು ಆತನ ಪುತ್ರ "ಚನ್ನವೀರಾಚಾರ್ಯರ" ಚರಿತ್ರವನ್ನು ಇಲ್ಲಿ ಕಾವ್ಯರೂಪದಿಂದ ಸಂಗ್ರಹಿಸಿದ್ದಾನೆ. ಇದರಲ್ಲಿ ಮೂರು ಅಧ್ಯಾಯಗಳೂ 128 ಪದ್ಯಗಳೂ ಇವೆ. ಇದು ಚಂಪೂರೂಪದಲ್ಲಿದೆ. ಚನ್ನವೀರಾರ್ಯನಿಗೆ 'ಸರಸ ಕವಿ ಕರ್ನಾಟ ಚಕ್ರೇಶ್ವರ' ಎಂಬ ಬಿರುದಿದ್ದಂತೆ ತಿಳಿದುಬರುತ್ತದೆ.

ಲಿಂ. ಎಂ.ಜಿ. ನಂಜುಂಡಾರಾಧ್ಯರು ಪೀಠಿಕೆಯಲ್ಲಿ ಸ್ಥಳದ ಬಗ್ಗೆ ಈ ರೀತಿ ಹೇಳಿದ್ದಾರೆ. ಈತನ ಪಿತಾಮಹ ಶಿವಲಿಂಗಾರ್ಯನು ಪೆನುಗೊಂಡೆಯ ಪ್ರಾಂತಕ್ಕೆ ಸೇರಿದ ಅಪ್ಪೆಯಕೆರೆಯವನು ಎಂದು ಕವಿ ಹೇಳಿಕೊಂಡಿದ್ದಾನೆ. 'ಲಾಳ, ವರಾಟ, ಭೋಟ, ಘನ ಬರ್ಬರ, ಕರ್ಪರ, ಕಾಲಯುಕ್ತ, ಪಾಂಚಾಳ, ಕಳಿಂಗ, ವರಗೆ ಮುಂತಾದ "ಮಹಾಸಿರಿವೆತ್ತಿಹ ದೇಶವೆಲ್ಲರೊಳ್ ಮೇಲನೆ ಮೀರಿ ತೋರಿ ಪೆನುಗೊಂಡೆಯ ದೇಶದಲ್ಲಿ ಕಂಗೊಳಿಸುವ

ಕಂ॥

ಇಂತಿಹ ವನದೊತ್ತಿಲಿ ಭೂ
ಕಾಂತೆಯನೊಸಪಲಲ್ಲಿ ಯೆಸೆವ ಮುತ್ತಿನ ಬೊಟ್ಟಂ
ಬಂತೆ ಥಳಥಳಿಸಿ ಮೆರೆದೋ
ರಂತಪ್ಪಯಕೆರೆಯೆನಿಪ್ಪ ಪೊಳಲಿಹದೊಲವಿಂ (1–25)

ಎಂದು ಹೇಳಲಾಗಿದೆ. ಮೇಲಾಗಿ ಶಿವಲಿಂಗಾರ್ಯನು "ಪಂಡಿತಾನ್ವಯ ವಾರಾಕರ ಪೂರ್ಣಚಂದ್ರನೆಂದು" ಹೇಳಿಕೊಂಡಿರುವುದರಿಂದ ಈತನ ವಂಶಜರು ಪಂಡಿತಾರಾಧ್ಯ ಪಂಗಡದವರು ಹೇರಳವಾಗಿರುವ ಪೆನುಗೊಂಡೆಯ ಸುತ್ತಮುತ್ತ ಪ್ರಾಂತ್ಯಗಳ ಎಂದರೆ ಹೊಸಕೆರೆ (ಕೊತ್ತಚೆರ್ಪು), ಹಿಂದೂಪುರ, ನಿಡುಮಾಮಿಡಿ, ಗುಯಲೂರು, ಮಡಕಶಿರ, ಗೌರೀಬಿದನೂರು ಮುಂತಾದ ಕಡೆಗಳಲ್ಲಿ ಬಂಧುಗಳನ್ನು ಹೊಂದಿರುವ ಪಂಡಿತಾರಾಧ್ಯ ವರ್ಗಕ್ಕೆ ಸೇರಿದವನೆನ್ನಲು ಅಡ್ಡಿಯಿಲ್ಲ.

ಕವಿಚರಿತೆಕಾರರು ಕವಿಯ ಊರು ಕಣಿಯನೂರು ಎಂದು ತಿಳಿಸಿದ್ದಾರೆ. ಹಸ್ತಪ್ರತಿ ಪುಷ್ಪಿಕೆಯಲ್ಲಿ ಕವಿ ನೆಲೆಸಿದ ಗ್ರಾಮದ ಹೆಸರು ಇದ್ದುದರಿಂದ ಕವಿಚರಿತೆಕಾರರು ಕಣಿಯನೂರು ಎಂದು ಹೇಳಲು ಸಾಧ್ಯವಾಯಿತು ಎಂದು ತೋರುತ್ತದೆ. ಈ ಪುತ್ರವರ್ಗ ಮಠದ ಮೂಲಸ್ಥಾನ ಪೆನುಗೊಂಡ ಪ್ರಾಂತ್ಯದ "ಅಪ್ಪೆಯಕೆರೆ."

**ಕಂ ॥**

ಈ ಪರಿಯಪ್ಪೆಯ ಕೆರೆಯೆನಿ
ಪಾ ಪುರಸನ್ಮಧ್ಯದಲ್ಲಿಯ ಭವ ಶಾಸ್ತ್ರಕ – 1
ಲಾಪ ಕರಣಾದಿಶುದ್ಧ ದ ।
ಯಾಪರನೊಪ್ಪಿರ್ದನಮಮ ಶಿವಲಿಂಗಾರ್ಯಂ (1–2)

ಅಪ್ಪೆಯಕೆರೆಯ ಪುರಮಧ್ಯದಲ್ಲಿ ಅಭವಶಾಸ್ತ್ರಕಲಾಪನೂ ಕರಣಾದಿ ಶುದ್ಧನೂ ದಯಾಪರನೂ ಆದ ಶಿವಲಿಂಗಾರ್ಯ ಒಪ್ಪಿರ್ದನು.

**ಮ॥**

ದಯದಾಕ್ಷಿಣ್ಯ ವಿಚಾರಪಾವನಕರಂ ದಾತಾರಕರ್ಮಾಂಗನಾ
ಪ್ರಿಯ ವೇದಾಗಮ ಪುಣ್ಯಶಾಸ್ತ್ರನಿಪುಣಂ ಪೌರಾಣಸತ್ಪಾಠನಿ ।
ರ್ಣಯ ಲಿಂಗಾರ್ಚನಯುಕ್ತ ಭಕ್ತಿಭರಿತಂ ಭಕ್ತಾರ್ಚಿತಂ ಪಂಡಿತಾ
ನ್ವಯವಾರಾಕರ ಪೂರ್ಣಚಂದ್ರ ಶಿವಲಿಂಗಾಚಾರ್ಯ ರಾರಾಜಿಪಂ (1–28)

ಶಿವಲಿಂಗಾರ್ಯ, ದಯಾದಾಕ್ಷಿಣ್ಯರ, ಪಾವನಕರ, ದಾತಾರ, ಕರ್ಮಾಂಗನಾಪ್ರಿಯ, ವೇದಾಗಮಶಾಸ್ತ್ರ ನಿಪುಣ, ಪೌರಾಣ ಸತ್ಪಾಠ ನಿರ್ಣಯ, ಲಿಂಗಾರ್ಚನಾಯುಕ್ತ, ಭಕ್ತಿ ಭರಿತ, ಭಕ್ತಾರ್ಚಿತ ಪಂಡಿತಾರಾಧ್ಯವಾರಾಕರ ಪೂರ್ಣಚಂದ್ರನೆನಿಸಿ ರಾರಾಜಿಸುತ್ತಿದ್ದಾನೆ.

ಅಪ್ಪೆಯಕರೆಯ ಪುತ್ರವರ್ಗಮಠದಲ್ಲಿ ಶಿವಲಿಂಗಾರ್ಯ ಯಾವ ಕರ್ತವ್ಯ ಮಾಡುತ್ತಾ ಇದ್ದರು ಎಂಬುದಕ್ಕೆ ಕವಿ ಈ ರೀತಿ ಹೇಳಿದ್ದಾನೆ.

**ಮ॥**

ಶಿವದೀಕ್ಷಾವ್ರತಿ ಪುಣ್ಯಚಾರುಮಹಿಮಾಚಾತುರ್ಯ ಸಂಚಾರಣಂ
ಭವಭಾರಸಹ ಭಕ್ತ ಬಾಂಧವಸದಾಸನ್ಮಾರ್ಗವಂಗೀಕೃತಂ ।
ಅವಿಚಾರತ್ವವಿದೂರ ದುರ್ಗುಣ ದುರಾಶಾಪಾಶವಿಧ್ವಂಸನಂ
ವಿವಿಧಾಚಾರವಿಚಾರಪೂರಶಿವ ಲಿಂಗಾಚಾರ್ಯನಿಂತೊಪ್ಪಿದಂ (1–30)

ಶಿವದೀಕ್ಷಾವ್ರತಿ ಎಂದರೆ ಭಕ್ತಜನಕ್ಕೆ ಶಿವದೀಕ್ಷೆ ಅರ್ಥಾತ್ ಇಷ್ಟಲಿಂಗ ದೀಕ್ಷೆ ನೀಡುವುದನ್ನು ತಮ್ಮ ಪ್ರಮುಖ ಕಾಯಕವನ್ನಾಗಿ ಮಾಡಿಕೊಂಡಿದ್ದರು. ಶಿವಲಿಂಗಾರ್ಯ ಪುಣ್ಯಚಾರುಮಹಿಮ, ಸಂಚಾರಮೂರ್ತಿ, ಭವಭಾರವನ್ನು ದೂರ ಮಾಡುವವ, ಭಕ್ತಬಾಂಧವ್ಯವನ್ನು ಅಂಗೀಕರಿಸಿದ್ದಾನೆ. ದುರ್ಗುಣ ದುರಾಶಾಪಾಶ ವಿಧ್ವಂಸಕ, ವಿಚಾರ ಪೂರ್ಣನಾದ ಶಿವಲಿಂಗಾರ್ಯನು ಅಲ್ಲಿ ಒಪ್ಪಿದ್ದಾನೆ.

**ವಚನ ॥**

ಇಂತು ಶಿವಲಿಂಗಾಚಾರ್ಯನೊಪ್ಪುತ್ತಿರಲೊಂದಾನೊಂದು ದಿವಸದಲ್ಲಿ ಶಿಷ್ಯರುಗಳೈತಂದು ಶರಣಾರ್ಥಿಯೆಂದು ನಮಸ್ಕರಿಸಿ ನಮ್ಮೂರ್ಗೆ ಚಿತ್ತೈಸುವುದೆಂದು ಬಿನ್ನವಿಸಮಾಡಂ

ಒಂದು ದಿನ ಶಿಷ್ಯರು ಬಂದು ವಂದಿಸಿ ತಮ್ಮ ಊರಿಗೆ ಚಿತ್ತೈಸುವುದೆಂದು ಬಿನ್ನೈಸಿದರು.

**ಮ॥**

ಒಳಿತೆಂದಾ ನುಡಿಗೇಳ್ದು ತನ್ಮನದೊಳುತ್ಸಾಹಂಗಳಂ ತಾಳ್ದು ನಿ
ರ್ಮಳಲಿಂಗಾರ್ಚನೆಗೈದು ಸೇವಿಸಿ ಮಹಾಶೇಷಪ್ರಸಾದಂಗಳಂ ।
ಸಲೆ ಪೌರಾಣಮನೇಕ ಪುಸ್ತಕಗಳಂ ಶಿಷ್ಯಾದಿಗಳ್ಪೊತ್ತು ಹೆ
ಚ್ಚಳದಿಂದ್ಯೈತರಲೇಳ್ವನಾ ಗುರುವರಂ ಪೇಳ್ವಂತದಾಶ್ಚರ್ಯಮಂ (1–33)

ಬಿನ್ನಹಕ್ಕೆ ಒಪ್ಪಿ ಉತ್ಸಾಹವಂ ತಾಳ್ದು ಲಿಂಗಾರ್ಚನೆಗೈದು ಮಹಾಶೇಷಪ್ರಸಾದಂಗಳಂ ಸೇವಿಸಿ ಎಂದರೆ ಪ್ರತಿನಿತ್ಯ ಲಿಂಗಾರ್ಚನೆ ನಂತರ ಗುರುಪಾದೋದಕಪ್ರಸಾದಗಳನ್ನು ಸೇವನೆ ಮಾಡಿ ಆ ಸ್ಥಳದಲ್ಲಿ ಪ್ರಸಾದವನ್ನು ಸ್ವಲ್ಪವೂ ಉಳಿಸದೆ ಗಂಗಾಳವನ್ನು ಅಗ್ಘವಣಿಯಿಂದ ಪ್ರಕ್ಷಾಲನೆ ಮಾಡಿ ಸೇವಿಸುವ ಕ್ರಿಯೆಯನ್ನು ಕವಿ "ಮಹಾಶೇಷ ಪ್ರಸಾದಂಗಳಂ" ಎಂದು ಕರೆದಿದ್ದಾನೆ. ಪುರಾತನರ ಪುರಾಣಗಳೇ ಮೊದಲಾದ ಅನೇಕ ಪುಸ್ತಕಗಳನ್ನು ಶಿಷ್ಯರು ಹೊತ್ತು ನಡೆಯುತ್ತಿರಲು ಗುರು ಪ್ರಯಾಣ ಬೆಳೆಸುತ್ತಾನೆ.

**ಉ॥**

ತಂಬಟೆ ತಾಳ ಡೋಳು ದನಿಮಾಡುವ ಡಿಂಡಿಮ ಶಂಖಸಂರವಂ
ಕೊಂಬಿನ ನಾದ ಮೌರಿ ಕರೆದೊಪ್ಪುವ ಕಾಹಳೆ ಮದ್ದಳಾದಿಗಳ್ ।
ಸಂಭ್ರಮ ಸಾರೆ ಮೀರೆ ಮಿಗೆ ಬೊಬ್ಬಿಡುವಬ್ಬರ ವಾದ್ಯಘೋಷದೊಳ್
ಬೆಂಬಿಡದೆಲ್ಲ ಭಕ್ತರೊಲವಿಂ ನಡೆತಂದರದೇನ ವರ್ಣಿಪೆಂ (1–34)

ಈ ಮೇಲಿನ ಪದ್ಯದಲ್ಲಿ ಕವಿ ಅಂದಿನ ದಿನಮಾನದ ವಾದ್ಯಗಳ ಒಂದು ಪಟ್ಟಿಯನ್ನೇ ಕೊಟ್ಟಿದ್ದಾನೆ. ತಂಬಟೆ, ತಾಳ, ಡೊಳ್ಳು, ಧ್ವನಿ ಮಾಡುವ ಡಿಂಡಿಮ, ಶಂಖ, ಕೊಂಬು, ನಾದಮೌರಿ, ಕಹಳೆ, ಮದ್ದಳೆ ಮುಂತಾದ ವಾದ್ಯಸಂಭ್ರಮದಿಂದ ಗುರುಗಳನ್ನು ಎದುರುಗೊಂಡರು.

**ಕಂ॥**

ನಡೆಮುಡಿಯಾರತಿಗಳ್
ಕನ್ನಡಿ ಕಳಸಂಗಳನು ಪೊತು ಕಡುಜವ್ವನದಿ ।
ಟ್ಟಡೆ ಮೂಲೆಗಳೇಣನೇತ್ರೆಯ
ರೆಡೆವಿಡದ್ಯೆತರುತಲಿರ್ದರೇಂ ವರ್ಣಿಸುವೆಂ (1–36)

ಮಡಿಬಟ್ಟೆಯನ್ನು ಭೂಮಿ ಮೇಲೆ ಮಡಿವಾಳನು ಹಾಸುತ್ತಾ ಬರುತ್ತಾನೆ. ಅದರ ಮೇಲೆ ನಡೆಯುತ್ತಾ ಬರುವುದನ್ನು ಇಂದಿಗೂ ಗ್ರಾಮಾಂತರ ಪ್ರದೇಶದಲ್ಲಿ ಜಾತ್ರೆಗಳಲ್ಲಿ ಈ ಆಚರಣೆ ನೋಡಬಹುದು. ಭಕ್ತಜನ ಕಳಸ ಕನ್ನಡಿಗಳನ್ನು ಹಿಡಿದುಕೊಂಡು ಮುತ್ತೈದೆಯರು ಸಡಗರದಿಂದ ಸ್ವಾಗತಿಸಿದರು.

**ಕಂ||**

ಇಂತು ವಿಧುವದನೆಯರುಗಳ
ಸಂತಾನಂ ಸಹಿತಬಂದು ಭಕ್ತಾದಿಗಳೋ ।
ರಂತಿಟ್ಟುಭೂತಿ ವೀಳ್ಯವ
ಸಂತೋಷದೊಳಂಘ್ರಿಗೆರಗಿ ಸನ್ನತಿಗೆಯ್ದರ್ (1–38)

ಭಕ್ತಾದಿಗಳು ತಮ್ಮ ಪತ್ನಿ ಮಕ್ಕಳ ಸಮೇತ ಬಂದು ವಿಭೂತಿ–ವೀಳ್ಯವನ್ನು ಸಲ್ಲಿಸಿ ಗುರುವಿನ ಪಾದಕಮಲಗಳಿಗೆ ನಮಸ್ಕಾರ ಮಾಡುತ್ತಾ ಇದ್ದರು. ಇಲ್ಲಿ ವೀರಶೈವ ಧರ್ಮದ ವಿಶೇಷವನ್ನು ಗಮನಿಸಬಹುದು. ಬೇರೆ ಇನ್ನು ಯಾವ ಸಂಪ್ರದಾಯದಲ್ಲೂ 'ವಿಭೂತಿವೀಳ್ಯದ' ಪ್ರಸ್ತಾಪ ಬರುವುದಿಲ್ಲ. ಈಗಲೂ ವೀರಶೈವರ ಅಂತ್ಯಕ್ರಿಯೆಯಲ್ಲಿ ವಿಭೂತಿವೀಳ್ಯ ಪ್ರಕ್ರಿಯೆ ನಡೆಯುತ್ತಾ ಬಂದಿದೆ.

**ಶಾ||**

ಪೌರಾಣಾಗಮವೇದಶಾಸ್ತ್ರನಿಪುಣಂ ಪಾಪೌಘವಿಧ್ವಂಸನಂ
ಶ್ರೀರುದ್ರಾಕ್ಷವಿಭೂತಿಧಾರಣಶರೀರಂ ಸಾಮಗಾನಪ್ರಿಯಂ ।
ಆರಾಧ್ಯಾರ್ಣವ ಪೂರ್ಣಚಂದ್ರನುಪುರದ್ವೇಷಾಂಘ್ರಿ ಪೂಜಾಪರಂ
ಕಾರುಣ್ಯಕರಕಾಲದೂರ ಶಿವಲಿಂಗಾಚಾರ್ಯನೀಂ ಪಾಹಿ ಮಾಂ (1–39)

ಈ ಪದ್ಯದಲ್ಲಿ ಕವಿ ಶಿವಲಿಂಗಾಚಾರ್ಯನ ಗುಣವಿಶೇಷವನ್ನು ವರ್ಣಿಸಿದ್ದಾನೆ. ಪುರಾಣ, ಆಗಮ, ವೇದ, ಶಾಸ್ತ್ರದಲ್ಲಿ ಮಹಾನ್ ವಿದ್ವಾಂಸ. ಸದಾ ರುದ್ರಾಕ್ಷಿ ಮತ್ತು ವಿಭೂತಿಯನ್ನು ದೇಹದ ಮೇಲೆ ಧರಿಸುತ್ತಾ ಇದ್ದು ಸಾಮಗಾನಪ್ರಿಯನಾಗಿದ್ದ ಶಿವಲಿಂಗಾಚಾರ್ಯ "ಆರಾಧ್ಯಾರ್ಣವ ಪೂರ್ಣಚಂದ್ರ" "ಕಾರುಣ್ಯಕರಕಾಲದೂರ" ಎಂದು ವಿಶೇಷಣವನ್ನು ಬಳಸಿದ್ದಾನೆ.

**ವ||**

ಇಂತು ಶಿವಲಿಂಗಾಚಾರ್ಯವರ್ಯಂ ಒಯ್ಯನೇಳ್ತಂದು ಅಂದಣವಂ
ಮೆಲ್ಲನಿಳಿದು ಪಾದಪ್ರಕ್ಷಾಳನಂ ಗೆಯ್ದು ಪಾವುಗೆಯಂ
ಮೆಟ್ಟಿ ಮಂದಿರಕ್ಕೈ ತಂದು ಗದ್ದುಗೆಯೊಳ್ ಮೂರ್ತಗೊಂಡು ಶಿವಲಿಂಗಾರ್ಚನೆಯಿಂ
ನಿಮಿರ್ಚಿ ಶಿವಪ್ರಸಾದಮಂ ಸ್ವೀಕರಿಸಿ ತಾಂಬೂಲಮಂ ಸವಿದು ಕುಳ್ಳಿರ್ಪಾಗಳ್

ಶಿವಲಿಂಗಾಚಾರ್ಯ ಪಲ್ಲಕ್ಕಿಯನಿಳಿದು, ಭಕ್ತರು ಪಾದಪ್ರಕ್ಷಾಲನವನ್ನು ಮಾಡಿದ ನಂತರ, ಹಾವುಗೆಯನ್ನು ಮೆಟ್ಟಿ ಮಂದಿರಕ್ಕೆ ಕರೆತಂದು, ಗದ್ದುಗೆಯ ಮೇಲೆ ಮಹೂರ್ತ ಮಾಡಿ ಇಷ್ಟಲಿಂಗಪೂಜೆಯನ್ನು ಮುಗಿಸಿ ಪಾದೋದಕಪ್ರಸಾದವನ್ನು ಸ್ವೀಕರಿಸಿ ಶಿವಪ್ರಸಾದವನ್ನು ಅರ್ಥಾತ್ ಮಹಾಪ್ರಸಾದವನ್ನು ಸ್ವೀಕರಿಸಿ ತಾಂಬೂಲವನ್ನು ಸ್ವೀಕರಿಸಿ ಕುಳಿತಿದ್ದನು.

ಕಂ॥

ಈಗಲಿಂತಿವರ್ಗೆ ಪೌರಾ
ಣಾಗಮವಂ ಪೇಳ್ದು ಮುಕ್ತರೆನಿಸುವೆವಾವೆಂ
ದಾ ಗುರುವರ ಮನದೊಳಗು
ದ್ಯೋಗಿಸಲುತ್ಸಹಮವಾಂತರಾ ಶಿಷ್ಯರುಗಳ್ (1–42)

ಚಂ॥

ನುಡಿಸುತ ನಲ್ಮೆಯಿಂದ ಯುಗದಂಡಿಗೆಯಾಂತು ವಿನೋದ ಕೈಮಿಗಲ್
ಸಡಗರ ತಾಳಮೇಳ ಸಲೆ ಪೊಣ್ಮುತಿರಲ್ಕೆ ಸಮಸ್ತ ಕಾವ್ಯಮಂ ।
ಪಿಡಿಯಿಸುತೋರ್ವನಿಂದನೊಲಿದೋಡಿ ಮಹಾರ್ಥನ ಪೇಳೆ ಕೇಳಿದರ್
ಪಡಿ ನಿಮಗಿಲ್ಲವೆಂದು ಪೊಗಳುತ್ತಿರಲೆಲ್ಲ ಪುರಾಣದಾರ್ಯನಂ (1–43)

ಭಕ್ತಸಮೂಹಕ್ಕೆ ಪುರಾಣ, ಆಗಮವನ್ನು ಹೇಳಿ ಮುಕ್ತರೆನಿಸುವನೆಂದು ಗುರುವು ಸಂಕಲ್ಪಿಸಿದರು. ಶಿಷ್ಯರು ಉತ್ಸಾಹಗೊಂಡರು. ಎರಡು ದಂಡಿಗೆಗಳನ್ನು ನುಡಿಸುತ್ತಾ, ಸಡಗರದಿಂದ ತಾಳಮೇಳಗಳಿಂದ ಕಾವ್ಯವನ್ನು ಗಮಕಿಗಳಿಂದ ಓದಿಸಿ, ಅದರ ಅರ್ಥವನ್ನು ಭಕ್ತಾದಿಗಳಿಗೆ ಹೇಳಿದಾಗ ಭಕ್ತರು ಮತ್ತು ಶಿಷ್ಯರು ಅದನ್ನು ಕೇಳಿ ಆನಂದಪರವಶರಾಗಿ ನಿಮಗೆ ಸರಿಸಮಾನರಾಗಿ ಪುರಾಣವನ್ನು ಹೇಳುವ ಇನ್ನೊಬ್ಬರಿಲ್ಲ ಎಂದು ಪುರಾಣಾದಾರ್ಯವನ್ನು ಹೊಗಳುತ್ತಿದ್ದರು.

ಕಂ॥

ಶಿವಪುರಾಣಾಗಮನವನು
ತ್ಸವಮಿಗಲೋದುತ್ತ ಭಕ್ತಿ ಜ್ಞಾನಂ ವೈರಾ ।
ಗ್ಯವನು ಬೋಧಿಸುತ ಶಿಷ್ಯರ
ತವೆ ತಿಳಿಪುತ್ತಿರ್ದನಾ ಪುರಾಣಾರ್ಥಗಳಂ ॥ 1–44 ॥

ಭಕ್ತ ಜನರಿಗೆ ಶಿವಪುರಾಣ ಆಗಮವನ್ನು ಬೋಧಿಸುತ್ತಾ ಅವರಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಉಂಟಾಗುವಂತೆ ಪುರಾಣಾರ್ಥಗಳನ್ನು ಹೇಳುತ್ತಿದ್ದರು.

ಉ॥

ಈ ಪರಿ ಶಿಷ್ಯರಲ್ಲಿ ನಿಜಪೂಜೆಯನೆಲ್ಲಡೆ ಕೈಕೊಳುತ್ತತ
ಮ್ಮಾ ಪುರಿಗೈದಿ ಬಂದು ಬಹು ಸಂತಸಕೈಮಿಗೆ ವೀರಣಾರ್ಯನೆಂ
ಬಾ ಪರಿಣಾಮಿಯಪ್ರಪುಸುತಗಂ ಗುರುಪಟ್ಟವನೊಲ್ದು ಕಟ್ಟಿ ತಾ
ರಾಪತಿಜೂಟನೊರ್ಗೆ ನಡೆದೊಪ್ಪಿದನಂದು ಪುರಾಣದ್ವಾಹ್ವಯಂ ॥ 1–45 ॥

ಹೀಗೆ ಶಿಷ್ಯರಲ್ಲಿ ಪೂಜೆ ಕೈಗೊಳ್ಳುತ್ತ ತಮ್ಮ ಪುರಕ್ಕೆ ಹಿಂದಿರುಗಿ, ವೀರಣಾರ್ಯನೆಂಬ ಮಗನಿಗೆ ಗುರುಪಟ್ಟವ ಕಟ್ಟಿ ಶಿವಲಿಂಗಾರ್ಯನು ಲಿಂಗೈಕ್ಯನಾದನು. ಇನ್ನು ಮುಂದೆ ದ್ವಿತೀಯಾಧ್ಯಾಯ ಸೂಕ್ಷ್ಮವಾಗಿ ಕಥೆಯನ್ನು ಹೇಳಿ ಮುಖ್ಯವಾದ ಭಾಗವನ್ನು ಮಾತ್ರ ಚರ್ಚಿಸಲಾಗುವುದು. (ಮುಂದುವರಿಯುವುದು)

# ಸರ್ವಜ್ಞ ವಚನ ವ್ಯಾಖ್ಯಾನ

**ಪ್ರೊ. ಮೊರಬದ ಮಲ್ಲಿಕಾರ್ಜುನ**

**ಹೊಲಸು ಮಾಂಸದ ಹುತ್ತ ಎಲುವಿನ ಹಂಜರವು**
**ಹೊಲೆಭರಿತ ತನುವಿನೊಳಗಿರ್ದು ಮತ್ತವರ**
**ಕುಲವನೆಣಿಸುವರೆ ಸರ್ವಜ್ಞ**

ಮಾನವ ಬದುಕಿನ ಸಾಂಸ್ಕೃತಿಕ ಇತಿಹಾಸದಲ್ಲಿ ಕುಲ ಎಂಬುದು ಒಂದು ಕಪ್ಪು ಚುಕ್ಕೆಯಾಗಿ ಕಾಡಿದೆ. ಹುಟ್ಟನ್ನು ಕೇಂದ್ರವಾಗಿಟ್ಟುಕೊಂಡು ಈ ಸಮಾಜ ಕೆಲವರನ್ನು ಶ್ರೇಷ್ಠರು ಎಂದು ಗೌರವಿಸಿದೆ. ಮತ್ತೆ ಕೆಲವರನ್ನು ಕನಿಷ್ಠರೆಂದು ಹೀಯಾಳಿಸಿದೆ. ಒಂದು ನಿರ್ದಿಷ್ಟ ಸಮುದಾಯದ ವೃತ್ತಿ, ಆಚಾರ, ಆಹಾರ ಕ್ರಮಗಳಿಂದಾಗಿ ಅವರು ಮೇಲು, ಹಾಗಿಲ್ಲದವರು ಕೀಳು ಎಂದು ಪ್ರತಿಪಾದಿಸಲಾಗಿದೆ.

ಆದರೆ ಈ ವಿಷಯದಲ್ಲಿ ಸರ್ವಜ್ಞ ಪ್ರಜ್ಞಾವಂತ. ಯಾರನ್ನು ಯಾವ ಕಾರಣಕ್ಕಾಗಿ ನಾವು ಮೈಲಿಗೆ ಎನ್ನುತ್ತಿದ್ದೇವೆಯೋ ನಾವೂ ಹಾಗೆ ಇದ್ದೀವಲ್ಲಾ? ನಮ್ಮ ದೇಹ ಹುಳಿಯುವ ಕೊಳೆಯುವ ಮಾಂಸದ ಹುತ್ತವಾಗಿದೆ. ಎಲುವಿನ ಪಂಜರವಾಗಿದೆ. ಇಡೀ ದೇಹ ಕಶ್ಮಲದ ಗೂಡು. ಎಲ್ಲ ಮನುಷ್ಯರೂ ಹೀಗೆಯೇ ಇರುವಾಗ ಇನ್ನೊಬ್ಬರ ಕುಲವನ್ನು ನಾವು ಎಣಿಸಬೇಕೆ? ಎಂಬ ಮುಖ್ಯ ಪ್ರಶ್ನೆಯನ್ನು ಸರ್ವಜ್ಞ ಕೇಳಿದ್ದಾನೆ.

**ಎಲುವಿನ ಕಾಯಕೆ ಸಲೆ ಚರ್ಮವನು ಹೊದಿಸಿ**
**ಮಲಮೂತ್ರ ಕ್ರಿಮಿಯು ಒಳಗಿಪ್ಪ ದೇಹಕ್ಕೆ**
**ಕುಲವಾವುದಯ್ಯ ಸರ್ವಜ್ಞ**

ಕನ್ನಡಿಯ ಎದುರು ನಿಂತಾಗ ನಾವೆಲ್ಲ ಸುಂದರವಾಗಿ ಕಾಣುತ್ತೇವೆ. ಕಾರಣ, ಎಲುವಿನಿಂದ ನಿರ್ಮಿತವಾದ ಈ ದೇಹಕ್ಕೆ ಸುಂದರವಾದ ಹೊರಚರ್ಮದ ಆವರಣವಿದೆ. ಆದರೆ ಈ ಸೌಂದರ್ಯದ ಒಳ ಆವರಣದಲ್ಲಿ ನಾವು ತಿನ್ನುವ ಎಲ್ಲ ಮೃಷ್ಟಾನ್ನ ಮಲವಾಗಿಯೂ, ನಾವು ಕುಡಿಯುವ ಯಾವುದೇ ಪಾನೀಯ ಮೂತ್ರವಾಗಿಯೂ ರೂಪುಗೊಳ್ಳುತ್ತಿರುತ್ತದೆ. ನಮ್ಮ ಕಿಂಚಿತ್ ಅನಾರೋಗ್ಯವೂ ಅನಂತ ಕ್ರಿಮಿಗಳ ಸೃಷ್ಟಿಗೆ ಕಾರಣವಾಗುತ್ತಿರುತ್ತದೆ. ಇದಕ್ಕೆ ನಾವು ಯಾರೂ ಹೊರತಲ್ಲ, ಯಾರ ದೇಹವೂ ಹೊರತಲ್ಲ. ದೇಹಧರ್ಮಕ್ಕೆ ಯಾವುದೇ ಜಾತಿ ಮತ ಕುಲಗಳ ಹಂಗಿಲ್ಲ. ಇಂತಹ

ದೇಹ ಶ್ರೇಷ್ಠವೋ? ಕನಿಷ್ಠವೊ? ಎಲ್ಲರೂ ಇಂತಹ ದೇಹವನ್ನೇ ಹೊಂದಿರುವಾಗ ಯಾರು ಶ್ರೇಷ್ಠ? ಯಾರು ಕನಿಷ್ಠ?

**ಬೆಂದಾವಿಗೆಯ ಭಾಂಡ ಒಂದೊಂದು ಭೋಗವನು**
**ಅಂದಂದಿಗುಂಡು ಒಡೆದು ಹಂಚಾದಂತೆ**
**ಬಿಂದುವಿನ ದೇಹ ಸರ್ವಜ್ಞ**

ಸರ್ವಜ್ಞನು ಈ ದೇಹವನ್ನು ಮಡಕೆಗೆ ಹೋಲಿಸುತ್ತಾನೆ. ಕುಂಬಾರ ಮಣ್ಣಿನಿಂದ ಮಡಕೆಯನ್ನು ತಯಾರಿಸುತ್ತಾನೆ. ತಿಗುರಿಯ ಮೇಲಿಟ್ಟು ಅದಕ್ಕೊಂದು ಮಾಟವಾದ ರೂಪವನ್ನು ಕೊಡುತ್ತಾನೆ. ಬಾಳಿಕೆ ಬರಲಿ ಎನ್ನುವ ಕಾರಣಕ್ಕಾಗಿ ಆವುಗೆಯ ಬೇಗೆಯಲ್ಲಿ ಬೇಯಿಸುತ್ತಾನೆ. ಗಟ್ಟಿಗೊಂಡ ಆ ಭಾಂಡ ಎಂತಹ ಪದಾರ್ಥದ ಅಡುಗೆಗೂ ಸಿದ್ಧವಾಗುತ್ತದೆ. ಅನ್ನ, ಸಾರು, ಸಾಂಬಾರು, ಪಲ್ಯ; ಕೊನೆಗೆ ಪಾಯಸಕ್ಕೂ ಸೈ. ಮಡಿಕೆಯಲ್ಲಿ ಸಿದ್ಧವಾದ ಪ್ರತಿಯೊಂದು ಭೋಜ್ಯವನ್ನೂ ನಾವು ಸೊಗಸಾಗಿದೆ ಎಂದು ಸವಿಯುತ್ತೇವೆ. ಮಡಕೆಗೂ ತನ್ನ ಜನ್ಮ ಸಾರ್ಥಕ ಎನಿಸಬಹುದು. ಆದರೆ ದುಡಿದು ಸವೆದ ಆ ಮಡಕೆ ಒಂದು ದಿನ ಒಡೆದು ಹಂಚಾಗುತ್ತದೆ. ನವರಂಧ್ರಗಳಿಂದ ಕೂಡಿದ ಈ ದೇಹವೂ ಹಾಗೆಯೇ.

**ಬ್ರಹ್ಮನಿರ್ಮಿತನೆಂಬ ದುರ್ಮತಿ ನೀ ಕೇಳ**
**ಬೊಮ್ಮನ ಸತಿಗೆ ಮೂಗಿಲ್ಲ ಆ ಮೂಗ**
**ನಿರ್ಮಿಸನೇಕೆ ಸರ್ವಜ್ಞ**

ಈ ಪ್ರಪಂಚ ಹೇಗೆ ಸೃಷ್ಟಿಯಾಯಿತು – ಎನ್ನುವುದಕ್ಕೆ ಸಂಬಂಧಿಸಿದಂತೆ ಒಂದು ಪುರಾಣ ಕಲ್ಪನೆ ಇದೆ, ಇನ್ನೊಂದು ಪ್ರಾಕೃತಿಕ ಸತ್ಯವಿದೆ. ಪುರಾಣಕಲ್ಪನೆಯ ಪ್ರಕಾರ ಈ ವಿಶ್ವ ಬ್ರಹ್ಮನಿರ್ಮಿತ. ಆದರೆ ಸರ್ವಜ್ಞ ಇದನ್ನು ಅಲ್ಲಗಳೆಯುತ್ತಾನೆ. ಬ್ರಹ್ಮ ಸೃಷ್ಟಿಕರ್ತ ಎಂದಾದರೆ ತಾನೆ ಸೃಷ್ಟಿಸಿದ ಸರಸ್ವತಿಯನ್ನು ಆತ ಪತ್ನಿ ಎಂದು ಏಕೆ ಪರಿಗ್ರಹಿಸಿದ? ಮಾನವ ಸಂಬಂಧದ ದೃಷ್ಟಿಯಲ್ಲಿ ಸರಸ್ವತಿಯದು ಮರ್ಯಾದೆಗೇಡಿನ ಸ್ಥಿತಿ, ಸೃಷ್ಟಿಕರ್ತನೆನಿಸಿಕೊಳ್ಳುವ ಬ್ರಹ್ಮ ಸರಸ್ವತಿಯ ಮರ್ಯಾದೆ ಎನ್ನುವ ಮೂಗು ಮುಕ್ಕಾಗದಂತೆ ನೋಡಿಕೊಳ್ಳಬೇಕಿತ್ತಲ್ಲವೆ? ಸರ್ವಜ್ಞನ ಪ್ರಕಾರ ಈ ವಿಶ್ವಸೃಷ್ಟಿಗೆ ಪುರುಷ ಮತ್ತು ಪ್ರಕೃತಿ, ಆ ಅಂಶವನ್ನು ಒಳಗೊಂಡ ಶಿವ ಮತ್ತು ಶಕ್ತಿ, ಎರಡೂ ಒಂದಾದ ಪರಶಿವ ಕಾರಣ. ಇದು ಶರಣರೂ ಒಪ್ಪಿಕೊಂಡ ಪ್ರಾಕೃತಿಕ ಸತ್ಯ.

**ಹರನವನ ಕೊಲುವಂದು ಎರಳೆಯನೆಸೆವಂದು**
**ಮರಳಿ ವರಗಳನು ಕೊಡುವಂದು ಸ್ಮರಹರಗೆ**
**ಸರಿಯಹರ ಕಾಣೆ ಸರ್ವಜ್ಞ**

ಶರಣರಂತೆ ಸರ್ವಜ್ಞನೂ 'ದೇವನೊಬ್ಬ' ಎಂಬ ನಿಲುವಿಗೆ ಬದ್ಧನಾದವನು. ಅವನು ಈಶ್ವರತತ್ವ ಪ್ರತಿಪಾದಕ. ಅದನ್ನೇ ಪರಬ್ರಹ್ಮತತ್ವ ಎಂದೂ ಕರೆಯುತ್ತಾನೆ. ಸಾಮಾನ್ಯವಾಗಿ ಸರ್ವಜ್ಞ ಪುರಾಣಕಲ್ಪನೆಗಳನ್ನು ಅಲ್ಲಗಳೆದರೂ ಶಿವಪಾರಮ್ಯವನ್ನು ಎತ್ತಿಹಿಡಿಯುವಾಗ ಪೌರಾಣಿಕ ಶಿವನ ಲೀಲೆಗಳನ್ನು ನೆನಪಿಸಿಕೊಳ್ಳುತ್ತಾನೆ. ಮಾನವ ಗುಣಾವಗುಣಗಳು ಶಿವನಲ್ಲಿಯೂ ಇವೆ. ಆದರೆ ಅವೆಲ್ಲವೂ ಅವನ ಅಂತಃಕರಣದ ಪ್ರತಿರೂಪಗಳು. ಶಿವ ತನ್ನ ತಪೋಭಂಗ ಮಾಡಿದ ಕಾಮನನ್ನು ದಹಿಸುತ್ತಾನೆ, ಹಾಗೆಂದು ಅವನು ಕೋಪಿಷ್ಠನಲ್ಲ. ಬ್ರಹ್ಮಬಾಧಿತಳಾದ ಸರಸ್ವತಿಯನ್ನು ಜಿಂಕೆಯಾಗಿ ಧರಿಸಿ ಆಶ್ರಯ ನೀಡುತ್ತಾನೆ. ಸುಟ್ಟು ಭಸ್ಮನಾದ ಕಾಮನಿಗೆ ಮನಸಿಜನಾಗುವಂತೆ ಮರುಜನ್ಮ ನೀಡುತ್ತಾನೆ. ಹೀಗೆ ಶಿವ ಶಾಪಾನುಗ್ರಹ ಸಮರ್ಥ. ಅವನಿಗೆ ಬೇರೆ ದೈವಗಳು ಸಮನಲ್ಲ ಎಂಬ ನಿಲುವು ಸರ್ವಜ್ಞನದು.

**ಷಡುದರುಶನಾದಿಗಳು ಮೃಡ ಮಾಡಲಾದವು**
**ಹೊರವಡುತೆ ನಿಗಮವರಸುವುವು ಅಭವನ**
**ಗಡಣಕೆಣೆ ಯಾರು ಸರ್ವಜ್ಞ**

ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ ಮತ್ತು ವೇದಾಂತ ಎಂದು ಆರು ದರ್ಶನಗಳಿವೆ. ಇವು ಬದುಕಿನ ಮೂಲಭೂತ ತಿಳುವಳಿಕೆಗೆ ಸಂಬಂಧಿಸಿದ – ಕೃತಿಗಳು. ಜೀವರುಗಳಾದ ನಮ್ಮನ್ನು ಒಳಗೊಂಡ ಈ ಜಗತ್ತು ಮತ್ತು ಈ ಜಗತ್ತಿನ ಸೃಷ್ಟಿಗೆ ಕಾರಣನಾದ ಆ ಶಿವ ಇವುಗಳ ಬಗ್ಗೆ ಸೂಕ್ಷ್ಮವಾದ ಜಿಜ್ಞಾಸೆ ಇವುಗಳಲ್ಲಿದೆ. ಸರ್ವಜ್ಞನ ಪ್ರಕಾರ ಈ ಎಲ್ಲ ಜಿಜ್ಞಾಸೆಗೆ ಮೂಲ ಪರಶಿವನೇ, ಅವನೇ ಈ ಎಲ್ಲ ತಿಳುವಳಿಕೆಗಳ ಮೂಲ ಪುರುಷ ಮತ್ತು ಸೃಷ್ಟಿಕರ್ತ. ಎಲ್ಲ ದರ್ಶನಗಳ ಆತ್ಯಂತಿಕ ಶಕ್ತಿ ಶಿವ. ಆಗಮ ನಿಗಮಾದಿಗಳೆಲ್ಲವೂ ಅವನನ್ನು ಹುಡುಕುವ ಮತ್ತು ಪಡೆಯುವ ಹಂಬಲವನ್ನೇ ಹೊಂದಿವೆ. ಇಂತಹ ಶಿವನ ಪಾರಮ್ಯಕ್ಕೆ ಯಾರು ತಾನೆ ಸಮ ಎಂದು ಸರ್ವಜ್ಞ ಪ್ರಶ್ನಿಸಿದ್ದಾನೆ.

**ಪರುಷ ಕಬ್ಬುನದೆಸೆವ ಕರಡಿಗೆಯೊಳಡಗಿಹುದೆ**
**ಹರಭಕ್ತಿಯುಳ್ಳ ಮನುಜ ಸಂಸಾರದಲಿ**
**ಚಿರಕಾಲವಿಹ ಸರ್ವಜ್ಞ**

ಭಕ್ತಿ ಎನ್ನುವುದು ವ್ಯಕ್ತಿಯ ಅಂತಃಶಕ್ತಿಯನ್ನು ಉದ್ದೀಪಿಸುವ ಒಂದು ಅದ್ಭುತ ಶಕ್ತಿ. ಈ ಭಾವಕ್ಕೊಳಗಾದವರು ಎಲ್ಲ ದುರ್ಗುಣಗಳನ್ನು ಕಳೆದುಕೊಂಡು ಪರಿಶುದ್ಧ ರಾಗುತ್ತಾರೆ. ತಮ್ಮ ಸಂಸರ್ಗಕ್ಕೆ ಬಂದವರನ್ನೂ ಪಾವನರನ್ನಾಗಿ ಮಾಡುತ್ತಾರೆ. ಸರ್ವಜ್ಞ ಭಕ್ತನನ್ನು ಸ್ಪರ್ಶಮಣಿಗೆ ಹೋಲಿಸುತ್ತಾನೆ. ಸಂಸಾರವನ್ನು ಕಬ್ಬಿಣದ ಕರಡಿಗೆ ಎನ್ನುತ್ತಾನೆ. ಸ್ಪರ್ಶಮಣಿಯನ್ನು ಕಬ್ಬಿಣದ ಕರಡಿಗೆಯಲ್ಲಿ ಮುಚ್ಚಿಡುವ ಪ್ರಯತ್ನ ಮಾಡಿದರೆ ಏನಾದೀತು? ಕಬ್ಬಿಣವೆ ಚಿನ್ನವಾದೀತು.

ಭಕ್ತನಾಗುವುದು ಎಂದರೆ ಸಂಸಾರದ ಎಲ್ಲ ದಂದುಗವನ್ನು ಕಳೆದುಕೊಂಡು ಚೊಕ್ಕ ಚಿನ್ನವಾಗುವುದು. ಚಿನ್ನದ ವ್ಯಾಮೋಹವನ್ನೂ ಮೀರಿ ಸ್ಪರ್ಶಮಣಿಯಾಗುವುದು. ಮುಕ್ತಿಯ ಪರುಷವಾಗುವುದು.

**ವಂಶವನು ಪೊಗಲೀಶ ಕಾಂಕ್ಷಿಸನು ಪರಧನವ**
**ಸಂಶಯಗಳಿಲ್ಲ ನಿಜ ಸುಖಿ ಮಾಹೇಶ್ವರನು**
**ಹಿಂಸೆಗೊಡಂಬಡನು ಸರ್ವಜ್ಞ**

ಸರ್ವಜ್ಞ ಶರಣರ ಷಟ್ಸ್ಥಲಸಿದ್ಧಾಂತದ ನಿಷ್ಠಾವಂತ ಅನುಯಾಯಿ, ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವು ಶರಣರ ಪ್ರಕಾರ ಒಬ್ಬ ಸಾಧಕನ ಸಾಧನೆಯ ಆರು ಹಂತಗಳು, ಸಾಧಕನಾದವನು ಶ್ರದ್ಧಾಭಕ್ತಿಯ ಮೂಲಕ ಸಾಧನೆಯ ಪ್ರಪಂಚವನ್ನು ಪ್ರವೇಶಿಸುತ್ತಾನೆ. ನಂತರದ್ದು ನಿಷ್ಠಾಭಕ್ತಿಯ ಮಾಹೇಶ್ವರ ಪ್ರಜ್ಞೆ. ಬಸವಣ್ಣನವರ 'ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ' ಮಾತು ಮಾಹೇಶ್ವರಸ್ಥಲದ ವ್ಯಾಖ್ಯೆ ಎಂಬಂತಿದೆ. ಆದ್ದರಿಂದಲೇ ಸರ್ವಜ್ಞ ಶಿವಾಂಶವನ್ನು ಒಳಗೊಂಡು ಜನ್ಮತಾಳಿದ ವ್ಯಕ್ತಿ ಪರಧನದ ಆಮಿಷಕ್ಕೆ ಒಳಗಾಗುವುದಿಲ್ಲ. ಈ ಬಗ್ಗೆ ಸಂಶಯ ಬೇಡ. ಅವನೇ ನಿಜಸುಖಿಯಾದ ಮಾಹೇಶ್ವರ ಎನ್ನುತ್ತಾನೆ. ಜೊತೆಗೆ ಮಾಹೇಶ್ವರನ ನಿಷ್ಠೆ ಸಾತ್ವಿಕ ಛಲವೇ ಹೊರತು ಹಿಂಸಾರಭಸಮತಿಯಲ್ಲ ಎನ್ನುವ ಸೂಕ್ಷ್ಮ ಎಚ್ಚರವನ್ನೂ ಕೊಡುತ್ತಾನೆ.

**ಭೋಗಿಸುವ ವಸ್ತುಗಳ ಭೋಗಿಪರು ಶಿವಗಿತ್ತು**
**ರಾಗದಿಂ ಸತ್ಯವೆರಸಿಹ ಪ್ರಸಾದಿಯ**
**ಶ್ರೀಗುರುವೆಂಬ ಸರ್ವಜ್ಞ**

ಶರಣರು ತಾವು ಉಪಭೋಗಿಸುವ ಪ್ರತಿಯೊಂದು ವಸ್ತುವನ್ನು ಮೊದಲು ಶಿವನಿಗೆ ಸಮರ್ಪಿಸಿ ಬಳಿಕ ತಾವು ಸ್ವೀಕರಿಸುವರು. "ಬಿಸಿಲಲ್ಲಿ ನಿಂತರೆ ಬಿಸಿಲ ಲಿಂಗಾರ್ಪಿತವ ಮಾಡಬೇಕು, ನೆರಳಲ್ಲಿ ನಿಂತರೆ ನೆರಳ ಲಿಂಗಾರ್ಪಿತವ ಮಾಡಬೇಕು' ಎಂಬುದು ಶರಣರ ಖಚಿತವಾದ ನಿಲುವು. ಜೇಡರ ದಾಸಿಮಯ್ಯ ತಮ್ಮ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ : 'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುತ್ತಿ ಸುಳಿದು ಬೀಸುವ ಗಾಳಿ ನಿಮ್ಮ ದಾನ....... ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ, ಸುತ್ತುವರೆದಿರುವ ಸಾಗರ ನಿಮ್ಮ ದಾನ.....' ನಾವು ಪಡೆದ ಎಲ್ಲವೂ ಆ ದೇವನ ದಾನ, ಅವನದೆ ಪ್ರಸಾದ. ಅವನು ಕೊಟ್ಟ ಪ್ರಸಾದವನ್ನು ಸೇವಿಸುವಾಗ 'ಶಿವನೆ ಇದು ನಿನ್ನ ಅನುಗ್ರಹ, ನೀನು ಮೊದಲು ಸ್ವೀಕರಿಸಪ್ಪ' ಎನ್ನುವ ಕೃತಜ್ಞತೆ ಬೇಕಲ್ಲವೆ? ಪ್ರೀತಿಯಿಂದ ಕೃತಜ್ಞತೆ ವ್ಯಕ್ತಪಡಿಸುವ ಪ್ರಸಾದಿಯೇ ನಿಜವಾದ ಶ್ರೀಗುರುವೆಂದು ಸರ್ವಜ್ಞ ಹೇಳುತ್ತಾನೆ.

**ಅರಿವನರಿದೊಡೆ ಜೀವ ನೆರೆ ಸದಾಶಿವನಕ್ಕು**
**ಅರಿವಿನ ತೆರನನರಿಯದೊಡೆ ಹರಿ ಬೊಮ್ಮ**
**ರಿರವಿನಂತಕ್ಕು ಸರ್ವಜ್ಞ**

'ಅರಿವೇ ಗುರು', 'ತನ್ನರಿವೇ ತನಗೆ ಗುರು', 'ಅರಿತೊಡೆ ಶರಣ, ಮರೆತೊಡೆ 'ಮಾನವ' ಮುಂತಾದ ಮಾತುಗಳಿವೆ. ಈ ಎಲ್ಲ ಮಾತುಗಳು ಶರಣರು 'ಅರಿವು' ಎನ್ನುವ ಪರಿಕಲ್ಪನೆಗೆ ಎಂತಹ ಹಿರಿದಾದ ಸ್ಥಾನವನ್ನು ಕೊಟ್ಟಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅರಿವು ಎಂದರೆ ವಿವೇಕ, ಇಂದ್ರಿಯಗೋಚರ ವಸ್ತುವಿನ ಜ್ಞಾನ ಮತ್ತು ಪರಶಿವ ಎಂಬ ಹಲವಾರು ಅರ್ಥಗಳಿವೆ. ಸಾಧಕನಾದವನು ಇದರ ಸೂಕ್ಷ್ಮ ತಿಳುವಳಿಕೆ ಪಡೆದದ್ದೇ ಆದರೆ ಆತ ಸಾಕ್ಷಾತ್ ಸದಾಶಿವನೇ ಆಗುತ್ತಾನೆ. ಅರಿವಿನ ನಿಜವಾದ ಪರಿಜ್ಞಾನವನ್ನು ಪಡೆಯದೆ ಹೋದರೆ ಜ್ಯೋತಿರ್ಲಿಂಗಸ್ವರೂಪಿಯಾದ ಶಿವನ ಆದಿ ಅಂತ್ಯಗಳನ್ನು ಗುರುತಿಸಲು ಹೋಗಿ ಸೋತ ವಿಷ್ಣು ಮತ್ತು ಬ್ರಹ್ಮರಿಗೊದಗಿದ ಗತಿಯೇ ನಮ್ಮದೂ ಆಗುತ್ತದೆ ಎಂದು ಸರ್ವಜ್ಞ ಎಚ್ಚರಿಸಿದ್ದಾನೆ.

(ಮುಂದುವರಿಯುವುದು)

**ಶೀಲ ಶೀಲವೆಂಬಿರಯ್ಯಾ**
**ಶೀಲದ ನೆಲೆಯ ಬಲ್ಲಡೆ ಹೇಳಿರೋ ಅರಿಯದಿದ್ದಡೆ ಕೇಳಿರೊ !**
**ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ,**
**ಲೋಭ ಮೂರನೆಯ ಭವಿ, ಮೋಹ ನಾಲ್ಕನೆ ಭವಿ**
**ಮದ ಐದನೆಯ ಭವಿ, ಮತ್ಸರ ಆರನೆಯ ಭವಿ**
**ಆಮಿಷ ಏಳನೆಯ ಭವಿ**
**ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು**
**ಲಿಂಗವಿಲ್ಲದವರ ಭವಿ ಭವಿ ಎಂಬಿರಿ.**
**ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ**
**ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿಗಳೆಂದು**
**ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ**
**ಹಗಲುಗಳ್ಳರ ಮೆಚ್ಚುವನೆ ಚನ್ನಮಲ್ಲಿಕಾರ್ಜುನ?**

**– ಅಕ್ಕಮಹಾದೇವಿ**

## ಗ್ರಂಥ ಪರಾಮರ್ಶೆ

# ಪುರುಷೋತ್ತಮಾಯಣ

ಪುರುಷೋತ್ತಮಾಯಣ (ಎರಡು ಸಂಪುಟಗಳು) ಕೃತಿಯನ್ನು ಶ್ರೀ ಪುರುಷೋತ್ತಮ ದಾಸ್ ಹೆಗ್ಗಡೆಯವರು ರಚಿಸಿದ್ದಾರೆ.

ವಾಲ್ಮೀಕಿ ಮಹರ್ಷಿಗಳು ರಚಿಸಿರುವ ರಾಮಾಯಣ ಭಾರತೀಯರ ಪೂಜ್ಯ ಗ್ರಂಥಗಳಲ್ಲಿ ಒಂದೆನಿಸಿದೆ. ಬಹಳಷ್ಟು ಕುಟುಂಬಗಳಲ್ಲಿ ಇಂದಿಗೂ ಇದನ್ನು ಪಾರಾಯಣ ಮಾಡುವ ಪದ್ಧತಿ ಇದೆ. "ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎಂದು ಕುಮಾರವ್ಯಾಸ ಹೇಳುವ ಮಟ್ಟಿಗೆ ರಾಮಾಯಣದ ಕುರಿತು ವಿಪುಲವಾಗಿ ಗ್ರಂಥರಚನೆ ಆಗಿದೆ, ಆಗುತ್ತಿದೆ. ಮಳೆ ಬರದೆ ಹೋದರೆ ಇಂದಿಗೂ ಗ್ರಾಮಗಳಲ್ಲಿ ಸುಂದರಕಾಂಡವನ್ನು ಓದಿಸುವ ಪದ್ಧತಿ ಇದೆ.

ರಾಮಾಯಣದ ಎಲ್ಲ ಪ್ರಸಂಗಗಳನ್ನೂ ಇಲ್ಲಿ ವೈಜ್ಞಾನಿಕ ಚಿಂತನೆ ಪ್ರಶ್ನಿಸುತ್ತದೆ, ಉತ್ತರಗಳನ್ನು ಹುಡುಕುವ ಪ್ರಯತ್ನ ಮಾಡುತ್ತದೆ. ಪ್ರಶ್ನೆಗಳನ್ನು ಕೇಳುತ್ತ ಹೋದ ಹಾಗೆ ಕೃತಿಯಲ್ಲಿ ಜ್ಞಾನದಿಗಂತ ವಿಸ್ತಾರವಾಗುತ್ತದೆ.

# ಸುಪಾರಿ

'ಸುಪಾರಿ' ಕಾದಂಬರಿಯನ್ನು ಡಾ. ಕುಂವೀಯರು ರಚಿಸಿದ್ದಾರೆ. 'ಸುಪಾರಿ' ಕಾದಂಬರಿಯ ನಿರೂಪಕ ಸುಪಾರಿ ಹಂತಕನೊಬ್ಬನ ಬಗ್ಗೆ ಕಾದಂಬರಿ ಬರೆಯಲು ಮುಂಗಡ ಪಡೆದದ್ದೂ ಒಂದು ಬಗೆಯ 'ಸುಪಾರಿ'ಯೇ. ಕೊನೆಯಲ್ಲಿ ನಿರೂಪಕ ಯಾರನ್ನು ಸಂದರ್ಶಿಸಿ ಕಾದಂಬರಿ ಬರೆಯಲು ಹೊರಟಿದ್ದಾನೋ ಆ ಸುಪಾರಿಯ 'ಸುಪಾರಿ'ಗೆ ಅವನ ತಂದೆ ಬಲಿಯಾದ ದುರಂತವನ್ನು ಮನಗಾಣುತ್ತಾನೆ. ಈ ಹಿನ್ನೆಲೆಯಲ್ಲಿ ಕಾದಂಬರಿ ನಿಗೂಢಲೋಕದ ಸೂಕ್ಷ್ಮಗಳನ್ನು ಅನಾವರಣಗೊಳಿಸುತ್ತದೆ. ಮಾನವೀಯತೆ ಮರೆಯಾದಾಗ ಬದುಕು ಹೇಗೆ ಪ್ರಕ್ಷುಬ್ಧಗೊಳ್ಳುತ್ತದೆ ಎಂಬ ಅಂಶವನ್ನು ಕೃತಿಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಪರಮಪೂಜ್ಯ ಜಗದ್ಗುರುಗಳು ಹಾಗೂ ಮಾರಿಷಸ್‌ನ ಅಧ್ಯಕ್ಷರ ಭೇಟಿ**

ಪರಮಪೂಜ್ಯ ಜಗದ್ಗುರುಗಳವರು ಮಾರಿಷಸ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮೇ 2ರಂದು ಮಾರಿಷಸ್‌ನ ಅಧ್ಯಕ್ಷರಾದ ಘನತೆವೆತ್ತ ಶ್ರೀ ಪೃಥ್ವಿರಾಜ್‌ಸಿಂಗ್ ರೂಪನ್‌ರವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಪೂಜ್ಯರನ್ನು ಹಾರ್ದಿಕವಾಗಿ ಸ್ವಾಗತಿಸಿದ ಮಾನ್ಯ ಅಧ್ಯಕ್ಷರು ಅನೇಕ ವಿಚಾರಗಳ ಬಗ್ಗೆ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಭಾರತ ಹಾಗೂ ಮಾರಿಷಸ್ ನಡುವಿನ ಸಂಬಂಧದ ಬಗ್ಗೆ ಅತೀವ ಸಂತೋಷ ವ್ಯಕ್ತಪಡಿಸಿದರು. ಸ್ವಾತಂತ್ರ್ಯಾನಂತರ ಮಾರಿಷಸ್‌ಗೆ ಭಾರತದಿಂದ ದೊರೆಯುತ್ತಿರುವ ಎಲ್ಲಾ ರೀತಿಯ ಸಹಕಾರಗಳನ್ನು ಕೃತಜ್ಞತೆಯಿಂದ ನೆನಪಿಸಿಕೊಂಡರು. ಮಾರಿಷಸ್‌ನಲ್ಲಿ ಜೆಎಸ್‌ಎಸ್ ಅಕ್ಯಾಡೆಮಿ ಸಲ್ಲಿಸುತ್ತಿರುವ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇತ್ತೀಚೆಗೆ ತಾಂತ್ರಿಕ ಹಾಗೂ ವೈದ್ಯಕೀಯ ಮೊದಲಾದ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ದೊರೆಯುತ್ತಿದ್ದು, ಮೂಲ ವಿಜ್ಞಾನ ಹಾಗೂ ಗಣಿತಶಾಸ್ತ್ರಗಳ ಕಡೆಗೂ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ಒತ್ತಿ ಹೇಳಿದರು. ಜೊತೆಗೆ ವ್ಯಕ್ತಿತ್ವವಿಕಸನಕ್ಕೆ ಅನುಕೂಲವಾಗುವಂತಹ ಲಲಿತಕಲೆಗಳಲ್ಲೂ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು ಅಗತ್ಯವಿದೆ ಎಂದು ತಿಳಿಸಿದರು. ಭಾರತದಲ್ಲಿರುವ ಜೆಎಸ್‌ಎಸ್ ಸಂಸ್ಥೆಗಳಿಗೆ ಭೇಟಿ ನೀಡಲು ಇದೇ ಸಂದರ್ಭದಲ್ಲಿ ಅಧ್ಯಕ್ಷರಿಗೆ ಆಹ್ವಾನ ನೀಡಲಾಯಿತು. ಪೂಜ್ಯ ಶ್ರೀಗಳವರೊಂದಿಗೆ ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಪುಟ್ಟಸುಬ್ಬಪ್ಪ ಹಾಗೂ ಡಾ. ಪ್ರವೀಣ್ ಮೊಹದೇಬ್‌ರವರುಗಳು ಜೊತೆಗಿದ್ದರು.

**ಮಾರಿಷಸ್ ಜೆಎಸ್‌ಎಸ್ ಅಕ್ಯಾಡೆಮಿಗೆ ಉಪ ಪ್ರಧಾನಿಗಳ ಭೇಟಿ**

ಮಾರಿಷಸ್‌ನಲ್ಲಿರುವ ಜೆಎಸ್‌ಎಸ್ ಅಕ್ಯಾಡೆಮಿಗೆ ಮೇ 2ರಂದು ಮಾರಿಷಸ್‌ನ ಉಪ ಪ್ರಧಾನಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಾದ ಶ್ರೀಮತಿ ಲೀಲಾದೇವಿ ದೂಖುನ್ ಲುಚೂಮುನ್‌ರವರು ಭೇಟಿ ನೀಡಿ, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದರ್ಶನಾಶೀರ್ವಾದ ಪಡೆದು, ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಅಕ್ಯಾಡೆಮಿ ವತಿಯಿಂದ ಫಾರ್ಮಸಿ ಕಾಲೇಜು, ಎಂಬಿಎ ಮತ್ತು ಜೀವ ವಿಜ್ಞಾನಗಳಿಗೆ ಸಂಬಂಧಪಟ್ಟ ಕೋರ್ಸ್‌ಗಳನ್ನು ನಡೆಸಲಾಗುತ್ತಿರುವುದನ್ನು

ವೀಕ್ಷಿಸಿದರು. ಫಾರ್ಮಸಿ ಕಾಲೇಜು ಅತ್ಯುತ್ತಮ ಸೌಲಭ್ಯಗಳನ್ನು ಹೊಂದಿರುವುದರಿಂದ, ಔಷಧಿಗಳ ಪರೀಕ್ಷೆ ಪ್ರಯೋಗಾಲಯಗಳು ಹಾಗೂ ಇತರೆ ಅಧ್ಯಯನ ವಿಷಯಗಳನ್ನು ಪ್ರಾರಂಭಿಸುವ ಬಗ್ಗೆ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಅದಕ್ಕೆ ಸರ್ಕಾರದಿಂದ ಅಗತ್ಯವಿರುವ ಎಲ್ಲ ರೀತಿಯ ಸಹಾಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಪುಟ್ಟಸುಬ್ಬಪ್ಪ, ಡಾ. ಪ್ರವೀಣ್ ಮೊಹದೇಬ್, ಶ್ರೀ ಕೆ.ಪಿ. ನವೀನ್, ಶ್ರೀ ಆಶಿಶ್ ಡಿ. ವಾಧ್ವಾನಿ, ಡಾ. ಜಯಶ್ರೀ ವೈಜನಾಥಪ್ಪ, ಡಾ. ಗೌತಮ್ ಯರ್ರಕುಲರವರು ಉಪಸ್ಥಿತರಿದ್ದರು.

**ತರ್ಕದ ಜಗತ್ತನ್ನು ಬಿಟ್ಟು ನಂಬಿಕೆಯ ಜಗತ್ತಿನಲ್ಲಿ ಬಾಳಬೇಕು**

ತರ್ಕದ ಜಗತ್ತನ್ನು ಬಿಟ್ಟು ನಂಬಿಕೆಯ ಜಗತ್ತಿನಲ್ಲಿ ಬಾಳಬೇಕು ಎಂದು ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕರಾದ ಶ್ರೀ ನಾರಾಯಣಮೂರ್ತಿಯವರು ಶ್ರೀ ಸುತ್ತೂರು ಕ್ಷೇತ್ರಕ್ಕೆ ಮೇ 24 ರಂದು ಭೇಟಿ ನೀಡಿದ್ದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಕನ್ನಡ ಮತ್ತು ಆಂಗ್ಲ ಭಾಷಾ ಶಿಕ್ಷಕರು ಹಾಗೂ ವಿಶ್ವ ಹಿಂದೂ ಪರಿಷತ್‌ನಿಂದ ಏರ್ಪಡಿಸಲಾಗಿದ್ದ ಶಿಬಿರದ ಕಾರ್ಯಾಗಾರದಲ್ಲಿ ಮಾತನಾಡುತ್ತಾ ತಿಳಿಸಿದರು. ಗುರುಗಳ ಆಶೀರ್ವಾದದಿಂದ ಧೈರ್ಯ, ವಿಶ್ವಾಸ ಮತ್ತು ಶಾಂತಿಯನ್ನು ಪಡೆಯಲು ಸಾಧ್ಯ. ಶಿಕ್ಷಕರು ಮಕ್ಕಳಿಗೆ ಪ್ರೀತಿ, ವಿಶ್ವಾಸ, ಶ್ರದ್ಧೆಯಿಂದ ಬೋಧನೆ ಮಾಡಿದರೆ, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯೊಂದಿಗೆ ದೇಶದ ಅಭಿವೃದ್ಧಿಯೂ ಆಗುತ್ತದೆ ಎಂದು ಹೇಳಿದರು.

ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಸುಧಾ ಮೂರ್ತಿಯವರು ಜೀವನದಲ್ಲಿ ಏನು ಮಾಡಬೇಕು ಎನ್ನುವುದರ ಬದಲು, ಹೇಗೆ ಮಾಡಬೇಕು ಎಂಬುದನ್ನು ಅರಿತಿರಬೇಕು. ದೇಶದ ಪ್ರಗತಿ ಮಾತು, ಶಬ್ದ ಹಾಗೂ ಸಾಹಿತ್ಯದ ಪುಟಗಳಲ್ಲಿ ಇಲ್ಲ, ಅದು ಮಾಡುವ ಕೆಲಸದಲ್ಲಿದೆ. ಶಿಕ್ಷಕರ ಮಾತಿನಲ್ಲಿ ನಂಬಿಕೆ ಮೂಡಿದರೆ ಮಕ್ಕಳಲ್ಲಿ ಕಲಿಕಾ ಮನೋಭಾವ ವೃದ್ಧಿಸುತ್ತದೆ. ಕರ್ನಾಟಕವಲ್ಲದೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ತೆಲಂಗಾಣ, ಉತ್ತರ ಪ್ರದೇಶ, ಜಾರ್ಖಂಡ್ ಹಾಗೂ ಈಶಾನ್ಯ ರಾಜ್ಯಗಳ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಸಾವಿರಾರು ವಿದ್ಯಾರ್ಥಿಗಳಿಗೆ ಪೂಜ್ಯರು ಸುತ್ತೂರಿನ ವಸತಿ ಶಾಲೆಯಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರವನ್ನು ನೀಡುತ್ತಿರುವುದು ಮಾನವೀಯತೆಯ ಶ್ರೇಷ್ಠ ಕೆಲಸವಾಗಿದೆ ಎಂದರು.

ಪರಮಪೂಜ್ಯ ಜಗದ್ಗುರುಗಳವರು ಕನ್ನಡ ನಾಡು ಮತ್ತು ದೇಶವನ್ನು ಅಭಿವೃದ್ಧಿ ಮಾಡಬೇಕು ಎಂಬ ಬಯಕೆಯನ್ನು ಹೊಂದಿರುವ ಶ್ರೀ ನಾರಾಯಣಮೂರ್ತಿ ಮತ್ತು ಶ್ರೀಮತಿ ಸುಧಾ ಮೂರ್ತಿ ದಂಪತಿಗಳು ಶಿಕ್ಷಕರಿಗೆ ಆದರ್ಶ ಮಾದರಿಯಾಗಿದ್ದಾರೆ. ಶಿಕ್ಷಕರಲ್ಲಿ ಶ್ರದ್ಧೆ, ಧೈರ್ಯ, ನಂಬಿಕೆ ಇದ್ದರೆ ಜಗತ್ತನ್ನೇ ಗೆಲ್ಲುವ ಮಕ್ಕಳನ್ನು ಸೃಷ್ಟಿಸಲು ಸಾಧ್ಯ. ಸಂಸ್ಕೃತಿ ಮತ್ತು ಸಂಸ್ಕಾರ ಶ್ರೇಷ್ಠವಾದದ್ದು. ಇದನ್ನು ಪ್ರತಿಯೊಬ್ಬರೂ ಹೊಂದಿರಬೇಕು.

ಇಡೀ ಜಗತ್ತನ್ನೇ ಸುತ್ತಿ ನೋಡಿದರೂ ಭಾರತದಂತಹ ದೇಶ ಮತ್ತೊಂದಿಲ್ಲ, ಇಲ್ಲಿರುವವರೇ ಧನ್ಯರು. ಉತ್ತಮ ಸಂಸ್ಕಾರದಿಂದ ಜಗತ್ತಿಗೆ ಬೇಕಾದುದನ್ನು ಕೊಡಲು ಸಾಧ್ಯ. ವೃತ್ತಿಯಲ್ಲಿ ಪ್ರಾವೀಣ್ಯ ಮತ್ತು ವಿಶ್ವಾಸದಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಶ್ರೀ ನಾರಾಯಣ ಮೂರ್ತಿ ಮತ್ತು ಕುಟುಂಬದವರು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆಗೆ ಸಲ್ಲಿಸಿದ ವಿಶೇಷ ಪೂಜೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಶ್ರೀಮತಿ ಸುಧಾ ಮೂರ್ತಿಯವರ ಸಹೋದರ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಖಗೋಳ ವಿಜ್ಞಾನಿಗಳಾಗಿರುವ ಶ್ರೀ ಶ್ರೀನಿವಾಸ ಕುಲಕರ್ಣಿಯವರು, ವಿಶ್ವ ಹಿಂದೂ ಪರಿಷತ್‌ನ ಶ್ರೀ ಕೇಶವಮೂರ್ತಿ ಮೊದಲಾದವರು ಉಪಸ್ಥಿತರಿದ್ದರು. ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

**ಧೈರ್ಯವಿದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು**

ಧೈರ್ಯವಿದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು ಎಂದು ಇನ್ಫೋಸಿಸ್ ಫೌಂಡೇಷನ್‌ನ ಸಂಸ್ಥಾಪಕರಾದ ಡಾ. ಸುಧಾ ಮೂರ್ತಿಯವರು ಮೇ 23ರಂದು ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜು ನವಜ್ಯೋತಿ ಸಭಾಂಗಣದಲ್ಲಿ ಜಿಲ್ಲಾ ಮತ್ತು ನಗರ ಘಟಕ ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಅಕ್ಕಮಹಾದೇವಿ ಜಯಂತಿಯನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಮಹಿಳೆಯರು ಬದುಕಿನಲ್ಲಿ ಧೈರ್ಯಗುಂದಿದರೆ ಅಕ್ಕಮಹಾದೇವಿಯನ್ನು ನೆನಪಿಸಿಕೊಳ್ಳಬೇಕು. ಎಂಟು ನೂರು ವರ್ಷಗಳ ಹಿಂದೆ ಒಬ್ಬ ಮಹಿಳೆ ತನ್ನ ಜೀವನದ ಗುರಿ ತಿಳಿದುಕೊಂಡು ಏಕಾಂಗಿಯಾಗಿ ಕಲ್ಯಾಣ ತಲುಪಿದಳು. ಅನುಭವ ಮಂಟಪದಲ್ಲಿ ವಚನ ಬರೆದು, ಹೇಳಿದ ಮಾತುಗಳು ಈ ಕಾಲಕ್ಕೂ ಪ್ರಾತಃ ಸ್ಮರಣಿಯವಾಗಿವೆ. ಅಕ್ಕ ದಿಟ್ಟತನದಿಂದ ಅನ್ಯಾಯವನ್ನು ಎದುರಿಸಿ ಶ್ರೇಷ್ಠ ಸಾಹಿತ್ಯ ನೀಡಿದ್ದಾರೆ. ಅಕ್ಕನನ್ನು ತಿಳಿಯುವ ಸಲುವಾಗಿ ಕದಳಿ ಮತ್ತು ಕಲ್ಯಾಣಕ್ಕೂ ಹೋಗಿ ಅರಿಯುವ ಪ್ರಯತ್ನ ಮಾಡಿದೆ. ವಚನಗಳನ್ನು ಕಲಿತು, ಅರ್ಥವನ್ನು ತಿಳಿದುಕೊಂಡು ಜೀವನದಲ್ಲಿ ಅನುಷ್ಠಾನಕ್ಕೆ ತಂದಿದ್ದೇನೆ. ತಾಯಂದಿರು ಮಕ್ಕಳಿಗೆ ವಚನ ಹೇಳಿಕೊಡಬೇಕು. ಈಗ ಅರ್ಥವಾಗದಿದ್ದರೂ ಭವಿಷ್ಯದಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ತಿಳಿಸಿದರು.

ವಿಶ್ರಾಂತ ಕುಲಪತಿಗಳಾದ ಡಾ. ಎಸ್. ಇಂದುಮತಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ.ಎ. ನೀಲಾಂಬಿಕಾ ವೀಲ್‌ಛೇರ್ ಕೊಡುಗೆಯಾಗಿ ನೀಡಿದರು. ಡಾ. ರಾಧಾ ಮಲ್ಲಪ್ಪ ದತ್ತಿನಿಧಿ ಸ್ಥಾಪಿಸಿದರು. ಶ್ರೀಮತಿ ಶೈಲಾ ಸಿದ್ರಾಮಪ್ಪ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಸ್ವಾಗತಿಸಿದರು. ಡಾ. ಭ. ನಾಗರಾಜು ಕವನ ವಾಚಿಸಿದರು. ಶ್ರೀಮತಿ ರಾಜೇಶ್ವರಿ ಮಲ್ಲಿಕಾರ್ಜುನಪ್ಪ ವಂದಿಸಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಕಾರ್ಯಕ್ರಮ ನಿರೂಪಿಸಿದರು.

**ಶರಣರ ಆದರ್ಶಗಳು ಮನೆ ಮನೆಗೂ ತಲುಪುವಂತಾಗಬೇಕು**


ಶರಣರ ಆದರ್ಶಗಳು ಮನೆ ಮನೆಗೂ ತಲುಪುವಂತಾಗಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಶ್ರೀ ಸುತ್ತೂರು ಕ್ಷೇತ್ರದಲ್ಲಿ 28ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಏರ್ಪಡಿಸಿದ್ದ ಪದಾಧಿಕಾರಿಗಳ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಶಾಖೆಗಳನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಿಂದ ಸ್ಥಾಪಿಸಲಾಗಿದೆ. ಶರಣರ ವಚನಗಳ ತಿರುಳನ್ನು ಜನರಿಗೆ ಮುಟ್ಟಿಸುವ ಮಹತ್ಕಾರ್ಯವನ್ನು ಮಾಡುತ್ತಿವೆ. ಕಾಲ ಬದಲಾದಂತೆ ಅದಕ್ಕೆ ಅನುಗುಣವಾಗಿ ಪೂರಕವಾದ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಯುವಕರಿಗೆ ಮಾರ್ಗದರ್ಶನ ಮಾಡುವುದು ಅಗತ್ಯವಿದೆ. ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದರೂ ಶ್ರದ್ಧೆ, ಪ್ರಾಮಾಣಿಕತೆ ಹಾಗೂ ಬದ್ಧತೆಯಿಂದ ಮಾಡಬೇಕು. ಲೋಪ ದೋಷಗಳಾಗದಂತೆ ಎಚ್ಚರಿಕೆ ವಹಿಸಬೇಕು. ಪ್ರತಿಯೊಂದು ಸೂಕ್ಷ್ಮ ವಿಚಾರಗಳನ್ನೂ ಗಮನಿಸಬೇಕು ಹಾಗೂ ಶಿಸ್ತಿನಿಂದ ನಡೆಯುವಂತೆ ನೋಡಿಕೊಳ್ಳಬೇಕು. ಈ ರೀತಿಯ ಕಾರ್ಯಾಗಾರಗಳಲ್ಲಿ ಪರಸ್ಪರ ವಿಚಾರ ವಿನಿಮಯ ದಿಂದ ಅನುಭವಗಳನ್ನು ಹಂಚಿಕೊಳ್ಳಬಹುದು. ನಾನು ಏನನ್ನೂ ತಿಳಿದಿಲ್ಲ, ಕಡಿಮೆ ತಿಳಿದುಕೊಂಡಿದ್ದೇನೆ ಎಂದರೆ ಜೀವನವು ಸುಖಮಯವಾಗಿರುತ್ತದೆ. ವಿಚಾರಗಳನ್ನು ಹೆಚ್ಚು ಹೆಚ್ಚು ತಿಳಿದುಕೊಳ್ಳುವ ಮನಸ್ಸು ಪ್ರತಿಯೊಬ್ಬರಿಗೂ ಇರಬೇಕು ಎಂದು ಹೇಳಿದರು.

ಪರಿಷತ್ತಿನ ಅಧ್ಯಕ್ಷರಾದ ಶ್ರೀ ಅಪ್ಪಾರಾವ್ ಅಕ್ಕೋಣೆಯವರು ರಾಜ್ಯದಾದ್ಯಂತ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಸಕ್ರಿಯ ಚಟುವಟಿಕೆಗಳಿಂದ ಕೂಡಿರಬೇಕು, ಪದಾಧಿಕಾರಿಗಳು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ನಿರಂತರವಾಗಿ ಇಂತಹ ಕಾರ್ಯಾಗಾರಗಳನ್ನು ಏರ್ಪಡಿಸುವ ಮೂಲಕ ಶ್ರೀ ಸುತ್ತೂರು ಮಠವು ಅನನ್ಯ ಸೇವೆ ಒದಗಿಸುತ್ತಿದೆ. ಈ ಕಾರ್ಯಾಗಾರವು ಯಶಸ್ವಿಯಾಗಿ ಜರುಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರೊ. ಸಿ. ನಾಗಣ್ಣ, ಶ್ರೀ ಜಂಬುನಾಥ ಕಂಚ್ಯಾಣಿ, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಮ.ಗು. ಸದಾನಂದಯ್ಯ, ಶ್ರೀಮತಿ ಸುಶೀಲಾ ಸೋಮಶೇಖರ್, ಶ್ರೀ ಅಪ್ಪಾರಾವ ಅಕ್ಕೋಣೆ, ಡಾ. ಸಿ. ಸೋಮಶೇಖರ್‌ರವರುಗಳು ಉಪನ್ಯಾಸ ನೀಡಿದರು. ಶ್ರೀಮತಿ ಉಷಾ ಹಿರೇಮಠ್ ಹಾಗೂ ಶ್ರೀ ರವೀಶ್ ಕ್ಯಾತನಬೀಡು ಅನಿಸಿಕೆಗಳನ್ನು ಹಂಚಿಕೊಂಡರು.

ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ನಾಗರಾಜಮೂರ್ತಿ ಸ್ವಾಗತಿಸಿದರು. ಬೆಳಗಾವಿಯ ಕದಳಿ ಮಹಿಳಾ ವೇದಿಕೆಯ ಜಿಲ್ಲಾಧ್ಯಕ್ಷರಾದ ಶ್ರೀಮತಿ ಪ್ರೇಮಕ್ಕ ಅಂಗಡಿ ವಂದಿಸಿದರು. ಶ್ರೀಮತಿ ಕಾತ್ಯಾಯಿನಿ ಕೋಲಾರ್ ಪ್ರಾರ್ಥಿಸಿದರು. ಶ್ರೀ ಶ್ರೀಶೈಲ ಪಟ್ಟಣಶೆಟ್ಟಿರವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಾಗಾರದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ 120ಕ್ಕೂ ಹೆಚ್ಚು ಪರಿಷತ್ತಿನ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದರು. □

# ಪ್ರಸಾದ



**ಕೃತಿ-ಸ್ವೀಕೃತಿ**

---

**ನಾವು ನಡೆದ ಹಾದಿ**
ಡಾ. ಗೊ.ರು ಚನ್ನಬಸಪ್ಪ
ಪ್ರ.: ಗೊ.ರು.ಚ. ಗ್ರಾಮವಿಕಾಸ ಪ್ರತಿಷ್ಠಾನ
ಗೊಂಡೇದಹಳ್ಳಿ, ಚಿಕ್ಕಮಗಳೂರು ಜಿಲ್ಲೆ
ಪು: 308, ಬೆಲೆ: 200/–

**ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು**
ಶ್ರೀ ಎನ್. ಪದ್ಮನಾಭರಾವ್
ಪ್ರ. ಪದ್ಮಾಲಯ ಪ್ರಕಾಶನ
ಕಲ್ಯಾಣನಗರ, 2ನೆ ಹಂತ
ಬೆಂಗಳೂರು
ಪು: 140, ಬೆಲೆ: 130/–

**ನಮನಾಂಜಲಿ**
ಮೃತ್ಯಂಜಯಸ್ವಾಮಿ ಹಿರೇಮಠ
ಪ್ರ. ರಾಜಗುರು ಪ್ರಕಾಶನ
ಗಂದಿಗವಾಡ, ಖಾನಾಪುರ ತಾ.
ಬೆಳಗಾವಿ ಜಿಲ್ಲೆ
ಪು: 260, ಬೆಲೆ: 325/–

**ಕರುನಾಡ ಭಾಷಾ ಭಾವೈಕ್ಯತೆ**
ಪ್ರಕಾಶ ಗಿರಿಮಲ್ಲನವರ
ಪ್ರ. ಶ್ರೀ ಗುರು ಚನ್ನಬಸವೇಶ್ವರ
ಗ್ರಂಥಮಾಲೆ, ಮೋಟಗಿ ಮಠ
ಅಥಣಿ
ಪು: 120. ಬೆಲೆ: 120/–

**ತೊಟ್ಟು**
ಡಾ. ಬಸವರಾಜ ಸಾದರ
ಪ್ರ. ಅಕ್ಕ ಪ್ರಕಾಶನ, ಕುಣಿಗಲ್
ಪು: 232, ಬೆಲೆ: 250/–

**ಅಮೃತ ಭಾರತಿ**
ಶ್ರೀ ರಂಗನಾಥ ಜಿ. ಅಂಬಿಗೇರ
ಶ್ರೀ ಸೋಮಲಿಂಗಪ್ಪ ವಿ.ಯು.
ಶ್ರೀ ದೇವರಾಜು ಫ. ಕಣ್ಣೂರ
ಪ್ರ. ಸ್ಫೂರ್ತಿ ಪ್ರಕಾಶನ
ತಾವರಗೇರಾ, ಕುಷ್ಟಗಿ ತಾ.
ಕೊಪ್ಪಳ ಜಿ.
ಪು: 112, ಬೆಲೆ: 110/–

**ಅಂತರಿಕ್ಷದಲ್ಲೂ ಅಧ್ಯಾತ್ಮ**
ವಾಯುಸೇನೆಯೊಳಗಿನ ವೀರ ಸಂತ
ಪ್ರ. ಸಂವಹನ
ಶಿವರಾಂಪೇಟೆ, ಮೈಸೂರು
ಪು: 152, ಬೆಲೆ: 150/–

**ಮಹಾನ್ ದಾರ್ಶನಿಕ ಬಸವಣ್ಣ**
**(ಜೀವನ–ಸಾಧನೆ–ವಿಚಾರಗಳು)**
ಪ್ರೊ. ಸಿದ್ಧಣ್ಣ ಲಂಗೋಟಿ
ಪ್ರ. ಬಸವ ಸಮಿತಿ, ಬೆಂಗಳೂರು
ಪು: 180, ಬೆಲೆ: 100/–

**ಸುವಿಚಾರ ಸೌರಭ**
**(ಪ್ರಕಟಿತ ಲೇಖನಗಳ ಸಂಕಲನ)**
ವಿ. ಕೇಶವಮೂರ್ತಿ
ಬೋಗಾದಿ 2ನೇ ಹಂತ
ಮೈಸೂರು
ಪು: 264, ಬೆಲೆ: 200/–

**ನೆಲೆಗಾಣದ ಬದುಕು**
ಡಾ. ಭಾರತಿ ಕೆ. ಬಿಜಾಪೂರ
ಪ್ರ. ವಿಮೋಚನಾ ಪ್ರಕಾಶನ, ಅಥಣಿ
ಪು: 310, ಬೆಲೆ: 300/–

**ಶರಣದ ಧಾರ್ಮಿಕ ಸಿದ್ಧಾಂತಗಳು**
ಡಾ. ಬಸವರಾಜ ಸಬರದ
ಪ್ರ. ಬಸವಧರ್ಮ ಪ್ರಸಾರ ಸಂಸ್ಥೆ
ಭಾಲ್ಕಿ, ಬೀದರ್
ಪು: 160, ಬೆಲೆ: 100/–

# ಲೇಖಕರ ವಿಳಾಸ

**ಡಾ. ಎಂ.ಎನ್. ನಂದೀಶ್ ಹಂಚೆ**
# 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ವೈ.ಸಿ. ಭಾನುಮತಿ**
# 1123, ಕೇಶವದೀಪ
ಲಲಿತಾದ್ರಿ 1ನೇ ಕ್ರಾಸ್
ಕುವೆಂಪುನಗರ, ಮೈಸೂರು 570023
ಮೊ: 9449828366

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಪ್ರಾಧ್ಯಾಪಕರು, ಮುಖ್ಯಸ್ಥರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು 570023
ಮೊ: 9845309081

**ವೆಂಕಟೇಶ ಕೆ. ಜನಾದ್ರಿ, ಕನಕಗಿರಿ**
ಸಹಾಯಕ ಲೆಕ್ಕಾಧಿಕಾರಿ
ಈಕರಸಾ ಸಂಸ್ಥೆ
ಕೇಂದ್ರ ಕಛೇರಿ
ಕಲಬುರ್ಗಿ 585102
ಮೊ: 9945330492

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ್ ಆಯುರ್ವೇದ
ಚಿಕಿತ್ಸಾಲಯ, ಬಿ.ಹೆಚ್. ರಸ್ತೆ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ತುಮಕೂರು 572102
ಮೊ : 9880996196

**ಪ್ರೊ. ಮೊರಬದ ಮಲ್ಲಿಕಾರ್ಜುನ**
# 3/1288, 12ನೇ ಮೇನ್
ವಿಜಯನಗರ 4ನೇ ಹಂತ
ಮೈಸೂರು 570017
ಮೊ : 9986137389

ಹಿಂಬದಿ ಪುಟದ ಚಿತ್ರ

ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜು ನವಜ್ಯೋತಿ ಸಭಾಂಗಣದಲ್ಲಿ ಜಿಲ್ಲಾ ಮತ್ತು ನಗರ ಘಟಕ ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಅಕ್ಕಮಹಾದೇವಿ ಜಯಂತಿಯನ್ನು ಡಾ. ಸುಧಾ ಮೂರ್ತಿಯವರು ಉದ್ಘಾಟಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಡಾ. ಎಸ್. ಇಂದುಮತಿ, ಶ್ರೀ ಮ.ಗು. ಸದಾನಂದಯ್ಯ, ಶ್ರೀ ಹೆಳವರಹುಂಡಿ ಸಿದ್ದಪ್ಪ ಮತ್ತು ಶ್ರೀಮತಿ ಜಯಾಗೌಡವರುಗಳಿದ್ದಾರೆ (23 ಮೇ 2023)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಶಿವಾನುಭವ ದಾಸೋಹದ 300ನೇ ಉಪನ್ಯಾಸವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಿರಿಯ ಸಾಹಿತಿಗಳಾದ ಪ್ರೊ. ಹೆಚ್.ಎಸ್. ಶಿವಪ್ರಕಾಶ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವಿಶ್ವನಾಥ್ ಪಿ. ಹಿರೇಮಠ ಹಾಗೂ ಪ್ರಾದೇಶಿಕ ಹೆಚ್ಚುವರಿ ಆಯುಕ್ತರಾದ ಶ್ರೀ ಪಿ. ಶಿವರಾಜುರವರಿದ್ದಾರೆ (29 ಏಪ್ರಿಲ್ 2023)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರು ಜೆಎಸ್ಎಸ್ ಸಂಸ್ಥೆಗಳ ಶಿಕ್ಷಕರುಗಳನ್ನು ಉದ್ದೇಶಿಸಿ ಮಾತನಾಡಿದರು. ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕರಾದ ಡಾ. ನಾರಾಯಣ ಮೂರ್ತಿ, ಖಗೋಳ ವಿಜ್ಞಾನಿಗಳಾದ ಶ್ರೀ ಶ್ರೀನಿವಾಸ ಕುಲಕರ್ಣಿಯವರುಗಳಿದ್ದಾರೆ (24 ಮೇ 2023)



ದುಬೈನಲ್ಲಿರುವ ಜೆಎಸ್‌ಎಸ್ ಪ್ರೈವೇಟ್ ಸ್ಕೂಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಹಾಗೂ ನಿವೃತ್ತ ಮೇಜರ್ ಜನರಲ್ ನಸೀರ್ ಅಲ್ ರಜೂಕಿಯವರು ಡಿಜಿಟಲ್ ಕೃತಿ ಬಿಡುಗಡೆ ಮಾಡಿದರು. ಶ್ರೀಮತಿ ಚಿತ್ರಾ ಶರ್ಮ, ಶ್ರೀ ಎಸ್.ಪಿ. ಮಂಜುನಾಥ್, ಡಾ. ಬಿ. ಸುರೇಶ್, ವಿದ್ಯಾರ್ಥಿ ಪ್ರತಿನಿಧಿಗಳು, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್. ಪುಟ್ಟಸುಬ್ಬಪ್ಪ ಹಾಗೂ ಶ್ರೀ ಗೋವಿಂದರಾವ್ ನಾಯಕ್‌ರವರುಗಳಿದ್ದಾರೆ



ಮೈಸೂರು ರೋಟರಿ ಪಶ್ಚಿಮ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಎಸ್. ರಾಮಪ್ರಸಾದ್‌ರವರ 80ನೇ ವರ್ಷದ ಅಭಿನಂದನ ಸಮಾರಂಭ ನೆರವೇರಿತು. ಶ್ರೀ ಎಂ. ಮುತ್ತುಸ್ವಾಮಿ, ಶ್ರೀ ಎಂ. ಚಂದ್ರಶೇಖರ್, ಡಾ.ಎಂ.ಆರ್. ರವಿ, ಶ್ರೀ ಮಡ್ಡೀಕೆರೆ ಗೋಪಾಲ್, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಡಾ. ಜ್ಯೋತಿ ಶಂಕರ್, ಶ್ರೀ ರಂಗನಾಥ್ ಮೈಸೂರುರವರುಗಳಿದ್ದಾರೆ (21 ಮೇ 2023)



ಸಚಿವರಾದ ಶ್ರೀ ಎಂ.ಬಿ. ಪಾಟೀಲ್‌ರವರೊಡನೆ ಅವರ ಧರ್ಮಪತ್ನಿ ಶ್ರೀಮತಿ ಆಶಾ ಪಾಟೀಲ್‌ರವರು ಶ್ರೀ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (22 ಮೇ 2023)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಕಾರ್ಯಾಗಾರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಸುಶೀಲ ಸೋಮಶೇಖರ್, ಶ್ರೀ ಮ.ಗು. ಸದಾನಂದಯ್ಯ, ಶ್ರೀ ಅಪ್ಪಾರಾವ್ ಅಕ್ಕೋಣೆ, ಡಾ. ಸಿ. ಸೋಮಶೇಖರ್ ಹಾಗೂ ಶ್ರೀಮತಿ ಸರ್ವಮಂಗಳಾ ಸೋಮಶೇಖರ್‌ರವರುಗಳಿದ್ದಾರೆ (27 ಮೇ 2023)

Registered with the Registrar of Newspapers in India Under No. 50622 / 1986
'Prasada' Monthly, Vol. 38 Issue No. 5, May 2023



ISSN 2583-7648

ಬಿಡಿ ಪ್ರತಿ : ರೂ.10/-

e-mail: prasadamagazine@gmail.com * www.jssonline.org